# ಯುಗಶ್ರೀ

* ಅಹ್ಮದಿಯತ್ - ಯಥಾರ್ಥ ಇಸ್ಲಾಮ್
* ಪ್ರತಿಜ್ಞೆಯನ್ನು ಈಡೇರಿಸಿರಿ
* ಮುಹಮ್ಮದ್ ಪೈಗಂಬರ್ ಬೈಬಲ್‌ನಲ್ಲಿ
* ಅಹ್ಮದಿಯಾ ಖಲೀಫರ ಭಾರತ ಸಂದರ್ಶನ
* ಧರ್ಮದ ನಾಮದಲ್ಲಿ ರಕ್ತಪಾತ

ಮಾರ್ಚ್ 2009

ತ್ರೈಮಾಸಿಕ
ಬೆಲೆ ರೂ. 5/-

"ಅವರಲ್ಲಿ ಹೆಚ್ಚಿನವರ ಸಮಾಲೋಚನೆಗಳಲ್ಲಿ ಯಾವ ಒಳಿತೂ ಇಲ್ಲ - ದಾನಧರ್ಮ ಮಾಡುವುದರ ಬಗ್ಗೆ ಅಥವಾ ಸತ್ಕಾರ್ಯಗೈಯುವುದರ ಬಗ್ಗೆ ಅಥವಾ ಜನರೆಡೆಯಲ್ಲಿ ಸಾಮರಸ್ಯ ಏರ್ಪಡಿಸುವ ಬಗ್ಗೆ ಮಾಡುವ ಸಮಾಲೋಚನೆಗಳ ಹೊರತು. ಅಲ್ಲಾಹನ ಸಂತೃಪ್ತಿಯನ್ನು ಬಯಸಿ ಯಾವನಾದರೂ ಹಾಗೆ ಮಾಡಿದರೆ ನಾವು ಆತನಿಗೆ ಮಹತ್ತರವಾದ ಪ್ರತಿಫಲವನ್ನು ನೀಡುವೆವು."

ಪವಿತ್ರ ಖುರ್‌ಆನ್ (4 :115)

# ಯುಗರಶ್ಮಿ

ತ್ರೈಮಾಸಿಕ

10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ : ರೂ.5/- ವಾರ್ಷಿಕ ಚಂದಾ : ರೂ.20/- ಅಂಚೆ ಮೂಲಕ : ರೂ.30/-


## ವಿಷಯ ಸೂಚಿಕೆ


| | ಪುಟ |
|---|---|
| ★ ಮುಹಮ್ಮದ್ ಪೈಗಂಬರ್(ಸ) ಉಂಟುಮಾಡಿದ ಪರಿವರ್ತನೆ | 1 |
| ★ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು | 2 |
| ★ ಅಹ್ಮದಿಯತ್ – ಯಥಾರ್ಥ ಇಸ್ಲಾಮ್ | 3 |
| ★ ಪ್ರತಿಜ್ಞೆಯನ್ನು ಈಡೇರಿಸಿರಿ | 8 |
| ★ ಮುಹಮ್ಮದ್ ಪೈಗಂಬರ್(ಸ) ಬೈಬಲ್‌ನಲ್ಲಿ | 13 |
| ★ ಪಾಕ್ ಮರೆಯಲಾಗದ ವಿಜ್ಞಾನಿ – ಅಬ್ದುಸ್ ಸಲಾಮ್ | 20 |
| ★ ಇಸ್ಲಾಮಿನ ಪ್ರಾಥಮಿಕ ಪಾಠಗಳು | 21 |
| ★ ಫೆಲಸ್ತೀನರಿಗೋಸ್ಕರ ಪ್ರಾರ್ಥಿಸಿರಿ | 23 |
| ★ ಉಗ್ರವಾದಿಗಳಿಂದ ಭಯೋತ್ಪಾದನೆ ನಿರ್ಮೂಲವೇ? | 23 |
| ★ ಅಹ್ಮದಿಯಾ ಖಲೀಫರ ಭಾರತ ಸಂದರ್ಶನ | 24 |
| ★ ಸಂಪಾದಕರಿಗೆ ಪತ್ರ | 26 |
| ★ ಅಹ್ಮದಿಯರಿಗೆ ಸುತ್ತೋಲೆ | 27 |
| ★ ಪುಸ್ತಕ ವಿಭಾಗ : ಧರ್ಮದ ನಾಮದಲ್ಲಿ ರಕ್ತಪಾತ | 29 |



**Statement about ownership and other particulars about the Newspaper**
**Yugarashmi Quarterly**
(Form IV See Rule 8)

| | | |
|---|---|---|
| 1. Place of Publication | : | Mangalore |
| 2. Period of its Publication | : | Quarterly |
| 3. Printer's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor, Ansari Road, Bunder, Mangalore - 575 001 |
| 4. Publisher's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor, Ansari Road, Bunder, Mangalore - 575 001 |
| 5. Editor's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor, Ansari Road, Bunder, Mangalore - 575 001 |
| 6. Name and address of individuals who own the newspaper and partners or shareholders holding more than one percent of the capital | | Jamath Ahmadiyya 10-23-1008/1, 1st Floor, Ansari Road, Bunder, Mangalore - 575 001 |

I, Muhammad Yusuf hereby declare that the particulars given above are true to the best of my knowledge and belief.

Date : 01-03-2009

Sd/-
**Muhammad Yusuf**

بسم الله الرحمن الرحيم

نحمده ونصلي على رسوله الكريم


# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 26 | ಮಾರ್ಚ್ 2009 | ಅಮಾನ್ 1388 | ಸಂಚಿಕೆ : 1 |
| --- | --- | --- | --- | --- |


## ಮುಹಮ್ಮದ್ ಪೈಗಂಬರರು(ಸ) ಉಂಟುಮಾಡಿದ ಪರಿವರ್ತನೆ

ಮುಹಮ್ಮದ್ ಪೈಗಂಬರರ(ಸ) ಪ್ರಥಮ ಉದ್ದೇಶ ಅರಬಿಯರನ್ನು ಉದ್ಧರಿಸುವುದಾಗಿತ್ತು. ಮನುಷ್ಯರೆಂದು ಹೇಳಲು ಕಷ್ಟವಾಗುವ ರೀತಿಯಲ್ಲಿ ಅರಬಿಯರು ಅಂದು ಬಹು ದುಷ್ಟರಾಗಿದ್ದರು. ಅವರೆಡೆಯಲ್ಲಿ ಕಾಣದ ಒಂದು ದುಷ್ಕರ್ಮವಾಗಲೀ ಅವರೆಡೆಯಲ್ಲಿ ರೂಢಿಯಲ್ಲಿಲ್ಲದ ಒಂದು ದುರಾಚಾರವಾಗಲೀ ಇರಲಿಲ್ಲವೆಂದೇ ಹೇಳಬಹುದು. ಕಳ್ಳತನವೂ ದರೋಡೆಯೂ ಅವರ ಕಸಬಾಗಿತ್ತು. ನಿರಪರಾಧಿಗಳನ್ನು ಕೊಲ್ಲುವುದೆಂಬುದು ಅವರಿಗೆ ಕ್ರಿಮಿಕೀಟಗಳನ್ನು ಕಾಲಿನಿಂದ ಒರಸುವುದಕ್ಕೆ ತುಲ್ಯವಾಗಿತ್ತು. ಅವರು ಅನಾಥ ಮಕ್ಕಳನ್ನು ಕೊಂದು ಸೊತ್ತನ್ನು ಅಪಹರಿಸುತ್ತಿದ್ದರು. ಸ್ವಂತ ಹೆಣ್ಮಕ್ಕಳನ್ನು ಜೀವಸಹಿತ ಅಗೆದು ಹೂಳುತ್ತಿದ್ದರು. ವ್ಯಭಿಚಾರದ ಕುರಿತು ಅವರು ಅಭಿಮಾನಿಸುತ್ತಿದ್ದರು. ತಮ್ಮ ಕವನಗಳಲ್ಲಿ ಅಂತಹ ಅಶ್ಲೀಲ ಸಂಗತಿಗಳ ಕುರಿತು ಪ್ರಸ್ತಾಪಿಸುತ್ತಿದ್ದರು. ಒಂದು ಕುಟುಂಬ ಕೂಡ ಮದ್ಯಪಾನದಿಂದ ಹೊರತಿಲ್ಲದ ರೀತಿಯಲ್ಲಿ ಈ ಕೆಟ್ಟ ಚಾಳಿಯು ಅವರೆಡೆಯಲ್ಲಿ ಪ್ರಬಲವಾಗಿತ್ತು. ಜೂಜಾಟದಲ್ಲಿ ಅವರು ಬೇರೆ ಯಾವುದೇ ರಾಜ್ಯದವರಿಗೂ ಮಿಕ್ಕಿದವರಾಗಿದ್ದರು. ಸಂಕ್ಷಿಪ್ತವಾಗಿ, ಅವರು ಮೃಗಗಳಿಗಿಂತ ನಿಕೃಷ್ಟರಾಗಿದ್ದರು. ಮಾತ್ರವಲ್ಲ, ಸರ್ಪಗಳಿಗೂ ತೋಳಗಳಿಗೂ ಸಹ ನಾಚಿಕೆಯಾಗುವ ರೀತಿಯಲ್ಲಿ ಅವರ ಜೀವನ ಬಹಳ ದುಷ್ಟವಾಗಿತ್ತು.

ಹೀಗಿದ್ದ ಅರಬಿಯರನ್ನು ಉದ್ಧರಿಸಲು ಮುಹಮ್ಮದ್ ಪೈಗಂಬರರು(ಸ) ಉದ್ಯುಕ್ತರಾದರು. ಅವರು ತನ್ನ ಆಧ್ಯಾತ್ಮಿಕ ಪ್ರಭಾವದಿಂದ ಅವರಿಗೆ ಸಂಸ್ಕಾರವನ್ನೂ ನವಚೈತನ್ಯವನ್ನೂ ಪ್ರದಾನ ಮಾಡಿ ಅವರನ್ನು ಪರಿಶುದ್ಧರನ್ನಾಗಿ ಮಾಡಲು ಪರಿಶ್ರಮಿಸಿದಾಗ ಅಲ್ಪಕಾಲದೊಳಗೆ ಅವರಲ್ಲಿ ಮಹತ್ತಾದೊಂದು ಪರಿವರ್ತನೆಯುಂಟಾಯಿತು. ಅವರು ಕಿರಾತಾವಸ್ಥೆಯಿಂದ ಮನುಷ್ಯರಾಗಿ ಪರಿವರ್ತಿತರಾಗಿ, ನಂತರ ಸಭ್ಯರಾಗಿಯೂ ದೇವಭಕ್ತರಾಗಿಯೂ ಮಾರ್ಪಟ್ಟರು. ಕಡೆಗೆ ದೇವಮಾರ್ಗದಲ್ಲಿ ಯಾವುದೇ ರೀತಿಯ ದೌರ್ಜನ್ಯಗಳನ್ನು ಸಹಿಸಲು ಪ್ರಾಪ್ತರಾಗಿ ದೇವಾನುರಾಗದಲ್ಲಿ ಮಗ್ನರಾದರು. ನಾನಾ ರೀತಿಯ ಯಾತನೆಗಳಿಗೆ ಅವರು ಗುರಿಯಾದರು. ಚಾಟಿಯಿಂದ ಅತಿ ದಾರುಣವಾದ ರೀತಿಯಲ್ಲಿ ಅವರು ಪ್ರಹರಿಸಲ್ಪಟ್ಟರು; ಸುಡುವ ಮರಳಿನಲ್ಲಿ ಅವರು ಎಳೆದೊಯ್ಯಲ್ಪಟ್ಟರು; ಸಾಯಲಿಕ್ಕಾಗುವ ಮಟ್ಟಿನಲ್ಲಿ ಹೊಟ್ಟೆಗಿಲ್ಲದಾದರು. ಆದರೆ ಇಂತಹ ಯಾವ ಆಪತ್ಕಾಲದಲ್ಲೂ ಅವರು ಅವಿಚಲಿತರಾಗಿ ದೇವಮಾರ್ಗದಲ್ಲಿ ಮುನ್ನೇರಿಕೊಂಡೇ ಹೋದರು. ಹಲವರ ಮಕ್ಕಳು, ಮಡಿಗಳು ಅವರ ಕಣ್ಮುಂದೆ ವಧಿಸಲ್ಪಟ್ಟರು; ಅನೇಕರ ಶಿರಗಳು ಅವರ ಅಕ್ಕರೆಯ ಸಂತಾನಗಳ ಕಣ್ಣೆದುರಿನಲ್ಲೇ ಹಾರಿಸಲ್ಪಟ್ಟವು. ಹೀಗೆ ಕಠಿಣ ಯಾತನೆಗಳಿಂದ ಪೀಡಿತರಾದಾಗ, ಅವರು ಅಚಂಚಲಿತರಾಗಿ ತಮ್ಮ ಜೀವವನ್ನು ದೇವಮಾರ್ಗದಲ್ಲಿ ಬಲಿಯರ್ಪಿಸಿದರು. ಈ ಸಂಭವಗಳ ಕುರಿತು ನೆನೆಸುವಾಗ ಕಣ್ಣುಗಳು ಅಶ್ರುವಿನಿಂದ ತುಂಬಿಬರುತ್ತವೆ. ಅವರು ಹೀಗೆ ಇಸ್ಲಾಮಿನೆಡೆಗೆ ಆಕರ್ಷಿತರಾಗಲಿಕ್ಕೆ ಅವರ ಹೃದಯಗಳನ್ನು ಅಷ್ಟೆಲ್ಲಾ ಸ್ವಾಧೀನಪಡಿಸಿದ ಶಕ್ತಿ ಯಾವುದಾಗಿತ್ತು? ಮಕ್ಕಾದ ರಸ್ತೆ ಬೀದಿಗಳಲ್ಲಿ ಏಕಾಕಿಯಾಗಿ ಸಂಚರಿಸುತ್ತಿದ್ದ ಆ ನಿಸ್ಸಹಾಯಕನಾದ ವ್ಯಕ್ತಿಯ ಚರಣಗಳಲ್ಲಿ ಸ್ವಯಂ ಅರ್ಪಿತರಾಗಲು ಪ್ರೇರಿತರಾಗುವಂತೆ ಆಶ್ಚರ್ಯಕರವಾದ ಪರಿವರ್ತನೆ ಅವರಲ್ಲಿ ಉಂಟುಮಾಡಿದ ಆ ವಿಶೇಷ ಶಕ್ತಿ ಯಾವುದಾಗಿತ್ತು? ಅದು ಮುಹಮ್ಮದ್

# ಮುಹಮ್ಮದ್ ಪೈಗಂಬರರ[ಸ] ನುಡಿಮುತ್ತುಗಳು

- ಅಲ್ಲಾಹನು ಹೇಳುತ್ತಾನೆ: ನನ್ನ ಮಿತ್ರನೊಡನೆ ಯಾರಾದರೂ ಶತ್ರುತ್ವ ತೋರಿಸಿದರೆ ನಾನಿದೋ ಅವನೊಡನೆ ಸಮರ ಸಾರುತ್ತೇನೆ. (ಬುಖಾರಿ)
- ಅಲ್ಲಾಹನನ್ನು ಕಾಣಲು ಯಾರಾದರೂ ಬಯಸಿದರೆ ಆತನನ್ನು ಕಾಣಲು ಅಲ್ಲಾಹನು ಸಹ ಬಯಸುತ್ತಾನೆ. (ಬುಖಾರಿ)
- ಪರಲೋಕದಲ್ಲಿ ಮೊದಲು ತೀರ್ಪು ವಿಧಿಸುವುದು ಕೊಲೆ ಅಪರಾಧಗಳ ಕುರಿತಾಗಿರಬಹುದು. (ಬುಖಾರಿ)
- ಮನಸ್ಸಿನಲ್ಲುಂಟಾಗುವ ಕೆಟ್ಟ ಯೋಚನೆಗಳನ್ನು ಕಾರ್ಯರೂಪದಲ್ಲಿ ಅಥವಾ ಮಾತಿನ ರೂಪದಲ್ಲಿ ಹೊರಗೆ ತರದಿದ್ದರೆ ಅಲ್ಲಾಹನು ಆ ಯೋಚನೆಗಳನ್ನು ಕ್ಷಮಿಸುವನು. (ಬುಖಾರಿ)
- ಮನುಷ್ಯನ ಶರೀರದಲ್ಲಿ ಮೊದಲು ಕೊಳೆತು ಹೋಗುವುದು ಹೊಟ್ಟೆಯಾಗಿದೆ. ಆದುದರಿಂದ ಶುದ್ಧವಾದ ಆಹಾರ ತಿನ್ನಲು ಸಾಧ್ಯವಿರುವವರು ಹಾಗೆ ಮಾಡಲಿ. (ಬುಖಾರಿ)
- ಯಾರಾದರೂ ಪ್ರಸಿದ್ಧಿಗೋಸ್ಕರ ಏನಾದರೂ ಸತ್ಕರ್ಮ ಮಾಡಿದರೆ ಅಲ್ಲಾಹನು ಪುನರುತ್ಥಾನ ದಿನದಂದು ಅವನಿಗೆ ಕುಪ್ರಸಿದ್ಧಿಯನ್ನು ಉಂಟುಮಾಡುವನು. (ಬುಖಾರಿ)
- ಒಬ್ಬನು ಮತ್ತೊಬ್ಬನನ್ನು ಸೀಟಿನಿಂದ ಎಬ್ಬಿಸಿ ಅಲ್ಲಿ ಕುಳಿತುಕೊಳ್ಳಬಾರದು. ನೀವು ವಿಶಾಲತೆ ಮತ್ತು ಕ್ಷಮೆ ತೋರಿಸಬೇಕು. (ಬುಖಾರಿ)
- ನೀವು ಮೂವರು ಮಾತ್ರವಿರುವಾಗ ಒಬ್ಬನನ್ನು ಬಿಟ್ಟು ಇನ್ನಿಬ್ಬರು ಗುಟ್ಟು ಮಾತನಾಡಬಾರದು. (ಬುಖಾರಿ)
- ಬೆಂಕಿ ನಿಮ್ಮ ಶತ್ರು. ನೀವು ನಿದ್ರೆ ಮಾಡಲು ಹೋಗುವಾಗ ಅದನ್ನು ನಂದಿಸಿಬಿಡಿರಿ. (ಬುಖಾರಿ)
- ನೀನು ಈ ಲೋಕದಲ್ಲಿ ಒಬ್ಬ ವಿದೇಶ ಸಂಚಾರಿಯ ಹಾಗೆ ಅಥವಾ ಒಬ್ಬ ದಾರಿಹೋಕನಂತೆ ಬದುಕಬೇಕು. (ಬುಖಾರಿ)

---

ಪೈಗಂಬರರಲ್ಲಿ[ಸ] ಪ್ರಸರಿಸಿದ್ದ ಆಧ್ಯಾತ್ಮಿಕ ಪ್ರಭಾವವೂ ದೈವಿಕ ಶಕ್ತಿಯೂ ಅಲ್ಲದೆ ಬೇರೇನೂ ಆಗಿರಲಿಲ್ಲ. ಹೌದು, ಆಧ್ಯಾತ್ಮಿಕವಾದೊಂದು ಕಾಂತಶಕ್ತಿಯೇ ಆಗಿತ್ತು ಅವರನ್ನು ಆ ಅಧಃಪತನ ಮಾರ್ಗದಿಂದ ರಕ್ಷಿಸಿ ಆಧ್ಯಾತ್ಮಿಕ ಔನ್ನತ್ಯಕ್ಕೆ ಎತ್ತಿಕೊಂಡುಹೋದದ್ದು.

ಇಸ್ಲಾಂ ಧರ್ಮ ಸ್ವೀಕರಿಸುವ ಮೊದಲು ಅವರಲ್ಲಿ ಹೆಚ್ಚಿನವರು ಮುಹಮ್ಮದ್ ಪೈಗಂಬರರ[ಸ] ಬದ್ಧ ವೈರಿಗಳೂ ರಕ್ತಪಿಪಾಸಿಗಳೂ ಆಗಿದ್ದರೆಂಬುದು ಆಶ್ಚರ್ಯಕರವಾದ ಸಂಗತಿಯಾಗಿದೆ. ದೀನ ದರಿದ್ರನಾದ ಒಬ್ಬಂಟಿಗನಾದ ಓರ್ವ ವ್ಯಕ್ತಿ ಅವರ ಹೃದಯಗಳಿಂದ ಹಗೆಯನ್ನೂ ಶತ್ರುತ್ವವನ್ನೂ ಸರ್ವಥಾ ಹೋಗಲಾಡಿಸಿ ಅವರನ್ನು ತನ್ನೆಡೆಗೆ ಆಕರ್ಷಿಸಿ, ಅವರು ತಮ್ಮ ಬೆಲೆಬಾಳುವ ವಸ್ತ್ರಾದಿಗಳನ್ನು ಕಿತ್ತೊಗೆದು ಒರಟು ಉಡುಪುಗಳನ್ನು ಧರಿಸಿಕೊಂಡು ಸೇವಕ ಭಾವದಿಂದ ತನ್ನ ಮುಂದೆ ಹಾಜರಾಗುವಂತಹ ರೀತಿಯಲ್ಲಿ ಅವರನ್ನು ಮುಹಮ್ಮದ್ ಪೈಗಂಬರರು[ಸ] ಸ್ವಾಧೀನಪಡಿಸಿದರೆಂಬುದು ಅತ್ಯದ್ಭುತಕರವಾದ ಒಂದು ಸಂಗತಿಯಾಗಿದೆ. ಇದಕ್ಕಿಂತ ಮಿಗಿಲಾದ ಒಂದು ಅದ್ಭುತ ದೃಷ್ಟಾಂತ ಬೇರೊಂದಿದೆ ಎಂದು ನಾನು ಭಾವಿಸುವುದಿಲ್ಲ. **(ಪೈಗಾಮೆ ಸುಲ್ಹ್)**

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**
ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

# ಅಹ್ಮದಿಯತ್ - ಯಥಾರ್ಥ ಇಸ್ಲಾಮ್

## ಪಾರ್ಲಿಮೆಂಟ್ ಮತ್ತು ಹೌಸ್ ಆಫ್ ಲಾರ್ಡ್ಸ್ ಸದಸ್ಯರನ್ನು ಸಂಬೋಧಿಸಿ ಖಲೀಫರ ಭಾಷಣ

**2008 ಜೂನ್ ದಿನಾಂಕ 10ರಂದು ಕ್ವೀನ್ ಎಲಿಜಬೆತ್ ಕಾನ್‌ಫೆರೆನ್ಸ್ ಸೆಂಟರ್, ಲಂಡನ್‌ನಲ್ಲಿ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಖಲೀಫತುಲ್ ಮಸೀಹ್ Vರವರು ಸಚಿವರು, ಪಾರ್ಲಿಮೆಂಟ್ ಮತ್ತು ಹೌಸ್ ಆಫ್ ಲಾರ್ಡ್ಸ್‌ನ ಸದಸ್ಯರು ಮತ್ತು ಬೇರೆ ಅನೇಕ ಬಹುಮಾನ್ಯ ವ್ಯಕ್ತಿಗಳನ್ನು ಸಂಬೋಧಿಸಿ ಮಾಡಿದ ಸಾರವತ್ತಾದ ಭಾಷಣ. ರೈಟ್ ಆನರೇಬಲ್ ಮಿಸ್ಟರ್ ಜ್ಯಾಕ್ ಸ್ಟ್ರಾ, (ಲಾರ್ಡ್ ಚಾನ್ಸೆಲರ್ ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ಫೋರ್ ಜಸ್ಟಿಸ್) ಆ ಸಭೆಯಲ್ಲಿ ಬ್ರಿಟಿಷ್ ಸರಕಾರವನ್ನು ಪ್ರತಿನಿಧೀಕರಿಸಿ ಮಾತನಾಡಿದರು. ಪ್ರಧಾನ ಮಂತ್ರಿ ಮಿಸ್ಟರ್ ಗೋರ್‌ಡನ್ ಬ್ರೌನ್ ಕಳುಹಿಸಿದ ಶುಭಾಶಯ ಸಂದೇಶವನ್ನು ಭಾಷಣದ ಮೊದಲು ಓದಿ ಹೇಳಲಾಯಿತು. ಲಾರ್ಡ್ ಎರಿಕ್ ಆವ್‌ಬರಿ, ಬೇರೊನೆಸ್ಸ್ ಎಮ್ಮಾ ನಿಕೊಲ್‌ಸನ್ ಮತ್ತು ವೆಸ್ಟ್ ಮಿನಿಸ್ಟರ್‌ನ ಲಾರ್ಡ್ ಮೇಯರ್ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಕುರಿತು ಮೆಚ್ಚುಗೆಯ ಮಾತುಗಳನ್ನು ಆಡಿದರು. ಸಾಂಪ್ರದಾಯಿಕವಾದ ಪ್ರಾರ್ಥನೆಗಳ ನಂತರ ಖಲೀಫರವರು ಹೀಗೆ ಹೇಳಿದರು:**

ನಮ್ಮ ಆಮಂತ್ರಣವನ್ನು ಸ್ವೀಕರಿಸಿ ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯೆ ಸಮಯಾವಕಾಶವನ್ನು ಮಾಡಿಕೊಂಡು ಇಲ್ಲಿಗೆ ಬಂದುದಕ್ಕಾಗಿ ನಾನು ಎಲ್ಲಾ ಅತಿಥಿಗಳಿಗೆ ಪ್ರಥಮವಾಗಿ ಕೃತಜ್ಞತೆ ಅರ್ಪಿಸುತ್ತೇನೆ. ನಮ್ಮ ಕೆಲವು ಹಳೆಯ ಮಿತ್ರರಿದ್ದಾರೆ. ಅವರು ನಮ್ಮ ನಿಕಟ ಬಂಧುಗಳಾಗಿ ಪರಿಣಮಿಸಿದ್ದಾರೆ. ಅವರಿಗೆ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಕುರಿತು ಚೆನ್ನಾಗಿ ತಿಳಿದಿದೆ. ಅಹ್ಮದಿಯರು ನೈಜ ಇಸ್ಲಾಮಿಕ ತತ್ವಗಳನ್ನು ಅನುಸರಿಸುವುದು ಮತ್ತು ಪ್ರಚಾರ ಮಾಡುತ್ತಾ ಇರುವುದು ಅವರಿಗೆ ತಿಳಿದಿದೆ. ಆದರೆ ಕೆಲವು ಜನರಿಗೆ ಅಹ್ಮದಿಯರೊಂದಿಗೆ ಸಂಪರ್ಕವಿದ್ದರೂ ಅವರಿಗೆ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಕುರಿತು ಪೂರ್ಣ ಅರಿವು ಲಭಿಸಿಲ್ಲ. ಅವರು ಹೀಗೆ ಯೋಚಿಸುತ್ತಿರಬಹುದು: ಮುಸ್ಲಿಮರಲ್ಲಿ ಬಹುತೇಕ ಮಂದಿ ಅಹ್ಮದಿಯರ ವಿರುದ್ಧವಾಗಿರುವುದು ಅವರು ನಿಜವಾದ ಇಸ್ಲಾಮಿಕ ತತ್ವಗಳಲ್ಲಿ ಬದಲಾವಣೆ ಉಂಟುಮಾಡಿ, ಅದನ್ನು ಈಗಿನ ಕಾಲದ ಸ್ಥಿತಿಗೆ ಅನುಯೋಜ್ಯವಾಗುವಂತೆ ಮಾಡಿ, (ಇಂತಹ ಕೆಲಸ ಮಾಡುವವರನ್ನು ಅಪೊಲೋಜೆಟಿಕ್ಸ್ ಎಂದೆನ್ನುತ್ತಾರೆ. ಇದರ ಅರ್ಥ ತಪ್ಪಿಗೆ ಕ್ಷಮೆ ಕೇಳುವವರು) ಇಸ್ಲಾಮಿನ ಕುರಿತು ತಪ್ಪು ಅಭಿಪ್ರಾಯಗಳನ್ನು ನೀಗಿಸಿ ಆಧುನಿಕ ಲೋಕದಲ್ಲಿ ಮುಸ್ಲಿಮರಾಗಿ ಅಂಗೀಕರಿಸಲ್ಪಡಲು ಬಯಸುತ್ತಾರೆ ಎಂಬ ಕಾರಣದಿಂದಾಗಿರಬಹುದು.

ನಾನು ಈ ಸಂದರ್ಭದಲ್ಲಿ ಹೀಗೆ ಹೇಳಬಯಸುತ್ತೇನೆ: ಇಂದಿನ ಕಾಲದಲ್ಲಿ ಲೋಕದಾದ್ಯಂತ ನೈಜ ಇಸ್ಲಾಮಿಕ ತತ್ವೋಪದೇಶಗಳನ್ನು ಪಾಲಿಸುತ್ತಿರುವ ಏಕಮಾತ್ರ ಮುಸ್ಲಿಮ್ ಸಂಘಟನೆ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಆಗಿದೆ ಎಂದು ನಾವು ನಂಬುತ್ತೇವೆ.

ಅಹ್ಮದಿಯರು ಹೀಗೆ ನಂಬುತ್ತಾರೆ: ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಅಂತಿಮ ಶರೀಅತ್ ತಂದ ಪ್ರವಾದಿ ಆಗಿದ್ದಾರೆ. ಅವರು ತನಗೆ ದೇವನಿಂದ ಲಭಿಸಿದ ಅರಿವಿನ ಮೂಲಕ ಹೀಗೆ ಶುಭವಾರ್ತೆ ನೀಡಿದ್ದರು: ವಾಗ್ದತ್ತ ಮಸೀಹ್ ಮತ್ತು ವಾಗ್ದತ್ತ ಮಹ್‌ದೀ (ದೇವನಿಂದ ನೇಮಿಸಲ್ಪಟ್ಟ ಮಾರ್ಗದರ್ಶಿ) ಹಿಜರಿ ಹದಿನಾಲ್ಕನೆಯ ಶತಮಾನದಲ್ಲಿ ಆಗಮಿಸುವರು.

ಈ ಭವಿಷ್ಯವಾಣಿ ಈಡೇರಿದೆ ಎಂದೂ ಖಾದಿಯಾನಿನ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಅವರು ವಾಗ್ದತ್ತ ಮಸೀಹರಾಗಿಯೂ ಮಹ್‌ದಿಯಾಗಿಯೂ ಆಗಮಿಸಿದರೆಂದೂ ನಾವು ನಂಬುತ್ತೇವೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ಸ್ಪಷ್ಟಪಡಿಸಿದ್ದರು: "ಇಮಾಮ್ ಮಹ್‌ದಿ ಆಗಮಿಸಿ ಇಸ್ಲಾಮಿನ ತತ್ವೋಪದೇಶಗಳನ್ನು ಪುನಃ ಸ್ಥಾಪಿಸುವರು ಮತ್ತು ಅದರಲ್ಲಿ ಕಾಲಕ್ರಮೇಣ ಉಂಟಾದ ಮಾರ್ಪಾಡುಗಳನ್ನು ಸುಧಾರಣೆಮಾಡುವರು." ಅಹ್ಮದಿಯರು ಹೀಗೆ ನಂಬುತ್ತಾರೆ: ಪವಿತ್ರ ಖುರ್‌ಆನಿಗೆ ಅಹ್ಮದಿಯಾ ಜಮಾಅತಿನ ಸ್ಥಾಪಕರು ನೀಡಿದ ವ್ಯಾಖ್ಯಾನ ಮತ್ತು ಹಝ್ರತ್ ಪೈಗಂಬರರ(ಸ) ನಡೆವಳಿಕೆ ಮತ್ತು ಹೇಳಿಕೆಗಳ ಸಂಗ್ರಹವಾದ ಹದೀಸ್‌ಗಳಿಗೆ ಅವರು ನೀಡಿದ ಅರ್ಥ ವಿವರಣೆ ಪವಿತ್ರ ಖುರ್‌ಆನಿನ ನೈಜ ತತ್ವಗಳಿಗೂ ಪೈಗಂಬರರ(ಸ) ನೈಜ ನಡೆವಳಿಕೆಗಳಿಗೂ ಹೇಳಿಕೆಗಳಿಗೂ ಅನುಸಾರವಾಗಿದೆ.

ಇಲ್ಲಿ ಉದಿಸುವ ಪ್ರಶ್ನೆ ಏನೆಂದರೆ: ಹಝ್ರತ್ ಪೈಗಂಬರರು(ಸ) ಯಾವ ಮಹ್‌ದೀ ಮಸೀಹರ ಕುರಿತು ಭವಿಷ್ಯ ನುಡಿದಿದ್ದರೋ ಅವರೇ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಆಗಿರುವರೆಂಬುದಕ್ಕೆ ಸಾಕ್ಷ್ಯಾಧಾರವೇನು? ಆಗಮಿಸಲಿರುವ ಮಹ್‌ದೀ ಮಸೀಹರು ಎಲ್ಲಾ ಮುಸ್ಲಿಮರನ್ನೂ ಲೋಕದ ಎಲ್ಲಾ ಜನರನ್ನೂ ಜಮಾಯಿಸಿ ಅವರು ತಮ್ಮ ಸೃಷ್ಟಿಕರ್ತನ ಬಗ್ಗೆ ಇರುವ ತಮ್ಮ ಕರ್ತವ್ಯಗಳನ್ನೂ ದೇವ ಸೃಷ್ಟಿಗಳ ಬಗ್ಗೆ ಇರುವ ಕರ್ತವ್ಯಗಳನ್ನೂ ನಿರ್ವಹಿಸುವಂತೆ ಮಾಡುವರು ಎಂದು ಸಹ ಭವಿಷ್ಯನುಡಿಯಲಾಗಿದೆ.

ಇದಕ್ಕೆ ಸಂಬಂಧಿಸಿ ಹಝ್ರತ್ ಪೈಗಂಬರರು(ಸ) ಖಂಡಿಸಲಾಗದ ಒಂದು ದೈವಿಕ ದೃಷ್ಟಾಂತದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆಗಮಿಸಲಿರುವ ನಮ್ಮ ಮಹ್‌ದಿಗೋಸ್ಕರ ಎರಡು ಮಹತ್ತಾದ ದೃಷ್ಟಾಂತಗಳು ತೋರಿಸಲ್ಪಡುವುವು ಎಂದೂ ಭೂಮ್ಯಾಕಾಶಗಳ ಸೃಷ್ಟಿಯ ನಂತರ ಈ ದೃಷ್ಟಾಂತ ಯಾವ ಸತ್ಯವಾದಿಯ ಪರವಾಗಿಯೂ ಕಾಣಿಸಿಕೊಂಡಿಲ್ಲ ಎಂದೂ ಅವರು ಹೇಳಿದರು. ಸೂರ್ಯಗ್ರಹಣ ಮತ್ತು ಚಂದ್ರಗಹಣಗಳು ನಿಗದಿತ ತಿಂಗಳಲ್ಲೂ ನಿಗದಿತ ದಿನಾಂಕಗಳಲ್ಲೂ ಸಂಭವಿಸುವುದಾಗಿ ಅವರು ಹೇಳಿದರು. ನಿಗದಿತ ತಿಂಗಳು ರಮಝಾನ್ ಆಗಿದೆ. (ಇಸ್ಲಾಮಿಕ ತಿಂಗಳುಗಳು ಚಾಂದ್ರಮಾನ ಗಣನೆಗೆ ಅನುಸರಿಸಿ ನಿರ್ಧರಿಸಲ್ಪಡುತ್ತವೆ. ರಮಝಾನ್ ಒಂಭತ್ತನೆಯ ತಿಂಗಳಾಗಿದೆ.)

ಚಂದ್ರನಿಗೆ ಗ್ರಹಣವಾಗುವ ನಿಶ್ಚಿತ ರಾತ್ರಿಗಳಲ್ಲಿ ಪ್ರಥಮ ರಾತ್ರಿ ಗ್ರಹಣ ಉಂಟಾಗುವುದೆಂದು ಹೇಳಲಾಗಿತ್ತು. ಚಂದ್ರನಿಗೆ 13ನೇ, 14ನೇ ಮತ್ತು 15ನೇ ದಿನಗಳಲ್ಲಿ ಗ್ರಹಣವಾಗುತ್ತದೆ ಎಂದು ವಿದ್ಯಾವಂತರಿಗೆ ತಿಳಿದಿದೆ. ಈ ಭವಿಷ್ಯವಾಣಿಯಲ್ಲಿ ಪೂರ್ಣಚಂದ್ರನ ಕುರಿತು ಸೂಚನೆ ಇದೆ. ಸೂರ್ಯನಿಗೆ ಗ್ರಹಣವಾಗುವ ನಿಶ್ಚಿತ ದಿನಗಳಲ್ಲಿ ಎಂದರೆ 27ನೇ, 28ನೇ ಮತ್ತು 29ನೇ ದಿನಗಳ ಪೈಕಿ ಎರಡನೆಯ ದಿನಾಂಕದಂದು ಸೂರ್ಯನಿಗೆ ಗ್ರಹಣವಾಗುವುದು.

1984ರಲ್ಲಿ ರಮಝಾನ್ ತಿಂಗಳಲ್ಲಿ ಈ ಭವಿಷ್ಯವಾಣಿ ಪ್ರಕಾರ 13ನೇ ದಿನಾಂಕ ಎಂದರೆ ಚಂದ್ರಗ್ರಹಣ ಸಂಭವಿಸುವ ನಿಶ್ಚಿತ ದಿನಗಳಲ್ಲಿ ಪ್ರಥಮ ದಿನಾಂಕ ಚಂದ್ರಗ್ರಹಣವೂ 28ನೇ ದಿನಾಂಕ ಎಂದರೆ ಸೂರ್ಯಗ್ರಹಣ ಸಂಭವಿಸುವ ದಿನಾಂಕಗಳಲ್ಲಿ ಎರಡನೆಯ ದಿನಾಂಕ ಸೂರ್ಯಗ್ರಹಣವೂ ಸಂಭವಿಸಿದವು. [ಚಂದ್ರಗ್ರಹಣ ಸೂರ್ಯಾಸ್ತದ ನಂತರ 1894ರ ಮಾರ್ಚ್ ದಿನಾಂಕ 21ರಂದು (ಹಿಜರಿ 1311 ರಮಝಾನ್ ದಿನಾಂಕ 13ರಂದು) ಮತ್ತು ಸೂರ್ಯಗ್ರಹಣ 1894ರ

ಎಪ್ರಿಲ್ ದಿನಾಂಕ 6ರಂದು ಹಗಲು (ರಮಝಾನ್ 28ನೇ ದಿನಾಂಕ ಹಿಜರಿ 1311) ಸಂಭವಿಸಿತು.]

ಈ ತಿಂಗಳಲ್ಲಿ ಬೇರೆ ವರ್ಷಗಳಲ್ಲೂ ಈ ರೀತಿ ಗ್ರಹಣ ಸಂಭವಿಸ ಬಹುದಾದರೂ ಒಬ್ಬ ಪ್ರವಾದಿಯು ವಾದಿಸಿದ ಸಂದರ್ಭದಲ್ಲಿ ಅವರ ಜೀವಿತ ಕಾಲದಲ್ಲಿ ಬೇರೆ ಯಾರ ಪರವಾಗಿಯೂ ಈ ರೀತಿಯ ಗ್ರಹಣಗಳು ಸಂಭವಿಸಿಲ್ಲ. ಹಾಗೆ ಸಂಭವಿಸಿದೆ ಎಂದು ಸಾಬೀತುಮಾಡಲು ಅಸಾಧ್ಯವಾಗಿದೆ. ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಅವರು ತಾನು ವಾಗ್ದತ್ತ ಮಸೀಹ್ ಮತ್ತು ಮಹ್‌ದೀ ಎಂದು ತನ್ನ ಪರವಾಗಿ ನುಡಿಯಲ್ಪಟ್ಟ ಭವಿಷ್ಯವಾಣಿಗಳ ಪ್ರಕಾರ ವಾದಿಸಿದರು. ಅವರು ವಾದಿಸಿದ ನಂತರ ಇನ್ನೊಂದು ಭವಿಷ್ಯವಾಣಿಯ ಪ್ರಕಾರ ಚಂದ್ರಗ್ರಹಣ ಮತ್ತು ಸೂರ್ಯಗ್ರಹಣಗಳು ಸಂಭವಿಸಿದುವು. ಈ ಗ್ರಹಣಗಳು ಪಶ್ಚಿಮಾರ್ಧಗೋಳದಲ್ಲಿ 1895ರಲ್ಲಿ ನಿಶ್ಚಿತ ಮಾಸ ಮತ್ತು ದಿನಾಂಕಗಳಲ್ಲಿ ಪುನರಾವರ್ತಿಸಲ್ಪಟ್ಟವು. (The Story of Eclipses, George F. Chambers, p-33, London 1902)

ಯಾವ ಪ್ರವಾದಿಯ ಕುರಿತು ಭವಿಷ್ಯ ನುಡಿಯಲಾಗಿತ್ತೋ ಆ ಪ್ರವಾದಿ ಆಗಮಿಸಿರುವರು ಎಂಬುದಕ್ಕೆ ಇದು ಸಾಕಷ್ಟು ಸಾಕ್ಷ್ಯವಾಗಿದೆ.

ಖಾದಿಯಾನಿನ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ತನ್ನ ವಾದವನ್ನು ಪ್ರಕಟಿಸಿ 1889ರಲ್ಲಿ ಅಹ್ಮದಿಯಾ ಜಮಾಅತನ್ನು ಸ್ಥಾಪಿಸಿದರು. ಅನಂತರ ಅವರು 19 ವರ್ಷ ಜೀವಿಸಿ ತನಗೆ ದೇವನಿಂದ ನಿಗದಿಗೊಳಿಸಲಾದ ಕೆಲಸವನ್ನು ಮಾಡಿದರು. ದೇವನನ್ನು ಆರಾಧಿಸ ಬೇಕೆಂದೂ ಅವನನ್ನು ಮರೆತುಬಿಡಬಾರದೆಂದೂ ಅವರು ಉಪದೇಶಿಸಿದರು. ಮನುಷ್ಯನು ದೇವನ ಆರಾಧನೆ ಮಾಡದಿದ್ದರೆ ಅವನ ಕೋಪಕ್ಕೆ ಪಾತ್ರನಾಗುವನೆಂದು ಹೇಳಿದರು. ಜನರು ದೇವನ ಸೃಷ್ಟಿಗಳ ಸೇವೆ ಮಾಡಬೇಕೆಂದೂ ಉಪದೇಶಿಸಿದರು. "ಎಲ್ಲರಿಗೂ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ" ಎಂಬ ಘೋಷಣೆಯು ಅವರ ಉಪದೇಶಗಳ ಸಾರಾಂಶವಾಗಿದೆ.

ಅವರು ಹೀಗೆ ಹೇಳಿದರು:

**"ನೀವು ಸಹನೆದೋರಿರಿ ಮತ್ತು ಯಾರನ್ನೂ ಅನ್ಯಾಯದಿಂದ ಆಕ್ರಮಿಸಬೇಡಿರಿ. ನೀವು ನಿಮ್ಮ ಸ್ವಾರ್ಥ ಆಶಾಭಿಲಾಷೆಗಳನ್ನು ಅದುಮಿಟ್ಟು ಕೊಳ್ಳಿರಿ. ನೀವು ವಾದವಿವಾದ ಅಥವಾ ಧಾರ್ಮಿಕ ಚರ್ಚೆ ಮಾಡುವಾಗ ಸಭ್ಯತೆಯಿಂದ ಮೃದು ಮಾತುಗಳನ್ನು ಆಡಿರಿ. ನಿಮ್ಮನ್ನು ಅಜ್ಞಾನಿಗಳು ಸಂಬೋಧಿಸುವುದಾದರೆ ಸಲಾಮ್ ಹೇಳಿ ಅಲ್ಲಿಂದ ದೂರಹೋಗಿರಿ."**

ಬೇರೊಂದು ಕಡೆ ಹೀಗೆ ಹೇಳಿದರು:

**"ಪವಿತ್ರ ಖುರ್‌ಆನಿನ ಆಜ್ಞೆಗಳು ಮುಖ್ಯವಾಗಿ ಎರಡು ಆಗಿವೆ. ಅಲ್ಲಾಹನ ಏಕತ್ವವನ್ನು ಪ್ರಕಟಿಸಿ ಅವನಿಗೆ ನಿಮ್ಮ ಪ್ರೀತಿ ಮತ್ತು ವಿಧೇಯತೆಯನ್ನು ಸೂಚಿಸುವುದು ಮೊದಲನೆಯ ಆಜ್ಞೆ ಆಗಿದೆ. ಎರಡನೆಯ ಆಜ್ಞೆ ನಿಮ್ಮ ಸಹೋದರರಿಗೂ ಇತರ ಮನುಷ್ಯರಿಗೂ ದಯೆದೋರುವುದಾಗಿದೆ."**

ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಭವಿಷ್ಯವಾಣಿ ಪ್ರಕಾರ ಮಸೀಹ್ ಮತ್ತು ಮಹ್‌ದಿಯಾಗಿ ನಮ್ಮ ನಂಬಿಕೆ ಪ್ರಕಾರ ಆಗಮಿಸಿದವರೇ ಅಹ್ಮದಿಯಾ ಜಮಾಅತನ್ನು ಸ್ಥಾಪಿಸಿದರು ಮತ್ತು ನಮಗೆ ಪವಿತ್ರ ಖುರ್‌ಆನಿನ ನೈಜ ತತ್ವಗಳನ್ನು ಕಲಿಸಿದರು.

ಇಸ್ಲಾಮ್ ಅಥವಾ ಪವಿತ್ರ ಖುರ್‌ಆನಿನ ನಿಜವಾದ ಉಪದೇಶಗಳೇನು? ಅವುಗಳ ಕುರಿತು ಸಮಯದ ಪರಿಮಿತಿ ಕಾರಣದಿಂದ ಸಂಕ್ಷಿಪ್ತವಾಗಿ ವಿವರಿಸುವೆನು. ಈಗಿನ ಕಾಲದಲ್ಲಿ ಕೆಲವು ಮುಸ್ಲಿಮರ ರೀತಿನೀತಿಗಳಿಗೆ ಸಂಬಂಧಿಸಿ ಅವುಗಳನ್ನು ವಿವರಿಸುವೆನು.

ಇಸ್ಲಾಮ್ ಮತ್ತು ಪವಿತ್ರ ಖುರ್‌ಆನ್ ಉಗ್ರವಾದವನ್ನು ಉಪದೇಶಿಸುತ್ತವೆಯೆಂದು ಆಕ್ಷೇಪಿಸಲಾಗುತ್ತಿದೆ. ಈ ಬಗ್ಗೆ ಕೆಲವು ಪತ್ರಿಕೆಗಳು, ಸಂಪರ್ಕ ಮಾಧ್ಯಮಗಳು ಮತ್ತು ಕೆಲವು ಪಾಶ್ಚಿಮಾತ್ಯ ರಾಜಕಾರಣಿಗಳು ಮುಸ್ಲಿಮರ ಭಾವನೆಗಳಿಗೆ ನೋವನ್ನುಂಟುಮಾಡಿದ್ದಾರೆ ಹಾಗೂ ರೊಚ್ಚಿಗೆಬ್ಬಿಸುವ ಪ್ರಸ್ತಾಪಗಳನ್ನು ಮಾಡಿದ್ದಾರೆ. ನನ್ನ ಅಭಿಪ್ರಾಯವೇನೆಂದರೆ, ಹೀಗೆ ಬರೆದ ಮತ್ತು ಹೇಳಿಕೆ ನೀಡಿದ ಜನರು ಅಲ್ಲಾಹನ ಶಕ್ತಿ ಸಾಮರ್ಥ್ಯಗಳನ್ನು ಅರಿಯದವರೂ ಧಾರ್ಮಿಕ ವಿಷಯಗಳನ್ನು ಕಡೆಗಣಿಸುವವರೂ ಪರಸ್ಪರ ಭಾವನೆಗಳನ್ನು ಗೌರವಿಸಬೇಕೆಂಬ ಮೂಲಭೂತ ನೀತಿತತ್ವವನ್ನು ಹೊಂದದವರೂ ಆಗಿದ್ದಾರೆ. ಅವರ ಅಭಿಪ್ರಾಯ ಪ್ರಕಾರ ಅವರಿಗೆ ಮಾತ್ರ ಭಾವನೆಗಳು ಇವೆ; ಆದರೆ ಇತರರಿಗೆ ಇಲ್ಲ.

ಅನ್ಯರ ಭಾವನೆಗಳಿಗೆ ನೋವನ್ನುಂಟುಮಾಡಲು ಹಾಗೂ ಜಗಳ ಮತ್ತು ಶಾಂತಿಭಂಗ ಉಂಟುಮಾಡಲು ಕೆಲವು ಉಲ್ಲೇಖಗಳನ್ನು ಅವುಗಳನ್ನು ಬಳಸಲಾದ ಸಂದರ್ಭಗಳಿಂದ ಹೊರಗೆ ತಂದು ಬೈಬಲ್ ಸಹಿತ ಇತರ ಧಾರ್ಮಿಕ ಗ್ರಂಥಗಳಿಂದ ಜನರ ಮುಂದಿರಿಸಲು ಸಾಧ್ಯವಿದೆ. ನಾವು ಅಂತಹ ಉಲ್ಲೇಖಗಳನ್ನು ಅವುಗಳನ್ನು ಬಳಸಲಾದ ಸನ್ನಿವೇಶಗಳಿಗೆ ಹೊಂದಿಕೆಯಾಗುವುದಾಗಿ ಕಾಣುತ್ತೇವೆ. ಆ ಗ್ರಂಥಗಳಲ್ಲಿ ಕೆಲವು ಉಲ್ಲೇಖ ಗಳು ಅನಂತರ ಸೇರಿಸಲ್ಪಟ್ಟವುಗಳಾಗಲು ಸಹ ಸಾಧ್ಯವಿದೆ. ಈಗ ನಾನು ಪವಿತ್ರ ಖುರ್‌ಆನ್ ಬಗ್ಗೆ ಪ್ರಸ್ತಾಪಿಸುವೆನು. ಪವಿತ್ರ ಖುರ್‌ಆನನ್ನು ಸರ್ವಶಕ್ತನಾದ ಅಲ್ಲಾಹನು ಜನರಲ್ಲಿ ಶಾಂತಿ ಸ್ಥಾಪಿಸಲು ಅವತೀರ್ಣಗೊಳಿಸಿದನು.

ನಮ್ಮ ದೃಢ ವಿಶ್ವಾಸವೇನೆಂದರೆ, ಲೋಕವು ಸೃಷ್ಟಿಸಲ್ಪಟ್ಟ ಕಾಲದಿಂದ ಮೊದಲುಗೊಂಡು ಮಹೋನ್ನತವಾದ ಅಲ್ಲಾಹನು ಪ್ರತಿಯೊಂದು ಜನಾಂಗದಲ್ಲಿಯೂ ಪ್ರವಾದಿಗಳನ್ನು ಕಳುಹಿಸಿ ತಮ್ಮ ಸೃಷ್ಟಿಕರ್ತನ ಕಡೆಗೆ ಮಾರ್ಗದರ್ಶನ ನೀಡಲು ಮತ್ತು ಸದಾಚಾರಗಳನ್ನು ಕಲಿಸಲು ಏರ್ಪಾಡುಮಾಡಿದ್ದನು. ಇದರ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

**"ನಾವು ಪ್ರತಿಯೊಂದು ಸಮುದಾಯದಲ್ಲೂ ಸಂದೇಶ ವಾಹಕನನ್ನು ನಿಯೋಜಿಸಿದ್ದೇವೆ. 'ನೀವು ಅಲ್ಲಾಹನನ್ನು ಆರಾಧಿಸಿರಿ ಮತ್ತು ದುಷ್ಪ್ರೇರಕ ಗಳಿಂದೆಲ್ಲ ದೂರವಿರಿ' (ಎಂದು ಅವರ ಉಪದೇಶವಾಗಿತ್ತು). ಅಲ್ಲಾಹನು ಮಾರ್ಗದರ್ಶನ ಮಾಡಿದ ಕೆಲವರು ಅವರಲ್ಲಿ (ಆ ಜನರಲ್ಲಿ) ಇದ್ದರು. ದುರ್ಮಾರ್ಗದ ದೋಷಕ್ಕೆ ಗುರಿಯಾದ ಕೆಲವರು ಸಹ ಅವರಲ್ಲಿದ್ದರು. ನೀವು ಭೂಮಿಯಲ್ಲಿ ಸಂಚರಿಸಿ (ಪ್ರವಾದಿಗಳನ್ನು) ಸುಳ್ಳಾಗಿಸಿದವರ ಗತಿಯೇನಾಗಿತ್ತೆಂದು ನೋಡಿರಿ." (16 : 37)**

ಈ ವಚನದ ಉಪದೇಶದ ಪ್ರಕಾರ ಅಹ್ಮದಿ ಮುಸ್ಲಿಮರಾದ ನಾವು ಯಾವ ಪ್ರವಾದಿಯನ್ನೂ ಅಲ್ಲಗಳೆಯಲಾರೆವು ಮತ್ತು ಅವರನ್ನು ಪರಿಹಾಸ ಮಾಡಲಾರೆವು. ಪ್ರವಾದಿಗಳ ವಿರುದ್ಧ ಮಾತನಾಡುವ ಜನರಿಂದ ದೂರ ಸರಿಯಲು ನಮಗೆ ಉಪದೇಶ ನೀಡಲಾಗಿದೆ. ಕೆಲವು ಪ್ರವಾದಿಗಳ ಕುರಿತು ಪವಿತ್ರ ಖುರ್‌ಆನ್‌ನಲ್ಲೂ ಬೈಬಲಿನಲ್ಲೂ ಪ್ರಸ್ತಾಪಿಸಲಾಗಿದೆ. ನಾವು ಎಲ್ಲಾ ಪ್ರವಾದಿಗಳನ್ನು ನಂಬುತ್ತೇವೆ. ಪವಿತ್ರ ಖುರ್‌ಆನಿನ ಈ ವಚನವನ್ನು ಅನುಸರಿಸಿ ನಾವು ಹಿಂದುಗಳಲ್ಲಿ ಬಂದ ಪ್ರವಾದಿಗಳನ್ನೂ ಚೀನದವರಲ್ಲಿ ಮತ್ತು ಇತರ ಜನಾಂಗಗಳಲ್ಲಿ ಆಗಮಿಸಿದ ಪ್ರವಾದಿಗಳನ್ನೂ ನಂಬುತ್ತೇವೆ.

ನಮಗೆ ಅಲ್ಲಾಹನು ಕಲಿಸಿದ ಮೂಲಭೂತ ತತ್ವ ಇದಾಗಿದೆ: ನಾವು ಅನ್ಯರ ಭಾವನೆಗಳನ್ನು ಗೌರವಿಸಬೇಕು. ಅನ್ಯ ಜನಾಂಗಗಳಲ್ಲಿ ಆಗಮಿಸಿದ ಪ್ರವಾದಿಗಳನ್ನು ಆದರಭಾವದಿಂದ ಕಾಣಬೇಕು. ಆ

ಪ್ರವಾದಿಗಳಿಂದ ಸದಾಚಾರವು ಪ್ರಚೋದಿಸಲ್ಪಟ್ಟಿತು. ಅನ್ಯ ಜನಾಂಗಗಳ ಸಹಕಾರದಿಂದಲೇ ಶಾಂತಿಯು ಸ್ಥಾಪಿಸಲ್ಪಡುವುದು. ಹಝ್‌ರತ್ ಮುಹಮ್ಮದ್ ಪೈಗಂಬರರು[ಸ], ಪ್ರವಾದಿಗಳ ಉನ್ನತ ಸ್ಥಾನವನ್ನು ಗೌರವಿಸಬೇಕಲ್ಲದೆ ಇತರ ಜನಾಂಗಗಳ ನಾಯಕರನ್ನೂ ಗೌರವಿಸಬೇಕೆಂದು ಕಲಿಸಿರುವರು. ಇದು ಸಹ ಶಾಂತಿ ಸ್ಥಾಪನೆಗೆ ಸಹಕಾರಿಯಾಗುತ್ತದೆ.

ಎಲ್ಲರೂ ಪರಸ್ಪರ ಹಿರಿಯರನ್ನು ಮತ್ತು ನಾಯಕರನ್ನು ಗೌರವಿಸಿ ಲೋಕದಲ್ಲಿ ಶಾಂತಿ ಸ್ಥಾಪಿಸಲು ಇಸ್ಲಾಮ್ ಧರ್ಮನೀಡುವ ಉಪದೇಶಗಳು ನಾನು ವಿವರಿಸಿದವುಗಳಾಗಿವೆ. ಇಸ್ಲಾಮ್ ಅನ್ಯರನ್ನು ಗೌರವಿಸುತ್ತದೆಯೋ ಇಲ್ಲವೋ ಎಂಬುದರ ಕುರಿತು ಈಗ ನೀವು ತೀರ್ಮಾನಿಸಬಹುದು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆನ್ನುತ್ತಾನೆ:

**"ಓ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯ ಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ." (5:9)**

ಅಲ್ಲಾಹನ ಪ್ರೀತಿ ಗಳಿಸಲು ಸ್ಥಿರತೆಯಿಂದ ವರ್ತಿಸಬೇಕೆಂದು ಉಪದೇಶಿಸಲಾಗಿದೆ. ಅಲ್ಲಾಹನ ಪ್ರೀತಿಯನ್ನು ಗಳಿಸುವುದೇ ಏಕಮಾತ್ರ ಉದ್ದೇಶವಾಗಿರಬೇಕು. ನೀವು ಹೀಗೆ ಮಾಡಿದರೆ ಮಾತ್ರ ನಿಜವಾದ ಮುಸ್ಲಿಮರೆಂದು ಗಣಿಸಲ್ಪಡುವಿರಿ. ಎಲ್ಲಾ ವೈಯಕ್ತಿಕ ದ್ವೇಷಾಸೂಯೆಗಳನ್ನು ಬದಿಗಿರಿಸಿ ಅಲ್ಲಾಹನ ಉಪದೇಶಗಳ ಪ್ರಕಾರ ನಡೆಯುವಾಗಲೇ ಮುಸ್ಲಿಮನು ದೃಢವಿಶ್ವಾಸಿಯಾಗಿ ಗಣಿಸಲ್ಪಡುವನು. ನೀವು ನ್ಯಾಯಯುತವಾಗಿ ವರ್ತಿಸಬೇಕು. ನಿಮ್ಮ ಶತ್ರುಗಳು ನ್ಯಾಯವನ್ನು ಅಪೇಕ್ಷಿಸುವುದಾದರೆ ನೀವು ಅವರೊಂದಿಗೆ ನ್ಯಾಯ ಬದ್ಧವಾಗಿ ನಡೆದುಕೊಳ್ಳಬೇಕು. ಅವರಿಗೆ ಹಕ್ಕುಗಳಿದ್ದರೆ, (ಅವರಿಗೆ ಹಕ್ಕುಗಳು ಇರುತ್ತವೆ) ಅವರನ್ನು ಹಕ್ಕುಗಳಿಂದ ವಂಚಿತರನ್ನಾಗಿ ಮಾಡಬೇಡಿರಿ. ನೀವು ಹೀಗೆ ವರ್ತಿಸುವುದಿಲ್ಲವಾದರೆ ನೀವು ಅಲ್ಲಾಹನ ನಾಮದಲ್ಲಿ ಬಹಿರಂಗವಾಗಿ ಮಾಡುವುದೆಲ್ಲವೂ ವಾಸ್ತವಿಕವಾಗಿ ಅಲ್ಲಾಹನ ಮಾರ್ಗದಲ್ಲಿ ಮಾಡಲ್ಪಡುವುದಿಲ್ಲ; ಅವುಗಳೆಲ್ಲಾ ನಿಮ್ಮ ಸ್ವಾರ್ಥಕ್ಕಾಗಿ, ಅಸೂಯೆಗಾಗಿ ಅಥವಾ ದ್ವೇಷಸಾಧನೆಗಾಗಿ ಮಾಡುವವುಗಳಾಗಿವೆ. ಅಲ್ಲಾಹನು ಹೃದಯದ ಅಂತರಾಳಗಳಲ್ಲಿ ಇರುವುದನ್ನೆಲ್ಲಾ ಬಲ್ಲನೆಂದು ಪ್ರತಿಯೊಬ್ಬ ಮುಸ್ಲಿಮನಿಗೆ ತಿಳಿದಿದೆ. ಇದೇ ಕಾರಣದಿಂದ ಅಲ್ಲಾಹನು ಹೀಗೆ ಹೇಳಿರುವನು: ಯಾರು ನ್ಯಾಯಬದ್ಧವಾಗಿ ವರ್ತಿಸುವುದಿಲ್ಲವೋ ಅವರ ಕುರಿತು ಅಲ್ಲಾಹನು ಅರಿತಿರುವನು ಮತ್ತು ಅವರು ಶಿಕ್ಷಾರ್ಹರಾಗುವರು. ಇಸ್ಲಾಮ್ ಧರ್ಮದ ಮೂಲತತ್ವವು ಶಾಂತಿ ಮತ್ತು ನ್ಯಾಯವನ್ನು ಸ್ಥಾಪಿಸುವುದಾಗಿದೆ.

ಇಲ್ಲಿ ಒಂದು ಪ್ರಶ್ನೆ ಉದಿಸುತ್ತದೆ. ನ್ಯಾಯ ಮತ್ತು ಶಾಂತಿ ಸ್ಥಾಪನೆ ಬಗ್ಗೆ ಇಸ್ಲಾಮ್ ಒತ್ತಿ ಹೇಳುವುದಾದರೆ ಇಸ್ಲಾಮಿಕ ಯುದ್ಧಗಳು ನಡೆದುದಾದರೂ ಏಕೆ?

ಇಸ್ಲಾಮ್ ಧರ್ಮದ ಆರಂಭದ ಚರಿತ್ರೆಯನ್ನು ಪರಿಶೀಲಿಸುವುದಾದರೆ, ಬೇರೆ ಪ್ರವಾದಿಗಳೂ ಅವರ ಅನುಯಾಯಿಗಳೂ ಹಿಂಸಾಚಾರಗಳಿಗೆ ಪಾತ್ರರಾದ ಹಾಗೆಯೇ ಹಝ್‌ರತ್ ಮುಹಮ್ಮದ್ ಪೈಗಂಬರರೂ[ಸ] ಅವರ ಅನುಯಾಯಿಗಳೂ ಮಕ್ಕದ ಅವಿಶ್ವಾಸಿಗಳಿಂದ ಹಿಂಸಾಚಾರಗಳಿಗೆ ಗುರಿಯಾಗಿದ್ದರು. ಬಿಸಿಲಿನ ಬೇಗೆಯಿಂದ ಬೆಚ್ಚಗಾದ ಮರಳಿನ ಮೇಲೆ ಮಲಗಿಸಿ ಬಿಸಿಯಾದ ಕಲ್ಲುಗಳನ್ನು ಪೈಗಂಬರರ[ಸ] ಅನುಯಾಯಿಗಳ ನಗ್ನ ದೇಹಗಳ ಮೇಲೆ ಇರಿಸಲಾಗುತ್ತಿತ್ತು. ಕೆಲವು ಅನುಯಾಯಿಗಳ ಎರಡು ಕಾಲುಗಳಲ್ಲಿ ಒಂದೊಂದಕ್ಕೆ ಬೇರೆ ಬೇರೆ ಒಂಟೆಗಳನ್ನು ಕಟ್ಟಿ ಓಡಿಸಿದಾಗ ದೇಹವು ಇಬ್ಭಾಗವಾಗಿ ಸೀಳಲ್ಪಡುತ್ತಿತ್ತು. ಹಝ್‌ರತ್ ಮುಹಮ್ಮದ್ ಪೈಗಂಬರರನ್ನು[ಸ] ಮತ್ತು ಅವರ ಅನುಯಾಯಿಗಳನ್ನು ಒಂದು ಕಣಿವೆ ಪ್ರದೇಶದಲ್ಲಿರಿಸಿ ಅವರನ್ನು ಎರಡೂವರೆ ವರ್ಷಗಳ ಕಾಲ ಹಸಿವೆಯಿಂದ ಪೀಡಿಸಲಾಯಿತು. ಅವರನ್ನು ಕಅ್‌ಬ ದೇವಗೃಹದಲ್ಲಿ ಆರಾಧಿಸುವುದರಿಂದ ತಡೆಯಲಾಯಿತು. ಮುಸ್ಲಿಮರು ಹಿಂಸೆ ಸಹಿಸಲಾಗದೆ ಮದೀನಕ್ಕೆ ವಲಸೆಹೋದಾಗ ಮಕ್ಕದವರು ಅವರನ್ನು ಬೆನ್ನಟ್ಟಿ ಆಕ್ರಮಿಸಲು ಆರಂಭಿಸಿದರು. ಈ ಸನ್ನಿವೇಶದಲ್ಲಿ ಮುಸ್ಲಿಮರಿಗೆ ಶತ್ರುಗಳ ವಿರುದ್ಧ ಹೋರಾಡಲು ಅನುಮತಿ ನೀಡಲಾಯಿತು. ಈ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

**"ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ನೀಡಲಾಗಿದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ. 'ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗಿದ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದವು. ಅವುಗಳಲ್ಲಿ ದೇವ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವ ಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ." (22:40, 41)**

ಇದು ಬಹಳ ಸ್ಪಷ್ಟವಾದ ಆಜ್ಞೆಯಾಗಿದ್ದು, ಆತ್ಮಸಂರಕ್ಷಣೆ ಮತ್ತು ಶಾಂತಿ ಸ್ಥಾಪನೆಯನ್ನು ಪ್ರತಿಪಾದಿಸುತ್ತದೆ. ಇಂದು ಸಹ ಯುದ್ಧ ಪ್ರಾರಂಭಿಸುವಾಗ ಎದುರಾಳಿಗಳಲ್ಲಿ ಪ್ರತಿಯೊಬ್ಬರು ಸರಿಯಾಗಿಯೋ ತಪ್ಪಾಗಿಯೋ ತಾವು ಶಾಂತಿ ಸ್ಥಾಪನೆಗೆ ಹೋರಾಡುತ್ತೇವೆಂದು ವಾದಿಸುತ್ತಾರೆ. ಆದುದರಿಂದ ಪವಿತ್ರ ಖುರ್‌ಆನ್‌ನಲ್ಲಿ ಯುದ್ಧಮಾಡಲು ಅನುಮತಿ ನೀಡಿದುದು ಏಕೆಂದು ಆಕ್ಷೇಪ ಮಾಡಲು ಸಾಧ್ಯವಿಲ್ಲವೆಂದು ನನಗನಿಸುತ್ತದೆ. ಹೋರಾಟ ಮಾಡಲು ನೀಡಿದ ಅನುಮತಿ ಶರತ್ತುಬದ್ಧವಾಗಿದೆ. ಒಂದನೆಯದಾಗಿ, ನೀವು ಆಕ್ರಮಿಸಲ್ಪಡುತ್ತಾ ಇರುವುದರಿಂದ ನೀವು ಅದಕ್ಕೆ ಪ್ರತಿರೋಧಾತ್ಮಕವಾಗಿ ಯುದ್ಧ ಮಾಡಬಹುದು. ಎರಡನೆಯದಾಗಿ, ನೀವು ಇದರ ಮೊದಲು ಹಿಂಸಾಚಾರಕ್ಕೆ ತುತ್ತಾದಾಗ ನೀವು ಪ್ರತೀಕಾರ ಮಾಡಲಿಲ್ಲ. ಆದರೆ ನೀವು ಈಗ ಸಹ ಸುಮ್ಮನೆ ಕುಳಿತರೆ ಅವರು ತಮ್ಮ ಹಿಂಸಾಚಾರಗಳನ್ನು ವರ್ಧಿಸುವರು. ಮೂರನೆಯದಾಗಿ, ಹಿಂಸಾಚಾರಗಳು ತಡೆಗಟ್ಟಲ್ಪಡದೆ ಮುಂದುವರಿದರೆ ಲೋಕದ ಶಾಂತಿಯು ನಾಶವಾಗುವುದು. ಪ್ರತಿಯೊಂದು ಧರ್ಮದ ಆರಾಧನಾಲಯಗಳು ಧ್ವಂಸಗೊಳಿಸಲ್ಪಡುವುವು. ನಾಲ್ಕನೆಯದಾಗಿ, ಯುದ್ಧವನ್ನು ಆತ್ಮಸಂರಕ್ಷಣೆಗಾಗಿ ಮಾಡಬೇಕು.

ಪವಿತ್ರ ಖುರ್‌ಆನ್‌ನಲ್ಲಿ ಇನ್ನೊಂದು ಕಡೆ ಅಲ್ಲಾಹನು ಹೇಳುತ್ತಾನೆ:

**"ನಿಮ್ಮ ವಿರುದ್ಧ ಯುದ್ಧ ಮಾಡುವವರೊಡನೆ ಅಲ್ಲಾಹನ ಮಾರ್ಗದಲ್ಲಿ ನೀವು ಸಹ ಯುದ್ಧ ಮಾಡಿರಿ. ಆದರೆ ಅತಿಕ್ರಮಣ ಮಾಡಬೇಡಿರಿ. ಅತಿಕ್ರಮಣ ಮಾಡುವವರನ್ನು ಅಲ್ಲಹನು ಪ್ರೀತಿಸುವುದಿಲ್ಲ. ಅವರನ್ನು (ನಿಮ್ಮೊಡನೆ ಯುದ್ಧ ಮಾಡುವವರನ್ನು) ಕಂಡಲ್ಲಿ ಕೊಲ್ಲಿರಿ. ನಿಮ್ಮನ್ನು ಅವರು ಹೊರ ಅಟ್ಟಿದ್ದಲ್ಲಿಂದ ನೀವು ಸಹ ಅವರನ್ನು ಹೊರ ಅಟ್ಟಿರಿ. ಹಿಂಸಾಚಾರ ಕೊಲೆಗಿಂತ ಕಠಿಣ ಕೇಡುಂಟು ಮಾಡುತ್ತದೆ. ಮಸ್‌ಜಿದುಲ್‌ಹರಾಮ್‌ನ (ಕಅ್‌ಬ) ಸಮೀಪದಲ್ಲಿ ನೀವು ಅವರೊಡನೆ ಯುದ್ಧ ಮಾಡಬಾರದು– ಅಲ್ಲಿ ಅವರು ನಿಮ್ಮೊಡನೆ ಯುದ್ಧ ಮಾಡಲು ಪ್ರಾರಂಭಿಸಿದರೆ ಹೊರತು.**

**(ಅಲ್ಲಿ ಸಹ) ನಿಮ್ಮೊಡನೆ ಯುದ್ಧ ಮಾಡಿದರೆ ನೀವು ಅವರನ್ನು ವಧಿಸಿರಿ. ಈ ಅವಿಶ್ವಾಸಿಗಳಿಗೆ ಇದೇ ಶಿಕ್ಷೆಯಾಗಿದೆ. ಅವರು ಯುದ್ಧದಿಂದ ದೂರಸರಿದರೆ ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ. ಹಿಂಸಾಚಾರ ಇಲ್ಲದಂತಾಗಿ ಧರ್ಮ(ಸ್ವೀಕಾರ) ಅಲ್ಲಾಹನಿಗೋಸ್ಕರವಾಗುವ ವರೆಗೆ ನೀವು ಅವರೊಡನೆ ಯುದ್ಧಮಾಡಿರಿ. ಆದರೆ ಅವರು ಹಿಂದೆ ಸರಿದರೆ (ಅರಿತುಕೊಳ್ಳಿರಿ) ದೌರ್ಜನ್ಯಗಾರರ ಹೊರತು ಅನ್ಯರ ಮೇಲೆ ಆಕ್ರಮಣ ಸಲ್ಲದು." (2 : 191 - 194)**

ಯುದ್ಧ ಮಾಡಲು ಅನುಮತಿ ನೀಡಿದುದು ವಿಶಿಷ್ಟ ಸನ್ನಿವೇಶಗಳಲ್ಲಿ ಮತ್ತು ಆತ್ಮರಕ್ಷಣೆಗಾಗಿತ್ತು ಎಂಬುದು ಇದರಿಂದ ಸಾಬೀತಾಗುತ್ತದೆ. ಶತ್ರು ಪಕ್ಷದವರು ಯುದ್ಧ ನಿಲ್ಲಿಸುವುದಾದರೆ ಕೂಡಲೆ ಯುದ್ಧವನ್ನು ನಿಲ್ಲಿಸಬೇಕು ಮತ್ತು ಅದನ್ನು ಮುಂದುವರಿಸಲು ನೆವನಗಳನ್ನು ಹುಡುಕ ಬಾರದೆಂದು ಆಜ್ಞಾಪಿಸಲಾಗಿದೆ.

ನಾವು ಈ ಎಲ್ಲಾ ವಿಷಯಗಳನ್ನು ಪವಿತ್ರ ಖುರ್‌ಆನಿನ, "ಯಾವುದಾದರೂ ಜನಾಂಗವು ನಿಮ್ಮ ವಿರುದ್ಧ ಹೊಂದಿರುವ ಶತ್ರುತ್ವವು ನಿಮ್ಮನ್ನು ನ್ಯಾಯಯುತವಾದ ನಡೆವಳಿಕೆಯಿಂದ ತಡೆಯಬಾರದು" ಎಂಬ ಆಜ್ಞೆಯ ಬೆಳಕಿನಲ್ಲಿ ನೋಡುವುದಾದರೆ, ಪವಿತ್ರ ಖುರ್‌ಆನಿನ ಉಪದೇಶಗಳಲ್ಲಿ ಯಾವುದೇ ಕುಂದು ಕೊರತೆ ಇಲ್ಲವೆಂದೂ ಆದರೆ ಕೆಲವರು ತಮ್ಮ ಸ್ವಾರ್ಥ ಸಿದ್ಧಿಗಾಗಿ ನೀಡುವ ವ್ಯಾಖ್ಯಾನಗಳು ತಪ್ಪಿನಿಂದ ಕೂಡಿವೆ ಎಂಬುದು ಸ್ಪಷ್ಟವಾಗುತ್ತದೆ. ಅಂತಹ ಜನರು ಅವಿದ್ಯಾವಂತರಾದ ಮುಗ್ಧ ಜನರನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಾರೆ. ಇದು, ಕ್ರೈಸ್ತಧರ್ಮದ ಆರಂಭ ಕಾಲದಲ್ಲಿ ಒಂದು ಕ್ರೈಸ್ತ ರಾಜ್ಯ ಕ್ರೈಸ್ತ ಧರ್ಮದ ಹೆಸರಿನಲ್ಲಿ ಜನರನ್ನು ಹಿಂಸಾಚಾರಕ್ಕೆ ಗುರಿಪಡಿಸುತ್ತಿದ್ದ ಹಾಗೆಯೇ ಇದೆ. ಆದರೆ ಆ ಹಿಂಸಾಚಾರಗಳಿಗೆ ಕ್ರೈಸ್ತಧರ್ಮವು ಹೊಣೆಯಾಗಿದೆ ಎಂದು ನಿಂದಿಸಲಾಗದು.

ಯುದ್ಧಗಳಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ನಡೆವಳಿಕೆ ಹೇಗಿತ್ತು? ಮಕ್ಕದ ನಿವಾಸಿಗಳು ಕ್ರೂರವಾಗಿ ಹಿಂಸಾಚಾರಗಳಿಗೆ ತಮ್ಮನ್ನು ಗುರಿಪಡಿಸಿದ್ದರೂ ಒಂದು ಯುದ್ಧದ ಸಮಯದಲ್ಲಿ ನೀರಿನ ಒಂದು ಬಾವಿಯು ತಮ್ಮ ವಶದಲ್ಲಿದ್ದಾಗ ಅದರಿಂದ ಶತ್ರು ಸೈನಿಕರು ನೀರನ್ನು ತೆಗೆದುಕೊಂಡು ಹೋಗಲು ಹಝ್ರತ್ ಪೈಗಂಬರರು(ಸ) ಅನುಮತಿಸಿದರು. ಯುದ್ಧ ಕೈದಿಗಳೊಂದಿಗೆ ದಯೆಯಿಂದ ವರ್ತಿಸಲಾಯಿತು. ಅವರನ್ನು ಉದಾರ ಶರತ್ತುಗಳ ಪ್ರಕಾರ ಬಿಡುಗಡೆಗೊಳಿಸಲಾಯಿತು. ಮದೀನದ ಯಹೂದಿಯರಿಗೆ ಸಮಾನ ನಾಗರಿಕ ಹಕ್ಕುಗಳನ್ನು ಅವರು ಒಪ್ಪಂದ ಪಾಲಿಸುವ ತನಕ ನೀಡಲಾಯಿತು. ಅವರ ಅಪರಾಧಗಳಿಗೆ ತೀರ್ಪು ಪ್ರವಾದಿ ಮೂಸಾರವರ(ಅ) ನಿಯಮಗಳಿಗೆ ಅನುಸಾರವಾಗಿ ನೀಡಲಾಯಿತು.

ಒಮ್ಮೆ ಹಝ್ರತ್ ಪೈಗಂಬರರ(ಸ) ಒಬ್ಬ ನಿಕಟ ಶಿಷ್ಯ ಒಬ್ಬ ಯಹೂದಿಯೊಂದಿಗೆ ಹೀಗೆ ಹೇಳಿದರು: "ಹಝ್ರತ್ ಮುಹಮ್ಮದ್(ಸ) ಹಝ್ರತ್ ಮೂಸಾರವರಿಗಿಂತ(ಅ) ಶ್ರೇಷ್ಠರು." ಈ ವಿಷಯವನ್ನು ತಿಳಿದ ಪೈಗಂಬರರು(ಸ) ಶಿಷ್ಯನ ನಡೆವಳಿಕೆಯ ಬಗ್ಗೆ ತೀವ್ರ ಅಸಂತೃಪ್ತಿ ಸೂಚಿಸಿ ಹೀಗೆ ಹೇಳಿದರು: "ನಾನು ಪ್ರವಾದಿ ಮೂಸಾ(ಅ)ರವರಿಗಿಂತ ಶ್ರೇಷ್ಠನೆಂದು ಹೇಳಬೇಡಿರಿ. ಹಾಗೆ ಹೇಳಿದುದರಿಂದ ಒಬ್ಬ ಯಹೂದಿಯ ಮನಸ್ಸಿಗೆ ನೋವಾಗಿದೆ."

ಹಝ್ರತ್ ಪೈಗಂಬರರ(ಸ) ಕುರಿತು ಅತ್ಯಂತ ಶ್ರೇಷ್ಠರೆಂದು ಮುಸ್ಲಿಮರೆಲ್ಲರೂ ಹೃತ್ಪೂರ್ವಕವಾಗಿ ನಂಬುತ್ತಿದ್ದರೂ ಪವಿತ್ರ ಖುರ್‌ಆನ್‌ನಲ್ಲಿ ಅವರ ಕುರಿತು ಅತ್ಯಂತ ಶ್ರೇಷ್ಠ ಪ್ರವಾದಿ ಎಂದು ಘೋಷಿಸಿದ್ದರೂ ಅವರು ತಮ್ಮ ಬಗ್ಗೆ ತನ್ನನ್ನು ಪ್ರವಾದಿ ಮೂಸಾ(ಅ)ರವರಿಗಿಂತ ಶ್ರೇಷ್ಠನೆಂದು ಹೇಳಬಾರದೆಂದು ಹೇಳಿದುದು ಸಮಾಜದಲ್ಲಿ ಶಾಂತಿಭಂಗವನ್ನು ತಡೆಯಲಿಕ್ಕಾಗಿತ್ತು.

ಇವು, ಅಹ್ಮದಿಯಾ ಜಮಾಅತ್‌ಗೆ ತಳಹದಿಯಾಗಿರುವ ಇಸ್ಲಾಮಿನ ಶಾಂತಿದಾಯಕ ಉಪದೇಶಗಳಾಗಿವೆ. ಇದನ್ನೇ ನಾವು ಪ್ರಚಾರ ಗೊಳಿಸುತ್ತಿದ್ದೇವೆ. ಈ ಉಪದೇಶಗಳ ಕುರಿತು ಪೂರ್ಣವಾಗಿ ತಿಳಿದ ನಂತರವೂ ಯಾರಾದರೂ ನಮ್ಮ ಬಗ್ಗೆ ನಾವು ಇಸ್ಲಾಮ್ ತತ್ವಗಳಿಂದ ದೂರ ಸರಿದುದಾಗಿ ಆರೋಪಿಸುವುದಾದರೆ ನಾವು ಈ ವಿಷಯವನ್ನು ಅಲ್ಲಾಹನ ತೀರ್ಮಾನಕ್ಕೆ ಬಿಡುತ್ತೇವೆ. ನಾವು ಕ್ರೂರತೆಗೆ ಪ್ರತಿಯಾಗಿ ಕ್ರೂರತೆಯಿಂದ ವರ್ತಿಸಬಾರದೆಂದೂ ಅಜ್ಞಾನಿಗಳು ಹಾಗೆ ವರ್ತಿಸುತ್ತಾರೆಂದೂ ನಮ್ಮ ಜಮಾಅತಿನ ಸ್ಥಾಪಕರು ಹೇಳಿದ್ದಾರೆ. ಇಸ್ಲಾಮಿನ ಉದ್ದೇಶ ಅಜ್ಞಾನವನ್ನು ಹೋಗಲಾಡಿಸುವುದೇ ಹೊರತು ಅದನ್ನು ಹರಡುವುದಲ್ಲ.

ನಾನು ಒಂದು ವಿಷಯವನ್ನು ಇಲ್ಲಿ ಸ್ಪಷ್ಟಪಡಿಸಲು ಬಯಸುತ್ತೇನೆ. ಕೆಲವು ಸನ್ನಿವೇಶಗಳಲ್ಲಿ ಯುದ್ಧಮಾಡುವುದನ್ನು ಇಸ್ಲಾಮ್ ಧರ್ಮವು ಅನುಮತಿಸಿರುವುದಾದರೂ ಯಾವುದೇ ಗುಂಪು ಅಥವಾ ಸಂಸ್ಥೆಗೆ ಯುದ್ಧ ಘೋಷಣೆಯ ಅಧಿಕಾರ ನೀಡಿಲ್ಲ. ದೌರ್ಜನ್ಯಕ್ಕೆ ಗುರಿಯಾದ ಮುಸ್ಲಿಮ್ ಸರಕಾರಕ್ಕೆ ಮಾತ್ರ ಈ ಅನುಮತಿ ನೀಡಲಾಗಿದೆ ಮತ್ತು ಪ್ರತಿರೋಧದ ಉದ್ದೇಶಕ್ಕಾಗಿ ಮಾತ್ರ ನೀಡಲಾಗಿದೆ.

ಇಸ್ಲಾಮ್ ಧರ್ಮ ಹರಡುವುದೆಂದೂ ಅನೇಕ ಮುಸ್ಲಿಮ್ ಸರಕಾರಗಳು ಸ್ಥಾಪಿತವಾಗುವುವು ಎಂದೂ ಅಲ್ಲಾಹನಿಗೆ ತಿಳಿದಿತ್ತು. ಇದೇ ಕಾರಣದಿಂದ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: ಎರಡು ಮುಸ್ಲಿಮ್ ಸರಕಾರಗಳು ಯುದ್ಧ ಮಾಡುತ್ತಿರುವಾಗ ಅನ್ಯ ಮುಸ್ಲಿಮ್ ಸರಕಾರಗಳು ದೌರ್ಜನ್ಯಪೀಡಿತರಿಗೆ ಸಹಾಯ ಮಾಡಬೇಕು. ದೌರ್ಜನ್ಯಗಾರನು ಸೋತು ಶರಣಾಗತನಾದರೆ ಅವನನ್ನು ಶಾಶ್ವತ ಹಿಂಸೆಗೆ ಮತ್ತು ಕ್ರೂರತೆಗೆ ಬಲಿಪಶುವನ್ನಾಗಿ ಮಾಡಬಾರದು. ಹಾಗೆ ಮಾಡುವುದು ಅನುಚಿತವಾಗಿದೆ. ಒಂದು ಜನಾಂಗದೊಂದಿಗೆ ಅನ್ಯಾಯದಿಂದ ವರ್ತಿಸಿದರೆ ಅದಕ್ಕೆ ಪ್ರತಿಕ್ರಿಯೆ ಉಂಟಾದಾಗ ಶಾಂತಿಭಂಗವಾಗುತ್ತದೆ. ಇದೊಂದು ಸುವರ್ಣ ತತ್ವವಾಗಿದ್ದು ಈ ಕಾಲದ ಮುಸ್ಲಿಮ್ ಮತ್ತು ಮುಸ್ಲಿಮೇತರ ಸರಕಾರಗಳಿಗೆ ಅನುಕರಿಸಲು ಯೋಗ್ಯವಾಗಿದೆ. ನಾವು ಪ್ರಾಮಾಣಿಕವಾಗಿ ಇಂದಿನ ಪರಿಸ್ಥಿತಿಯನ್ನು ಪರಿಶೀಲಿಸುವುದಾದರೆ ಇಂದಿನ ಕಾಲದ ಅನ್ಯಾಯಗಳು, ಅನುಚಿತ ಶರತ್ತುಗಳನ್ನು ಮತ್ತು ಪ್ರತಿಬಂಧಗಳನ್ನು ಸೋತು ಹೋದ ಜನಾಂಗಗಳಿಗೆ ಮತ್ತು ದೇಶಗಳಿಗೆ ವಿಧಿಸಿದುದರ ಪರಿಣಾಮವಾಗಿವೆ.

ಈ ಸಂಕ್ಷಿಪ್ತ ನಿರೂಪಣೆಯ ನಂತರ ನಾನು ಅಹ್ಮದಿಯಾ ಸಂಘಟನೆಯನ್ನು ಸ್ಥಾಪಿಸುದುದರ ಮೂಲ ಉದ್ದೇಶದ ಬಗ್ಗೆ ಪ್ರಸ್ತಾಪಿಸಲು ಬಯಸುತ್ತೇನೆ. ನಾನು ಪವಿತ್ರ ಖುರ್‌ಆನ್ ವಚನಗಳನ್ನು ಉಲ್ಲೇಖಿಸಿ ಅದರ ಉಪದೇಶಗಳಲ್ಲಿ ಯಾವುದೇ ಕುಂದುಕೊರತೆ ಇಲ್ಲವೆಂದು ಸ್ಪಷ್ಟಪಡಿಸಿದ್ದೇನೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಸಹ ಯಾವುದೇ ಜನಾಂಗದ ವಿರುದ್ಧ ಅನ್ಯಾಯದಿಂದ ವರ್ತಿಸಲಿಲ್ಲ. ಆದರೆ ಮುಸ್ಲಿಮರ ವಿರುದ್ಧ ಆಕ್ರಮಣ ನಡೆದಾಗ ಅವರು ದೇವಾಜ್ಞೆ ಪ್ರಕಾರ ಆಯುಧವೆತ್ತಿಕೊಂಡರು. ಆದರೆ ಅವರ ಪ್ರತಿರೋಧ ಶಾಂತಿ ಮತ್ತು ನ್ಯಾಯದ ಸ್ಥಾಪನೆಗಾಗಿತ್ತು. ಹಝ್ರತ್ ಪೈಗಂಬರರು(ಸ) ಮುಂದಿನ ಕಾಲದಲ್ಲಿ ಪವಿತ್ರ ಖುರ್‌ಆನ್ ಅಕ್ಷರದಲ್ಲಿ ಸಂರಕ್ಷಿಸಲ್ಪಟ್ಟರೂ ಇಸ್ಲಾಮಿನ ನೈಜ ತತ್ವಗಳು ವಿಕೃತಗೊಳಿಸಲ್ಪಡುವುವೆಂದೂ ಮುಸ್ಲಿಮರು ತಪ್ಪು ವ್ಯಾಖ್ಯಾನಗಳನ್ನು ಅಂಗೀಕರಿಸುವರೆಂದೂ ಆಗ ವಾಗ್ದತ್ತ ಮಸೀಹ್ ಆಗಮಿಸಿ ಇಸ್ಲಾಮಿನ ನೈಜ ತತ್ವಗಳನ್ನು ಪ್ರಕಟಿಸುವರೆಂದೂ ಭವಿಷ್ಯ ನುಡಿದಿದ್ದರು. ಆ ಕಾಲದ ಕುರಿತು ಅನೇಕ ಚಿಹ್ನೆಗಳನ್ನು ಪ್ರಸ್ತಾಪಿಸಲಾಗಿ

ಅವುಗಳಲ್ಲಿ ಒಂದು ಪ್ರಮುಖ ಚಿಹ್ನೆ ಕುರಿತು ನಾನು ಇದರ ಮೊದಲು ವಿವರಿಸಿದ್ದೇನೆ.

ಇಂದು ಅಹ್ಮದಿಯಾ ಮುಸ್ಲಿಮರು ಹಝ್‌ರತ್ ಪೈಗಂಬರರ[ಸ] ಭವಿಷ್ಯವಾಣಿ ಪ್ರಕಾರ ವಾಗ್ದತ್ತ ಮಸೀಹರಾಗಿ ಖಾದಿಯಾನಿನ ಮಿರ್ಝಾ ಗುಲಾಮ್ ಅಹ್ಮದ್[ಅ] ಆಗಮಿಸಿದರೆಂದು ನಂಬುತ್ತಾರೆ. ಅವರು ಪವಿತ್ರ ಖುರ್‌ಆನಿಗೆ ನೀಡಿದ ವ್ಯಾಖ್ಯಾನ ಪ್ರಕಾರ ಅಹ್ಮದಿಯಾ ಜಮಾಅತ್ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಮತ್ತು ಕಷ್ಟವನ್ನು ಅನುಭವಿಸುವ ಜನರಿಗೆ ಸಹಾಯ ನೀಡಲು ಸದಾ ಕಾರ್ಯಪ್ರವೃತ್ತವಾಗಿದೆ.

ನಾವು ನಮ್ಮ ಸಂಪನ್ಮೂಲಗಳನ್ನು ಬಳಸಿಕೊಂಡು ಮನುಷ್ಯರನ್ನು ದೇವನ ಸಮೀಪಕ್ಕೆ ತರಲು ಎಲ್ಲಾ ಮಾರ್ಗಗಳಿಂದಲೂ ಪ್ರಯತ್ನಿಸುತ್ತಾ ಇದ್ದೇವೆ. ಮನುಷ್ಯರು ತಮ್ಮ ಸೃಷ್ಟಿಕರ್ತನನ್ನು ಗುರುತಿಸಿದರೆ ಅವರಿಗೆ ತಮ್ಮ ಸಹಜೀವಿಗಳ ಬಗ್ಗೆ ಇರುವ ಕರ್ತವ್ಯಗಳನ್ನು ಈಡೇರಿಸಲು ಸಾಧ್ಯವಾಗುವುದು. ಇಂದು ಮುಸ್ಲಿಮರಾದ ನಾವು ಮಾತ್ರ ಹೀಗೆ ಹೇಳಬಲ್ಲೆವು: ಹಝ್‌ರತ್ ಮುಹಮ್ಮದ್ ಪೈಗಂಬರರಿಗೆ[ಸ] 1400 ವರ್ಷಗಳ ಮೊದಲು ಅವತೀರ್ಣವಾದ ಗ್ರಂಥ ಯಾವುದೇ ಬದಲಾವಣೆಗೆ ಒಳಗಾಗದೆ ಇಂದಿಗೂ ಸುರಕ್ಷಿತವಾಗಿದೆ. ಇದು ಇಸ್ಲಾಮ್ ಧರ್ಮದ ಅದ್ವಿತೀಯ ಶ್ರೇಷ್ಠತೆಯಾಗಿದೆ. ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಇಸ್ಲಾಮ್ ಧರ್ಮಕ್ಕೆ ವಾಗ್ದತ್ತ ಮಸೀಹ್ ಆದ ಮಾರ್ಗ ದರ್ಶಕನನ್ನು ದಯಪಾಲಿಸಿರುವನು. ಅವರು ನೈಜ ಇಸ್ಲಾಮಿಕ ತತ್ವಗಳನ್ನು ಪ್ರತಿಭಾಪೂರ್ಣವಾಗಿ ನಮಗೆ ವಿವರಿಸಿಕೊಟ್ಟಿರುವರು.

ಅಹ್ಮದಿಯಾ ಜಮಾಅತಿನ ಸ್ಥಾಪಕರು ನೂರು ವರ್ಷಗಳ ಹಿಂದೆ "ಜಿಹಾದ್" ಪದಕ್ಕೆ ನೀಡಿದ ಅರ್ಥ ವಿವರಣೆ ಹೀಗಿದೆ:

**"ನಾನು ಒಂದು ಆಜ್ಞೆಯೊಂದಿಗೆ ಬಂದಿದ್ದೇನೆ. ಖಡ್ಗದ ಮೂಲಕ ನಡೆಸುವ ಜಿಹಾದ್ ಕೊನೆಗೊಂಡಿದೆ. ಆದರೆ ನಿಮ್ಮ ಆತ್ಮಗಳನ್ನು ಪರಿಶುದ್ಧಗೊಳಿಸುವ ಜಿಹಾದ್ ಮುಂದುವರಿಯುವುದು. ಇದನ್ನು ನಾನು ನನ್ನ ಸ್ವಂತ ಅಭಿಪ್ರಾಯದ ಪ್ರಕಾರ ಹೇಳುತ್ತಾ ಇಲ್ಲ. ಇದು ಅಲ್ಲಾಹನ ಇಚ್ಛೆಯಾಗಿದೆ. ನೀವು ಸಹೀಹ್ ಬುಖಾರಿಯಲ್ಲಿರುವ ಹದೀಸನ್ನು ನೆನಪಿಸಿರಿ. ವಾಗ್ದತ್ತ ಮಸೀಹರು ಯುದ್ಧವನ್ನು ಕೊನೆಗೊಳಿಸುವರು ಎಂದು ಅದರಲ್ಲಿ ಹೇಳಿದೆ. ಇದರ ಅರ್ಥ, ವಾಗ್ದತ್ತ ಮಸೀಹರು ಧಾರ್ಮಿಕ ಯುದ್ಧಗಳನ್ನು ಕೊನೆಗೊಳಿಸುವರು ಎಂದಾಗಿದೆ. ಆದುದರಿಂದ ನನ್ನ ಅನುಯಾಯಿಗಳಿಗೆ ನಾನು ಆಜ್ಞಾಪಿಸುತ್ತೇನೆ. ಅವರು ಅಂತಹ ಯೋಚನೆಗಳನ್ನು ಬಿಡಬೇಕು. ಅವರು ತಮ್ಮ ಹೃದಯಗಳನ್ನು ಶುದ್ಧೀಕರಿಸಬೇಕು. ಅವರು ಸಹಜೀವಿಗಳ ಬಗ್ಗೆ ಸಹಾನುಭೂತಿ ಹೊಂದಬೇಕು. ಕಷ್ಟಪಡುವವರಿಗೆ ದಯೆದೋರಬೇಕು. ಅವರು ಭೂಮಿಯಲ್ಲಿ ಶಾಂತಿಯನ್ನು ಹರಡಬೇಕು. ಅದರ ಫಲಸ್ವರೂಪವಾಗಿ ಅವರ ಧರ್ಮವು ಹರಡುವುದು. ಇದು ಹೇಗೆ ಸಂಭವಿಸುವುದೆಂದು ಶಂಕಿಸಬಾರದು. ಸರ್ವಶಕ್ತನಾದ ದೇವನು ನೇರವಾಗಿ ಕಾರ್ಯಪ್ರವೃತ್ತನಾದರೆ, ಭೂಮಿಯ ಸಂಪನ್ಮೂಲಗಳನ್ನು ಹೊಸ ಆವಿಷ್ಕಾರಗಳಿಗೆ ಜನರು ಬಳಸುವಂತೆ ಮಾಡಿದ ಹಾಗೆ ಮತ್ತು ಕುದುರೆ ಸವಾರಿಗೆ ಬದಲಾಗಿ ರೈಲುಬಂಡಿಗಳನ್ನು ಒದಗಿಸಿದ ಹಾಗೆ ಅವನು ಅದೇ ರೀತಿ, ಮನುಷ್ಯರ ಸಹಾಯವಿಲ್ಲದೆ, ತನ್ನ ದಿವ್ಯದೂತರ ಮೂಲಕ ಮನುಷ್ಯರ ಆಧ್ಯಾತ್ಮಿಕ ಆವಶ್ಯಕತೆಗಳನ್ನು ಈಡೇರಿಸಿ ಕೊಡುವನು. ಮಹತ್ತರವಾದ ದೈವಿಕ ದೃಷ್ಟಾಂತಗಳು ಕಾಣಿಸಿಕೊಳ್ಳುವುವು. ಅಸಂಖ್ಯಾತ ಬೆಳಕಿನ ಕಿರಣಗಳು ಅನೇಕರ ಕಣ್ಣುಗಳನ್ನು ತೆರೆಯಿಸುವುವು." (ಗವರ್ನಮೆಂಟ್ ಅಂಗ್ರೇಝಿ ಔರ್ ಜಿಹಾದ್)**

ನಾವು ದೈವಿಕ ಸಂದೇಶವನ್ನು ಪ್ರತಿದಿನ 24 ಗಂಟೆ ವಿವಿಧ ಭಾಷೆಗಳಲ್ಲಿ ನಮ್ಮ ಟೆಲಿವಿಷನ್ ಚ್ಯಾನಲ್‌ಗಳ ಮೂಲಕ ಬಿತ್ತರಿಸುವುದು ದೇವನಿಂದ ತರಬೇತಿ ಪಡೆದ ಆ ದಿವ್ಯಪುರುಷರ ಕಾರಣದಿಂದಾಗಿದೆ. ನಾವು ಕಷ್ಟಪಡುವ ಜನರಿಗೆ ಆರೋಗ್ಯ ಮತ್ತು ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವುದು, ಶುದ್ಧನೀರು ಮತ್ತು ಆಹಾರವನ್ನು ವಿಪತ್ತುಗಳ ಸಂತ್ರಸ್ತರಿಗೆ ಒದಗಿಸುತ್ತಿರುವುದು ನಾವು ಅಹ್ಮದಿಯಾ ಸಂಘಟನೆಯ ಸ್ಥಾಪಕರು ನಮಗೆ ವಿವರಿಸಿಕೊಟ್ಟ ಇಸ್ಲಾಮಿಕ ತತ್ವೋಪದೇಶಗಳಿಗೆ ಅನುಸಾರವಾಗಿ ವರ್ತಿಸುತ್ತಾ ಇರುವುದರಿಂದಾಗಿದೆ.

ನಿಮಗೆ ತಿಳಿದಂತೆ ನಾವು ಈ ದಿನ ಕೃತಜ್ಞತಾ ಸಮರ್ಪಣೆಯ ಒಂದು ಸಮಾರಂಭವನ್ನು ಆಚರಿಸುತ್ತಿದ್ದೇವೆ. ಉನ್ನತ ಆದರ್ಶಗಳನ್ನು ಹೊಂದಿದ ಈ ಸಂಘಟನೆ ಖಿಲಾಫತ್ ವ್ಯವಸ್ಥೆಯ ನೂರು ವರ್ಷಗಳನ್ನು ಪೂರ್ಣಗೊಳಿಸುತ್ತಿದೆ. (ಇದನ್ನು ಇಂಗ್ಲಿಷ್‌ನಲ್ಲಿ ಕಲಿಫೇಟ್ ಎಂದೆನ್ನುತ್ತಾರೆ. ಪ್ರವಾದಿಯ ನಿಧನದ ನಂತರ ಸ್ಥಾಪಿತವಾಗುವ ವ್ಯವಸ್ಥೆ ಇದಾಗಿದೆ.)

ಕಳೆದ ಒಂದು ನೂರು ವರ್ಷಗಳಲ್ಲಿ ಇಸ್ಲಾಮಿನ ನೈಜ ತತ್ವೋಪದೇಶಗಳಿಗೆ ಅನುಸಾರವಾಗಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಲೋಕದ ಸೇವೆಯನ್ನು ಮಾಡುತ್ತಾ ಇದೆ. ಕಷ್ಟಪಡುವ ಜನರಿಗೆ ಅವರ ಜಾತಿ, ವರ್ಣ ಅಥವಾ ಧರ್ಮವನ್ನು ಪರಿಗಣಿಸದೆ ಅಹ್ಮದಿಯಾ ಸಂಘಟನೆ ಸೇವೆ ಮಾಡುತ್ತಿದೆ. ನಾವು ಆಫ್ರಿಕದ ಬಡ ದೇಶಗಳ ವಿದೂರ ಪ್ರದೇಶಗಳಲ್ಲಿ ಆರೋಗ್ಯ ಮತ್ತು ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ಸೇವೆ ಮಾಡುತ್ತಿದ್ದೇವೆ. ಸರಕಾರ ಮತ್ತು ಸಹಾಯಕ ಸಂಸ್ಥೆಗಳು ನೆರವು ನೀಡಲು ನಿರಾಕರಿಸಿದ ಪ್ರದೇಶಗಳಲ್ಲಿ ನಾವು ಬಾವಿಗಳನ್ನು ನವೀಕರಿಸುತ್ತೇವೆ ಮತ್ತು ನೀರು ಸರಬರಾಜು ವ್ಯವಸ್ಥೆಯನ್ನು ಸರಿಪಡಿಸುತ್ತೇವೆ.

ನಾನು ಇತ್ತೀಚೆಗೆ ಆಫ್ರಿಕಾವನ್ನು ಸಂದರ್ಶಿಸಿ ಬಂದಿರುತ್ತೇನೆ. ಬೆನಿನ್ ದೇಶದ ವಿದೂರ ಸ್ಥಳದಲ್ಲಿರುವ ಒಬ್ಬ ಬುಡಕಟ್ಟು ನಾಯಕ ಹೀಗೆಂದರು: "ಮಳೆ ಮತ್ತು ನೆರೆ ಹಾವಳಿ ಕಾರಣ ನಮ್ಮ ಪ್ರದೇಶದಲ್ಲಿ ಕ್ಷಾಮದ ಪರಿಸ್ಥಿತಿ ಉಂಟಾದಾಗ ನಾವು ಎಲ್ಲ ಕಡೆಗಳಲ್ಲೂ ಸಹಾಯಕ್ಕೆ ಅಪೇಕ್ಷಿಸಿದೆವು. ಆದರೆ ಒಂದೇ ಒಂದು ಸಂಸ್ಥೆ ನಮ್ಮ ಕರೆಗೆ ಉತ್ತರ ನೀಡಿತು. ಅದು ಅಹ್ಮದಿಯಾ ಸಂಘಟನೆ. ಅಹ್ಮದಿಯಾ ಜಮಾಅತಿನ ಡಾಕ್ಟರ್‌ಗಳು ಲಾರಿಗಟ್ಟಲೆ ಆಹಾರ ಪದಾರ್ಥಗಳೊಂದಿಗೆ ಆಗಮಿಸಿ ನಮ್ಮ ಜನತೆಯನ್ನು ರೋಗದಿಂದಲೂ ಹಸಿವೆಯಿಂದಲೂ ಸಂರಕ್ಷಿಸಿದರು."

ನಾವು ವಿದ್ಯಾಭ್ಯಾಸದ ಕ್ಷೇತ್ರದಲ್ಲಿಯೂ ಕಾರ್ಯಪ್ರವೃತ್ತರಾಗಿದ್ದೇವೆ. ಈ ಕಾಲದಲ್ಲಿ ವಿದ್ಯಾಭ್ಯಾಸಕ್ಕೆ ಬಹಳ ಪ್ರಾಮುಖ್ಯತೆ ಇದೆಯೆಂದು ನಾವು ಮನಗಂಡಿದ್ದೇವೆ. ನಾವು ಇಂದು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಬೇಕಾದರೆ ನಾವು ಜನರ ಹಸಿವನ್ನು ಹೋಗಲಾಡಿಸಬೇಕು. ನಾವು ವಿದ್ಯಾಹೀನರಿಗೆ ವಿದ್ಯಾಭ್ಯಾಸ ಒದಗಿಸಿ ಅವರ ಶಕ್ತಿಸಾಮರ್ಥ್ಯಗಳ ಅರಿವನ್ನು ಅವರಲ್ಲಿ ಮೂಡಿಸಬೇಕು.

ನೈಜೀರಿಯಾದಲ್ಲಿ ಒಬ್ಬ ಪತ್ರಕರ್ತ, ನಾವು ಮುಂದಿನ ಶತಮಾನದಲ್ಲಿ ನೈಜೀರಿಯದ ಜನರಿಗೆ ನೀಡುವ ಕೊಡುಗೆ ಏನೆಂದು ಕೇಳಿದರು. ನನ್ನ ಉತ್ತರ ಹೀಗಿತ್ತು: "ನಾವು ಅವರಿಗೆ ವಿದ್ಯೆ ನೀಡುವೆವು. ಬಡವರು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಕಂಡುಕೊಳ್ಳಲು ಅವರಿಗೆ ವಿದ್ಯಾಭ್ಯಾಸ ನೀಡಲು ಹೆಚ್ಚು ಪರಿಶ್ರಮಪಡುವೆವು."

ನಾವು ಈ ಎಲ್ಲಾ ಕೆಲಸಗಳನ್ನು ಅಲ್ಲಾಹನ ಪ್ರೀತಿಯನ್ನು ಗಳಿಸಲು ಮಾಡುತ್ತಿದ್ದೇವೆ. ಅಹ್ಮದಿಯಾ ಜಮಾಅತ್ ನೈಜ ಇಸ್ಲಾಮಿಕ ತತ್ವಗಳನ್ನು ಅನುಸರಿಸಿ ವರ್ತಿಸುತ್ತಿದೆ ಎಂಬುದನ್ನು ನಿಮಗೆ ಮನಗಾಣಿಸಿಕೊಡಲಿಕ್ಕೋಸ್ಕರ ಮಾತ್ರ ನಾನು ಇದನ್ನು ವಿವರಿಸುತ್ತಿದ್ದೇನೆ. ನಾವು ಅಲ್ಲಾಹನ ಆಜ್ಞೆಗಳ ಪ್ರಕಾರ ಕಾರ್ಯಪ್ರವೃತ್ತರಾಗಿದ್ದೇವೆ. ಅಲ್ಲಾಹನ ಪ್ರೀತಿಯನ್ನು ಗಳಿಸಲು ಬಯಸುವವರು ಹೀಗೆಯೇ ಮಾಡುತ್ತಾರೆ: **"ಗುಲಾಮನನ್ನು ಬಿಡುಗಡೆ ಮಾಡುವುದು ಅಥವಾ ಹಸಿವಿನ ದಿನದಲ್ಲಿ ಅನ್ನ ನೀಡುವುದು– ನಿಕಟ ಸಂಬಂಧಿಯಾದ ಅನಾಥನಿಗೆ ಅಥವಾ ನಿಕೃಷ್ಟ ಸ್ಥಿತಿಯಲ್ಲಿರುವ**

# ಪ್ರತಿಜ್ಞೆಯನ್ನು ಈಡೇರಿಸಿರಿ

**[ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅಹ್ಮದಿಯಾ ಪಂಚಮ ಖಲೀಫ) ಅವರು ಮಸ್‌ಜಿದ್ ಬೈತುಲ್ ಫುತೂಹ್ ಲಂಡನ್‌ನಲ್ಲಿ 30-05-2008ರಂದು ನೀಡಿದ ಜುಮುಅ ಖುತುಬ]**

ಕೆಲವು ದಿನಗಳ ಹಿಂದೆ ಮೇ ದಿನಾಂಕ 27ರಂದು ನಾವು ಅಲ್ಲಾಹನ ಅನುಗ್ರಹದಿಂದ ಯೌಮೆ ಖಿಲಾಫತ್ (ಖಿಲಾಫತ್ ದಿನ) ಆಚರಿಸಿದೆವು. ನಾನು ನನ್ನ ಭಾಷಣದಲ್ಲಿ ಹೇಳಿದ ಪ್ರಕಾರ ಈ ವರ್ಷದ ಯೌಮೆ ಖಿಲಾಫತಿಗೆ ವಿಶೇಷ ಮಹತ್ವವಿತ್ತು. ಇದು ಎಂತಹ ಯೌಮೆ ಖಿಲಾಫತ್ ಎಂದರೆ ಸಾಮಾನ್ಯವಾಗಿ ಮನುಷ್ಯನ ಜೀವಿತದಲ್ಲಿ ಒಂದು ಸಾರಿ ಮಾತ್ರ ಬರುತ್ತದೆ. ಯಾರಿಗಾದರೂ ಬಹಳ ದೀರ್ಘಾಯುಸ್ಸು ಲಭಿಸಿದ್ದರೆ ಆ ವ್ಯಕ್ತಿ ಪ್ರಜ್ಞಾವಂತನಾಗಿರುವ ಕಾಲದಲ್ಲಿ ಒಮ್ಮೆ ಮಾತ್ರ ಇದು ಬರಲು ಸಾಧ್ಯ. ಆದರೆ ಅಲ್ಲಾಹನು ಯಾರನ್ನಾದರೂ ವಿಶಿಷ್ಟವಾಗಿ ಅನುಗ್ರಹಿಸಿದ್ದರೆ, ಆ ವ್ಯಕ್ತಿ ಪೂರ್ಣಪ್ರಜ್ಞಾವಂತನಾಗಿ ಜೀವಿಸುತ್ತಾ ಇದ್ದರೆ, ದೀರ್ಘಾಯುಸ್ಸಿನೊಂದಿಗೆ ಆತನ ಅಂಗಾಂಗಳು ಶಿಥಿಲವಾಗಿಲ್ಲವಾದರೆ ಆತನ ಸ್ಥಿತಿ ಇದಕ್ಕೆ ಹೊರತಾಗಿದೆ. ಅಲ್ಲಾಹನು ನಮಗೆ ಅಹ್ಮದಿಯಾ ಖಿಲಾಫತ್ ಜೂಬಿಲಿಯನ್ನು ತೋರಿಸಿದುದು ಅವನು ನೀಡಿದ ಅನುಗ್ರಹವಾಗಿದೆ. ಅಂದಾಜು 120 ವರ್ಷಗಳ ಅಹ್ಮದಿಯಾ ಜಮಾಅತಿನ ಜೀವಿತಕಾಲದಲ್ಲಿ ಎರಡು ವಿವಿಧ ಜೂಬಿಲಿ ಸಮಾರಂಭಗಳನ್ನು ನೋಡಲು ಅಲ್ಲಾಹನು ನಮಗೆ ಅನುಗ್ರಹಿಸಿದನು. ಇದಕ್ಕಾಗಿ ಪ್ರತಿಯೊಬ್ಬ ಅಹ್ಮದಿ ಅಲ್ಲಾಹನ ಮುಂದೆ ಕೃತಜ್ಞತೆ ಮತ್ತು ಉಪಕಾರ ಸ್ಮರಣೆಯ ಭಾವನೆಗಳಿಂದ ತುಂಬಿದ್ದಾನೆ. ಅಹ್ಮದಿಯಾ ಜಮಾಅತಿನ ಸ್ಥಾಪನೆಯ ಪ್ರಥಮ ಶತಮಾನ 1989ರಲ್ಲಿ, ಎಂದರೆ 19 ವರ್ಷಗಳ ಹಿಂದೆ ಪೂರ್ಣಗೊಂಡಾಗ ನಾವು ಅಹ್ಮದಿಯಾ ಶತಮಾನ ಜೂಬಿಲಿಯನ್ನು ಆಚರಿಸಿದೆವು. ಈ ವರ್ಷ ನಾವು ಅಹ್ಮದಿಯಾ ಖಿಲಾಫತಿನ ಶತವಾರ್ಷಿಕ ಜೂಬಿಲಿಯನ್ನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಲು ಮೇ ದಿನಾಂಕ 27ರಂದು ಆಚರಿಸಿದೆವು. ಲೋಕದ ವಿವಿಧ ಜಮಾಅತ್‌ಗಳು ಈ ದಿನಾಚರಣೆ ಮಾಡುತ್ತಾ ಇವೆ. ಈಗಿರುವ ಅನೇಕ ಮಕ್ಕಳು 1989ರಲ್ಲಿ ಜನಿಸಿರಲಿಲ್ಲ. ಅವರು ಅನಂತರ ಜನಿಸಿದರು ಅಥವಾ ಆ ಕಾಲದಲ್ಲಿ ಅವರು ಸಮಾರಂಭಗಳನ್ನು ಅರ್ಥಮಾಡಿಕೊಳ್ಳುವ ವಯಸ್ಸಿನವರಾಗಿರಲಿಲ್ಲ. ಕೆಲವರು ಅನಂತರ ಜಮಾಅತಿಗೆ ಸೇರಿದವರಾಗಿರುವರು. ಅವರಿಗೆಲ್ಲಾ ಆ ಜೂಬಿಲಿ ಬಗ್ಗೆ ತಿಳಿದಿಲ್ಲ.

ಆದರೆ ಈ ವರ್ಷದ ಜೂಬಿಲಿ ಸಮಾರಂಭಗಳನ್ನು ಉತ್ಸಾಹದಿಂದ ಆಚರಿಸಿದವರು ಅಥವಾ ನೋಡಿದವರು ನಿಶ್ಚಯವಾಗಿ ಒಂದು ಅನನ್ಯ ಅನುಭವವನ್ನು ಹೊಂದಿದರು ಅಥವಾ ಹೊಂದಲಿರುವರು. ಲೋಕದ ಪ್ರತಿಯೊಂದು ದೇಶದಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪಿತವಾದಲ್ಲೆಲ್ಲಾ ಆ ಜಮಾಅತ್‌ಗಳು ತಮ್ಮ ಕಾರ್ಯಕ್ರಮಗಳನ್ನು ಮಾಡಿದವು ಅಥವಾ ಮಾಡುತ್ತಾ ಇವೆ. ಅವರು M.T.A. (ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ) ಮೂಲಕ ಕೇಂದ್ರದ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿದರು.

ಕೆಲವು ಸ್ಥಳೀಯ ಜಮಾಅತ್‌ಗಳಲ್ಲಿ ತಮ್ಮ ಸ್ಥಿತಿಗೆ ಅನುಸಾರವಾಗಿ ಪ್ರಾಯಶಃ ವರ್ಷವಿಡೀ ಕಾರ್ಯಕ್ರಮಗಳು ಜರಗಲಿವೆ. ಇಲ್ಲಿನ ಕೇಂದ್ರ ಕಾರ್ಯಕ್ರಮಗಳು ಎಕ್ಸೆಲ್ ಸೆಂಟರ್‌ನಲ್ಲಿ ಆಯೋಜಿಸಲಾಗಿತ್ತು. ಅಲ್ಲಿ ಅಂದಾಜು 18-19 ಸಾವಿರ ಜನರು ಹಾಜರಿದ್ದರು. ಲೋಕದ ವಿವಿಧ ದೇಶಗಳಿಂದ ಪ್ರತಿನಿಧಿಗಳು ಭಾಗವಹಿಸಿದರು. ಖಾದಿಯಾನ್ ಮತ್ತು ರಬ್ವದಲ್ಲಿ ಕೇಂದ್ರದ ಜಲ್ಸವನ್ನು ನೋಡುವವರ ಮತ್ತು ಆಲಿಸುವವರ ದೃಶ್ಯಗಳನ್ನು M.T.A. ಮೂಲಕ ಲೋಕದಾದ್ಯಂತ ತೋರಿಸಲಾಯಿತು. ಅದು ಸಹ ಜನರ ಹೃದಯಗಳಲ್ಲಿ ವಿಶಿಷ್ಟ ಪ್ರಭಾವ ಬೀರಿತು. ಇದರ ಬಗ್ಗೆ ಪುರುಷರೂ ಮಹಿಳೆಯರೂ ತಮ್ಮ ಹೃತ್ಪೂರ್ವಕ ಅನಿಸಿಕೆಗಳನ್ನು ಪತ್ರಗಳ ಮೂಲಕ ಮತ್ತು ಫ್ಯಾಕ್ಸ್‌ಗಳ ಮೂಲಕ ಕಳುಹಿಸಲು ಪ್ರಾರಂಭಿಸಿದ್ದಾರೆ. ಅಲ್ಲಾಹನಿಗೆ ಸರ್ವಸ್ತುತಿಗಳು ಸಲ್ಲುವುವು. ಆ ದಿನ ಸಭಾಭವನದಲ್ಲಿ ಕುಳಿತಿರುವವರಿಗೆ ಮತ್ತು ಲೋಕದ ವಿವಿಧ ದೇಶಗಳಲ್ಲಿ ನಮ್ಮ ಕೇಂದ್ರ ಜಲ್ಸವನ್ನು ನೋಡುತ್ತಿದ್ದವರು ಜಮಾಅತ್ ವ್ಯವಸ್ಥೆಗೆ ಅಧೀನವಾಗಿ ಅಥವಾ ವೈಯಕ್ತಿಕವಾಗಿ ಮನೆಯಲ್ಲಿ ತಮ್ಮ ಕುಟುಂಬದೊಂದಿಗೆ ಆಲಿಸುತ್ತಾ, ನೋಡುತ್ತಾ ಇದ್ದ ಎಲ್ಲ ಜನರ ಮೇಲೆ ಅಲ್ಲಾಹನ ಅನುಗ್ರಹದಿಂಧ ಒಂದು ವಿಶಿಷ್ಟ ಪ್ರಭಾವ ಉಂಟಾಯಿತು. ಪ್ರತಿಯೊಂದು ದೇಶದಲ್ಲಿರುವ ಅಹ್ಮದಿಯರು ಮತ್ತು ಪ್ರತಿಯೊಂದು ಜನಾಂಗಕ್ಕೆ ಸೇರಿದ ಅಹ್ಮದಿಯರು ತಾವು ಐಕ್ಯತೆಯ ದಾರದಲ್ಲಿ ಪೋಣಿಸಲ್ಪಟ್ಟಿರುವೆವು ಎಂಬ ಅನುಭವ ಹೊಂದಿದರು. ಇದೊಂದು ಅನನ್ಯ ಆಧ್ಯಾತ್ಮಿಕ ಅನುಭವವಾಗಿತ್ತು. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸತ್ಯಸಂಧತೆ ಮತ್ತು ಅವರಿಗೆ ಅಲ್ಲಾಹನು ಮಾಡಿದ ವಾಗ್ದಾನಗಳ ಈಡೇರುವಿಕೆಯ ಮಹತ್ತಾದ ಪ್ರಕಟಣೆಯಾಗಿತ್ತು. ಅದನ್ನು ನಮ್ಮವರು ನೋಡಿ ಮನವರಿಕೆ ಮಾಡಿದರು ಮತ್ತು ಅನ್ಯರು ಸಹ ನೋಡಿದರು.

---

ಬಡವನಿಗೆ." **(90 : 14 - 17)**

ಸಮಾಜದ ಬುದ್ಧಿಜೀವಿಗಳಾದ ನೀವು ನಿಮ್ಮ ಕ್ಷೇತ್ರಗಳಲ್ಲಿ ಪ್ರಭಾವಶಾಲಿಗಳಾಗಿರುವಿರಿ. ನಾನು ನಿಮಗೆ ವಿವರಿಸಿದ ಕೆಲವು ವಿಷಯಗಳು ನೀವು ಇಸ್ಲಾಮಿನ ಸುಂದರ ತತ್ವೋಪದೇಶಗಳನ್ನು ಮನವರಿಕೆ ಮಾಡಿಕೊಳ್ಳಲು ಮತ್ತು ಇಸ್ಲಾಮಿನ ವಿರುದ್ಧ ಮಾಡುವ ಆಕ್ಷೇಪಗಳಿಂದ ಪ್ರಭಾವಿತರಾಗದಿರಲಿಕ್ಕಾಗಿದೆ.

ಉನ್ನತ ನೈತಿಕ ಉದ್ದೇಶವನ್ನು ಹೊಂದಿ ನೈಜ ಇಸ್ಲಾಮಿಕ ತತ್ವೋಪದೇಶಗಳ ಪ್ರಕಾರ ವರ್ತಿಸುವ ಸಮುದಾಯ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಎಂಬುದನ್ನು ನೀವು ತಿಳಿದುಕೊಳ್ಳಿರಿ.

ಹೀಗೆಲ್ಲಾ ಮಾಡಲು ಸಾಧ್ಯವಾಗುವುದು ಈ ಸಂಘಟನೆ ಖಿಲಾಫತ್ ಎಂಬ ಅನುಗ್ರಹವನ್ನು ಗಳಿಸಿರುವ ಕಾರಣದಿಂದಾಗಿದೆ. ಈ ಸಮುದಾಯದ ಜನರು ಖಲೀಫರನ್ನು ಪ್ರೀತಿಸುತ್ತಾರೆ. ಖಲೀಫರು ಸಹ ಜನರನ್ನು ಪ್ರೀತಿಸುತ್ತಾರೆ. ಅವರು ಒಟ್ಟಿಗೆ ಸೇರಿ ಅಲ್ಲಾಹನಿಗೆ ಸಂಬಂಧಿಸಿದ ತಮ್ಮ ಕರ್ತವ್ಯಗಳನ್ನು ಈಡೇರಿಸುತ್ತಾರೆ ಮತ್ತು ದೇವಸೃಷ್ಟಿಗಳಿಗೆ ಸಂಬಂಧಿಸಿದ ಹಕ್ಕುಗಳನ್ನು ನೀಡುತ್ತಾರೆ. ಇವೆಲ್ಲವನ್ನೂ ದೇವ ಪ್ರೀತಿಯ ಗಳಿಕೆಗಾಗಿ ಮಾಡಲಾಗುತ್ತಿದೆ. ಅಲ್ಲಾಹನ ಅಪರಿಮಿತ ದಯಾಗುಣ ಮತ್ತು ಕರುಣೆಯ ಮೂಲಕ ಈ ಪರಸ್ಪರ ಪ್ರೀತಿ ಶಾಶ್ವತವಾಗಿ ಮುಂದುವರಿಯುವುದು.

ಕೊನೆಯದಾಗಿ, ತಮ್ಮ ಅಮೂಲ್ಯ ಸಮಯವನ್ನು ಈ ಸಭೆಗೆ ಬಂದು ವಿನಿಯೋಗಿಸಿದ ಮಾನ್ಯ ಅತಿಥಿಗಳಿಗೆ ನಾನು ಕೃತಜ್ಞತೆ ಅರ್ಪಿಸಲು ಬಯಸುತ್ತೇನೆ. ನಿಮಗೆಲ್ಲರಿಗೂ ಕೃತಜ್ಞತೆಗಳು. ಅಲ್ಲಾಹನು ನಿಮ್ಮನ್ನು ಆಶೀರ್ವದಿಸಲಿ.

☆

***(The Review of Religions June 2008)***

ಮೇ ದಿನಾಂಕ 27ರಂದು ಅಹ್ಮದಿಯಾ ಖಿಲಾಫತಿನ 100 ವರ್ಷಗಳು ಪೂರ್ಣಗೊಂಡವು. ನಮ್ಮವರಿಗೆ ಮತ್ತು ಅನ್ಯರಿಗೆ ಅಲ್ಲಾಹನು ತನ್ನ ಸಹಾಯದ ಚಿಹ್ನೆಗಳನ್ನು ತೋರಿಸಿದನು. ಅಲ್ಲಿ ಸಭಾಗೃಹದಲ್ಲಿದ್ದ ಅಹ್ಮದಿ ಪುರುಷರು, ಮಹಿಳೆಯರು ಮತ್ತು ಮಕ್ಕಳ ಪೈಕಿ ನನ್ನನ್ನು ಭೇಟಿಯಾದವರು ಹೇಳಿದರು: "ಈ ಸಮಾರಂಭದಿಂದ ನಮ್ಮ ವಿಶ್ವಾಸ ಚೈತನ್ಯ ಪೂರ್ಣವಾಗಿದೆ." ಹೊರದೇಶಗಳ ಅಹ್ಮದಿಯರ ಸ್ಥಿತಿಯೂ ಹೀಗೆಯೇ ಇದೆ. ಎಲ್ಲಾ ಕಡೆಗಳಿಂದ ಖಿಲಾಫತ್ ಬಗ್ಗೆ ಅಪರಿಮಿತ ಪ್ರೀತಿ, ಆದರ ಮತ್ತು ವಿಶ್ವಾಸದಲ್ಲಿ ದೃಢತೆ ಉಂಟಾದ ಬಗ್ಗೆ ಪತ್ರಗಳು ಬರುತ್ತಾ ಇವೆ. ಒಬ್ಬರು ಹೀಗೆ ಬರೆದರು: "ನಾನು ಹೊಸದಾಗಿ ಅಹ್ಮದಿ ಆದ ಹಾಗೆ ನನಗೆ ಭಾಸವಾಗುತ್ತದೆ." ಕೆಲವರು ಖಿಲಾಫತ್‌ಗೆ ಬೈಅತ್ ಮಾಡಿದ್ದರೂ ಅನೇಕ ಸಂಶಯಗಳಿಗೆ ಗುರಿಯಾಗಿದ್ದರು. ಅಂತಹ ಜನರು ಹೀಗೆ ಬರೆದರು: "ನಾವು ಅಲ್ಲಾಹನೊಂದಿಗೆ ಕ್ಷಮೆ ಕೇಳಿದ್ದೇವೆ. ನಾವು ನಿಮ್ಮೊಂದಿಗೆ ಪ್ರತಿಜ್ಞೆ ಮಾಡುತ್ತೇವೆ. ಅಲ್ಲಾಹನು ನಿಮ್ಮ ಭಾಷಣದ ಅನುಗ್ರಹದಿಂದ ನಮ್ಮ ಹೃದಯಗಳನ್ನು ಸ್ವಚ್ಛಗೊಳಿಸಿರುವನು. ಅವನು ನಮ್ಮ ಹೃದಯಗಳನ್ನು ತೊಳೆದು ಹೊಳಪುಗೊಳಿಸಿರುವ ನೆಂದೇ ಹೇಳಬೇಕು. ನಾವು ಅಹ್ಮದಿಯಾ ಖಿಲಾಫತ್‌ಗಾಗಿ ಪ್ರತಿಯೊಂದು ಬಲಿದಾನಕ್ಕೆ ಹೃತ್ಪೂರ್ವಕವಾಗಿ ಸಿದ್ಧರಾಗಿರುವೆವು. ನಮ್ಮ ಸಂತಾನಗಳಲ್ಲೂ ಈ ಭಾವನೆ ಉಂಟುಮಾಡಲು ಪ್ರಯತ್ನಿಸುವೆವು. ಅವರು ಯಾವಾಗಲೂ ಖಿಲಾಫತ್‌ನಿಂದ ಅನುಗ್ರಹ ಪಡೆಯುವವರಾಗಲಿ."

ಒಬ್ಬರು ಹೀಗೆ ಬರೆದರು: "ಮೃತರನ್ನು ಜೀವಂತಗೊಳಿಸಲು ಯಾವುದಾದರೂ ಸಮಾರಂಭ ಏರ್ಪಡಿಸಬಹುದಾದರೆ ಅದು ಈ ಸಮಾರಂಭ ಮತ್ತು ನಿಮ್ಮ ಭಾಷಣವಾಗಿದೆ."

ಈ ಸಮಾರಂಭದಿಂದ ಅಹ್ಮದಿಯಾ ಲೋಕದಲ್ಲಿ ಉಂಟಾದ ಕ್ರಾಂತಿ ಸ್ಥಿರವಾಗಿರಲು ಅಲ್ಲಾಹನು ಅನುಗ್ರಹಿಸಲಿ. ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವ ದಾಸರಾಗಿ ನಮ್ಮ ಹೃದಯಗಳ ಪರಿಶುದ್ಧ ಬದಲಾವಣೆಯನ್ನು ಯಾವಾಗಲೂ ಕಾಪಾಡುವವರಾಗೋಣ.

ಎಕ್ಸೆಲ್ ಸೆಂಟರಿನ ಸುತ್ತು ಮುತ್ತಲಿನ ಜನರು ಅಲ್ಲಿ ಸಭೆ ಸೇರಿದ ಜನರ ಸ್ಥಿತಿಯನ್ನು ನೋಡಿ ಆಶ್ಚರ್ಯಗೊಂಡಿದ್ದರು. ಈ ಜನರು ಎಂತಹ ಜನರೆಂದು ಅವರು ವಿಚಾರಿಸುತ್ತಾ ಇದ್ದರು. ಸಾಮಾನ್ಯವಾಗಿ ಮುಸ್ಲಿಮರು ಶಿಸ್ತಿಗೆ ಬದ್ಧರಲ್ಲ; ಅವರ ನಡೆವಳಿಕೆ ವಿಚಿತ್ರ ಎಂದು ಅವರು ಭಾವಿಸುತ್ತಾ ಇದ್ದರು. ಪಾಶ್ಚಮಾತ್ಯ ದೇಶಗಳ ಜನರ ಅಭಿಪ್ರಾಯ ಹೀಗೆಯೇ ಇದೆ. ಆದರೆ ಸಭಾಗೃಹದಲ್ಲಿ ಸೇರಿದ ಜನರು ಮುಸ್ಲಿಮರಾಗಿದ್ದರೂ ಶಿಸ್ತುಬದ್ಧರಾಗಿರುವುದು ಅವರಿಗೆ ಆಶ್ಚರ್ಯಕರವಾಗಿತ್ತು. ಏಶಿಯಾದ ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ವಿವಿಧ ಜನಾಂಗಗಳ ಜನರು ಸಹ ಅಲ್ಲಿ ಸೇರಿದ್ದರು. ಮಕ್ಕಳು, ತರುಣರು, ಪುರುಷರು, ಮಹಿಳೆಯರು ವಿವಿಧ ಜನಾಂಗಗಳಿಗೆ ಸೇರಿದವರಾಗಿದ್ದರೂ ಅವರು ಒಂದು ಕಡೆಗೆ ಅಭಿಮುಖೀಕರಿಸುವವರಾಗಿದ್ದರು. ಖಿಲಾಫತ್ ಬಗ್ಗೆ ಇದ್ದ ಪ್ರೀತಿ, ವಿಶ್ವಾಸ ಮತ್ತು ಆದರ ಅವರ ಮುಖಗಳಿಂದ ಪ್ರಕಟವಾಗುತ್ತಾ ಇತ್ತು. ಅವರ ಶರೀರದ ಅಂಗಾಂಗಳು ಅದನ್ನು ಸೂಚಿಸುತ್ತಿದ್ದವು.

ಎಕ್ಸೆಲ್ ಸೆಂಟರಿನ ಸೆಕ್ಯೂರಿಟಿಗೆ ಸಂಬಂಧಿಸಿದ ಒಬ್ಬ ಮಹಿಳೆ ನಮ್ಮ ಮಹಿಳೆಯರೊಂದಿಗೆ ಹೇಳಿದರು: "ಇದು ನನಗೆ ಹೊಸ ಅನುಭವವಾಗಿದೆ. ಇಸ್ಲಾಮ್ ಏನೆಂದು ಈಗ ನನಗೆ ತಿಳಿಯಿತು. ನಾನು ಈ ದೃಶ್ಯವನ್ನು ನೋಡಿ ಮುಸ್ಲಿಮಳಾಗಲು ಬಯಸುತ್ತೇನೆ."

ಇದು ಆ ಜನರ ತಾತ್ಕಾಲಿಕ ಪ್ರತಿಕ್ರಿಯೆ ಆಗಿದೆ. ಈ ಮಹಿಳೆಗೆ ಮತ್ತು ಇಂತಹ ಬಹಳ ಜನರ ಹೃದಯಗಳಲ್ಲಿ ಅಲ್ಲಿನ ದೃಶ್ಯ ಪರಿಶುದ್ಧ ಬದಲಾವಣೆ ಉಂಟುಮಾಡಲಿ ಎಂದು ಅಲ್ಲಾಹನನ್ನು ಬೇಡಿಕೊಳ್ಳುತ್ತೇವೆ.

ನಮ್ಮ ಉದ್ದೇಶ ಲಕ್ಷ್ಯ ಜನರು ತಮ್ಮ ಸೃಷ್ಟಿಕರ್ತನನ್ನು ಗುರುತಿಸಲಿ ಮತ್ತು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್‌ರವರ ಪತಾಕೆಯ ಕೆಳಗೆ ಬಂದು ಸೇರಲಿ ಎಂದೇ ಆಗಿದೆ. ಜನರು ಯಾವುದಾದರೂ ರೀತಿಯಲ್ಲಿ ಸತ್ಯವನ್ನು ಗ್ರಹಿಸುವವರಾಗಲಿ. ಅಹ್ಮದಿಯಾ ಖಿಲಾಫತಿನ ಜೂಬಿಲಿ ಜಲ್ಸದ ಮೂಲಕ ನಮ್ಮವರು ಮತ್ತು ಅನ್ಯರು ಐಕ್ಯತೆಯ ಒಂದು ಹೊಸ ವೈಭವವನ್ನು ಕಂಡರು. ಇದು ಇಂದು ಕೇವಲ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಜಮಾಅತಿನ ವೈಶಿಷ್ಟ್ಯವಾಗಿದೆ. ಇಂದು ಈ ಐಕ್ಯದ ಕಾರಣದಿಂದ ನೆಮ್ಮದಿಯ ಕೋಟೆಯೊಳಗೆ ಅಲ್ಲಾಹನ ವಾಗ್ದಾನ ಪ್ರಕಾರ ಯಾವುದಾದರೂ ಜಮಾಅತ್ ಇದ್ದರೆ ಅದು ಕೇವಲ ಮಸೀಹ್ ಮುಹಮ್ಮದಿಯ ಜಮಾಅತ್ ಆಗಿದೆ. ಉಳಿದ ಎಲ್ಲರೂ ಅನೈಕ್ಯಕ್ಕೆ ಪಾತ್ರರಾಗಿರುವರು ಮತ್ತು ಹಾಗೆಯೇ ಮುಂದುವರಿಯುವರು. ಅವರು ಅಲ್ಲಾಹನ ಪಾರಿತೋಷಕದ ಬಗ್ಗೆ ಸಾಕಷ್ಟು ಗಮನ ಹರಿಸುವ ತನಕ ಮತ್ತು ಅವರು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಹೇಳಿದ "ನನ್ನ ಮಹ್‌ದೀ ಮಸೀಹ್ ಆಗಮಿಸಿದಾಗ ನನ್ನ ಸಲಾಮ್ ತಲಪಿಸಿರಿ" ಎಂಬ ಮಾತನ್ನು ಅಂಗೀಕರಿಸುವ ತನಕ ಅವರ ಸ್ಥಿತಿ ಹೀಗೆಯೇ ಆಗಿ ಉಳಿಯುವುದು.

ಮುಸಲ್ಮಾನರ ಈಗಿನ ಸ್ಥಿತಿ ಮೇಲಿನ ಮಾತಿಗೆ ಸಾಕ್ಷ್ಯಾಧಾರವಾಗಿದೆ. ಮುಸ್ಲಿಮೇತರರು ತಮ್ಮ ಸೃಷ್ಟಿಕರ್ತನಿಂದ ದೂರ ಸರಿದು ಶೈತಾನನ ಮಡಿಲಲ್ಲಿ ಬಿದ್ದಿರುವರು. ಅವರು ತಮ್ಮ ಸೃಷ್ಟಿಕರ್ತನನ್ನು ಮರೆತಿದ್ದಾರೆ. ಮನುಷ್ಯನನ್ನು ಸೃಷ್ಟಿಸಿದುದರ ಉದ್ದೇಶವನ್ನು ಅವರು ಮರೆತುಬಿಟ್ಟಿದ್ದಾರೆ. ತಮ್ಮನ್ನು ಸೃಷ್ಟಿಸಿದುದರ ಉದ್ದೇಶವೇನೆಂಬುದರ ಕುರಿತು ಅವರಿಗೆ ಜ್ಞಾನವೇ ಇಲ್ಲವಾಗಿದೆ.

ಇಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಜಮಾಅತ್ ಮಾತ್ರ ಮನುಷ್ಯನ ಸೃಷ್ಟಿಯ ಉದ್ದೇಶವನ್ನು ಅರಿತು ಅದನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುತ್ತಾ ಇದೆ. ಇಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಜಮಾಅತ್ ಮಾತ್ರ "ಉರ್‌ವತುಲ್ ಉಸ್‌ಕಾ" – ಮುರಿದು ಹೋಗದ ಕೈಯಾಸರೆಯನ್ನು ಹಿಡಿದಿದೆ. ಅದರ ಮೂಲಕ ಅವರಿಗೆ ಸರಿಯಾದ ಮಾರ್ಗವು ನಿರ್ಧರಿಸಲ್ಪಡುತ್ತದೆ. ಅವರು ಎಂತಹ ಬಲಿಷ್ಠ ಕೈಯಾಸರೆಯನ್ನು ಹಿಡಿದಿರುವರೆಂದರೆ ಅದು ಮುರಿದು ಹೋಗಲಾರದೆಂಬ ಖಾತರಿಯನ್ನು ಅಲ್ಲಾಹನೇ ನೀಡಿದ್ದಾನೆ. ಅಲ್ಲಾಹನು ಇಂದು ತನ್ನ ಅನುಗ್ರಹದಿಂದ ಅಹ್ಮದಿಯರಿಗೆ ಎಂತಹ ಪಾತ್ರೆಯ ಕೈಯಾಸರೆಯನ್ನು ಬಲಿಷ್ಠವಾಗಿ ಹಿಡಿಸಿರುವನೆಂದರೆ ಅದರಲ್ಲಿ ಮುಹಮ್ಮದೀ ಮಸೀಹರ ಮೂಲಕ ಅಲ್ಲಾಹನು ತಾಜಾ ಆಧ್ಯಾತ್ಮಿಕ ನೀರನ್ನು ತುಂಬಿಸಿದ್ದಾನೆ. ಅದು ಜೀವದಾಯಕ ಜಲವಾಗಿದೆ. ಅದನ್ನು ಕುಡಿಯುವುದರಿಂದ ಆಧ್ಯಾತ್ಮಿಕತೆಯ ಅತ್ಯಂತ ಉನ್ನತ ಮಟ್ಟವನ್ನು ಒಬ್ಬ ಸತ್ಯವಿಶ್ವಾಸಿ ತಲಪಬಲ್ಲನು. ಬಲಿಷ್ಠವಾದ ಕೈಯಾಸರೆಯನ್ನು ಹಿಡಿಯುವುದರ ಇನ್ನೊಂದು ಅರ್ಥವೇನೆಂದರೆ, ಹಾಗೆ ಹಿಡಿದಿರುವವರ ವಿಶ್ವಾಸ ಯಾವಾಗಲೂ ಸುರಕ್ಷಿತವಾಗಿ ಉಳಿಯುವುದು. ಮುಹಮ್ಮದೀ ಮಸೀಹರ ದಾಸರಾಗಿ ಬೈಅತ್ ಮಾಡುವವರು ಮತ್ತು ಬೈಅತ್ ಶರತ್ತುಗಳನ್ನು ಈಡೇರಿಸಲು ಪ್ರಯತ್ನಿಸುವವರು ತಮ್ಮ ವಿಶ್ವಾಸವನ್ನು ವರ್ಧಿಸುತ್ತಾ ಹೋಗುವರು. ಪ್ರತಿಯೊಂದು ಪರಿಸ್ಥಿತಿಯಲ್ಲಿ, ಪ್ರತಿಯೊಂದು ವಿರೋಧದ ಕಾಲದಲ್ಲಿ ಈ ಕೈಯಾಸರೆ ಹಿಡಿದವರ ವಿಶ್ವಾಸ ಸುರಕ್ಷಿತವಾಗಿ ಉಳಿಯುವದು. ಈ ಕೈಯಾಸರೆಯನ್ನು ಹಿಡಿದ ಸತ್ಯವಿಶ್ವಾಸಿ ತನ್ನ ಜೀವವನ್ನು ಕೊಡಲು ಸಿದ್ಧನಾಗುವನು. ಆದರೆ ಕೈಯಾಸರೆಯನ್ನು ಬಿಡಲಾರನು. ಅದನ್ನು ಬಿಡುವುದರಿಂದ ಅವನ ವಿಶ್ವಾಸ ಅಪಾಯಕ್ಕೊಳಗಾಗುತ್ತದೆ.

ಅಹ್ಮದಿಯಾ ಚರಿತ್ರೆ ಎಂತಹ ಘಟನೆಗಳಿಂದ ತುಂಬಿದೆ ಎಂದರೆ ಶತ್ರುತ್ವದ ಬಿರುಗಾಳಿ ನಿಜವಾದ ಸತ್ಯವಿಶ್ವಾಸಿಗಳ ವಿಶ್ವಾಸವನ್ನು ಅಲುಗಾಡಿಸಲು ಶಕ್ತವಾಗಲಿಲ್ಲ. ತಾಯಂದಿರ ಮುಂದೆ ಪುತ್ರರು ಕೊಲ್ಲಲ್ಪಟ್ಟರು, ಪುತ್ರರ ಮುಂದೆ ತಂದೆಯಂದಿರನ್ನು ಪೀಡಿಸುತ್ತಾ ಕೊಲ್ಲಲಾಯಿತು; ಶಹೀದರನ್ನಾಗಿ ಮಾಡಲಾಯಿತು. ತಂದೆಯಂದಿರ ಮುಂದೆ ಪುತ್ರರು ಕೊಲ್ಲಲ್ಪಟ್ಟರು. ಅಹ್ಮದಿಯತನ್ನು ಬಿಟ್ಟು ಬಿಡಲು ಅಹ್ಮದಿಯರನ್ನು ಕ್ರೂರ ಹಿಂಸೆಗಳಿಗೆ ಗುರಿಪಡಿಸಲಾಯಿತು. ನಿಧಾನವಾಗಿ ಹಿಂಸಿಸಿ ಕೊಲ್ಲಲಾಯಿತು. ಇವು ದೂರದ ಸಂಭವಗಳಲ್ಲ. ಈ ವರ್ಷ ಸಹ ಇಂತಹ ಘಟನೆಗಳು ನಡೆದುವು. ಆದರೆ ಯಾವ ವಿಶ್ವಾಸದ ಮೇಲೆ ಅವರು ನಿಂತಿದ್ದರೋ ಹಿಂಸಾಚಾರಗಳು ಅವರ ಬಲಿಷ್ಠ ಪಾದಗಳನ್ನು ಅಲುಗಾಡಿಸಲು ಸಮರ್ಥವಾಗಲಿಲ್ಲ.

ನಾವು ಜೂಬಿಲಿಯ ಸಂತೋಷಾಚರಣೆ ಮಾಡುತ್ತಾ ಇರುವುದು ಅಹ್ಮದಿಯಾ ಖಿಲಾಫತ್‌ಗೆ ನೂರು ವರ್ಷ ತುಂಬಿದಾಗ ಉಂಟಾದ ಅಲ್ಲಾಹನ ಅನುಗ್ರಹಗಳ ಬಗ್ಗೆ ಸಂತೋಷ ಪ್ರಕಟಣೆಯಾಗಿದೆ. ಅಲ್ಲಾಹನು ನೀಡಿದ ಪಾರಿತೋಷಕವಾದ ಖಿಲಾಫತ್‌ಗೆ ನೂರು ವರ್ಷಗಳ ಕಾಲ ಅಂಟಿಕೊಂಡು ನಿಂತ ಕಾರಣ ಅಲ್ಲಾಹನು ಹಚ್ಚಹಸುರಾದ ತೋಟವನ್ನು ನಮಗೆ ನೀಡಿರುವನು. ಅದರ ಬಗ್ಗೆ ನಾವು ಸಂತೋಷಿಸುತ್ತಿದ್ದೇವೆ. ನಾವು ಈ ಹಚ್ಚ ಹಸುರಾದ ತೋಟಗಳನ್ನು ನೋಡಿ ಸಂತೋಷಪಡುವಾಗ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇವೆ. ಆಗ ನಾವು ಅಹ್ಮದಿಯತಿನ ಶಹೀದರನ್ನೂ ನೆನಪಿಸಬೇಕು. ನಾವು ಅವರಿಗಾಗಿ ಮತ್ತು ಅವರ ಮಕ್ಕಳಿಗಾಗಿ ಪ್ರಾರ್ಥಿಸಬೇಕು. ಆ ಶಹೀದರು ತಮ್ಮ ರಕ್ತದಿಂದ ಈ ತೋಟಗಳಿಗೆ ನೀರು ಸಿಂಚನ ಮಾಡಿರುವರು. ಅವರು ತಮ್ಮ ವಿಶ್ವಾಸದ ದೃಢತೆಯ ಎಂತಹ ಉದಾಹರಣೆ ನೀಡಿದರೆಂದರೆ ಅವು ಚರಿತ್ರೆಯ ಸುವರ್ಣ ಅಧ್ಯಾಯಗಳಾಗಿವೆ.

"ಉರ್‌ವ"ದ ಇನ್ನೊಂದು ಅರ್ಥ ಯಾವಾಗಲೂ ಹಚ್ಚ ಹಸುರಾಗಿರುವ ಬೆಳೆಯಾಗಿದೆ. ಮಳೆ ಕಡಿಮೆಯಾದರೂ ಅದು ಒಣಗಿ ಹೋಗಲಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರನ್ನು ನಂಬಿದವರನ್ನು ಜಮಾಅತಿನ ರೂಪದಲ್ಲಿ ಅಲ್ಲಾಹನು ಅವರಿಗೆ ನೀಡಿರುವನು – ಅದು ಯಾವಾಗಲೂ ಹಚ್ಚ ಹಸುರಾಗಿ ಇರಲಿಕ್ಕೋಸ್ಕರವಾಗಿದೆ. ಮಂಜಿನ ಹನಿಗಳು ಸಹ ಅದನ್ನು ಸಮೃದ್ಧ ಗದ್ದೆಗಳ ಹಾಗೆ ಮತ್ತು ಹಚ್ಚ ಹಸುರಾದ ತೋಟದ ರೂಪದಲ್ಲಿ ಬಾಕಿಯಾಗಿ ಇರಿಸುವುದು. ನೀವು "ಉರ್‌ವತುಲ್ ಉಸ್‌ಕಾ"ವನ್ನು ಬಿಗಿಯಾಗಿ ಹಿಡಿದುಕೊಂಡು ಇದ್ದರೆ ಅಲ್ಲಾಹನ ಪಾರಿತೋಷಕಗಳಿಗೆ ವಾರೀಸುದಾರರಾಗುತ್ತಾ ಹೋಗುವಿರಿ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿರುವನು: "ಯಾರು ಶೈತಾನನ ಮಾತುಗಳನ್ನು ತಿರಸ್ಕರಿಸುತ್ತಾನೋ ಮತ್ತು ಸತ್ಯ ವಿಶ್ವಾಸದಲ್ಲಿ ಸ್ಥಿರವಾಗಿ ನಿಲ್ಲುತ್ತಾನೋ ಖಂಡಿತವಾಗಿಯೂ ಅವನು ಅತ್ಯಂತ ವಿಶ್ವಾಸಾರ್ಹ ಬಲಿಷ್ಠ ಕೈಯಾಸರೆಯನ್ನು ಹಿಡಿದುಕೊಂಡಿದ್ದಾನೆ. ಅದು ಎಂದೂ ಮುರಿದು ಹೋಗಲಾರದು. ಅಲ್ಲಾಹನು ಬಹಳ ಆಲಿಸುವವನೂ ಬಹಳ ತಿಳಿದುಕೊಳ್ಳುವವನೂ ಆಗಿದ್ದಾನೆ." (2:257)

ಯಾರು ಹೃದಯದ ಪರಿಶುದ್ಧತೆಯೊಂದಿಗೆ ನಿಷ್ಠಾವಂತರಾಗಿ ಅಲ್ಲಾಹನ ಪಾರಿತೋಷಕವಾದ ಖಿಲಾಫತ್‌ಗೆ ಅಂಟಿಕೊಂಡಿರುತ್ತಾರೋ ಮತ್ತು ಅಲ್ಲಾಹನ ಮುಂದೆ ಬಾಗುತ್ತಾ ಈ ಬಲಿಷ್ಠ ಕೈಯಾಸರೆಯನ್ನು ಹಿಡಿದಿಟ್ಟುಕೊಳ್ಳಲು ಪ್ರಾರ್ಥಿಸುತ್ತಾ ಇರುತ್ತಾರೋ ಅಂತಹ ಜನರು ನೆನಪಿಡಲಿ, ಅಲ್ಲಾಹನು ಬಹಳ ಪ್ರಾರ್ಥನೆಗಳನ್ನು ಆಲಿಸುವವನಾಗಿದ್ದಾನೆ. ಅವನು ನಮ್ಮ ಹೃದಯಗಳ ಸ್ಥಿತಿಯನ್ನು ತಿಳಿದುಕೊಳ್ಳುತ್ತಾನೆ. ಒಳ್ಳೆಯ ಸಂಕಲ್ಪದಿಂದ ಮಾಡಿದ ಪ್ರಾರ್ಥನೆಯನ್ನು ಮತ್ತು ಪ್ರಯತ್ನಗಳನ್ನು ಅವನು ನಿಷ್ಫಲಗೊಳಿಸುವುದಿಲ್ಲ. ನಮ್ಮ ಹೃದಯ ಸತ್ಯವಿಶ್ವಾಸದಿಂದ ತುಂಬಿರುವುದು. ನಾವು ಅಲ್ಲಾಹನ ಪಾರಿತೋಷಕದಿಂದ ಅನುಗ್ರಹ ಪಡೆಯುವೆವು. ನಮ್ಮಲ್ಲಿ ಪ್ರತಿಯೊಬ್ಬರ ವಿಶ್ವಾಸ ಬಲಿಷ್ಠವಾಗುತ್ತಾ ಹೋಗುವುದು. ಸಾಮಾನ್ಯ ಬಲಹೀನತೆಗಳನ್ನು ಅಲ್ಲಾಹನು ನಮ್ಮ ಸಂಕಲ್ಪ ಶುದ್ಧಿಯ ಕಾರಣದಿಂದ ಕಡೆಗಣಿಸಿ ನಮ್ಮಲ್ಲೂ ನಮ್ಮ ಸಂತಾನ ಗಳಲ್ಲೂ ಎಂತಹ ವಿಶ್ವಾಸವನ್ನು ಉಂಟುಮಾಡುವನೆಂದರೆ ನಮ್ಮ ಸಂತಾನ ಮತ್ತು ನಾವು ಸಮೃದ್ಧ ಬೆಳೆಯ ವಾರೀಸುದಾರರಾಗುತ್ತಾ ಹೋಗುವೆವು.

ಇಂದು ಖಿಲಾಫತ್ ನೂರು ವರ್ಷ ಪೂರ್ಣಗೊಳಿಸಿದಾಗ ನಾವು ನೋಡುವ ದೃಶ್ಯಗಳು ನಮ್ಮ ವಿಶ್ವಾಸವನ್ನು ತಾಜಾಗೊಳಿಸುತ್ತವೆ ಮತ್ತು ಜಮಾಅತಿನ ಐಕ್ಯತೆಯ ಮತ್ತು ಅಭಿವೃದ್ಧಿಯ ಹಚ್ಚಹಸುರಾದ ಬೆಳೆಗಳು ಕಾಣಿಸುತ್ತವೆ. ಅನ್ಯರಿಗೆ ಇದೆಲ್ಲಾ ಆಶ್ಚರ್ಯಕರವಾಗಿದೆ. ಕೆಲವು ಅಸೂಯೆಗಾರರ ಅಸೂಯೆ ವರ್ಧಿಸುತ್ತಾ ಹೋಗುತ್ತದೆ. ಪಾಕಿಸ್ತಾನದಲ್ಲಿ ಇಂತಹ ಸ್ಥಿತಿ ಇದೆ. ಇದು ಈ ಕಾಲದಲ್ಲಿ ನಾವು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರವರ(ಸ) ಭವಿಷ್ಯವಾಣಿ ಪ್ರಕಾರ ಹಝ್ರತ್ ಮಸೀಹ್ ಮೌಊದ್‌ರವರನ್ನು(ಅ) ನಂಬಿದ ಕಾರಣ ಮತ್ತು ಖಿಲಾಫತ್‌ನೊಂದಿಗೆ ಸಂಬಂಧ ಜೋಡಿಸಿದ ಕಾರಣದಿಂದಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಾರೆ: "ಹಿಂದಿನ ಪ್ರವಾದಿಗಳ ಅದ್ಭುತ ಕೃತ್ಯಗಳು ಅವರು ಮೃತರಾದಾಗ ಕೊನೆಗೊಂಡವು. ಆದರೆ ನಮ್ಮ ಪ್ರವಾದಿ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರವರ(ಸ) ಅದ್ಭುತ ಕೃತ್ಯಗಳು ಈಗ ಸಹ ಪ್ರಕಟವಾಗುತ್ತಾ ಇವೆ ಮತ್ತು ಖಿಯಾಮತ್ ದಿನದ ತನಕ ಅವು ಪ್ರಕಟವಾಗುತ್ತಾ ಹೋಗುವುವು. ನನ್ನ ಪರವಾಗಿ ಪ್ರಕಟವಾಗುವ ಅದ್ಭುತ ಕೃತ್ಯಗಳು ಯಥಾರ್ಥವಾಗಿ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರವರ(ಸ) ಅದ್ಭುತ ಕೃತ್ಯಗಳಾಗಿವೆ." (ಹಖೀಖತುಲ್‌ವಹೀ – ರೂಹಾನಿ ಖಝಾಯಿನ್ ಸಂಪುಟ 23 ಪುಟ 468 - 469)

ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಯನ್ನು ಯಾವಾಗಲೂ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರೊಂದಿಗೂ ತನ್ನೊಂದಿಗೂ ಅಂಟಿಸಿಕೊಂಡು ಇರಿಸಲಿ. ಹಝ್ರತ್ ರಸೂಲುಲ್ಲಾಹ್‌ರವರ(ಸ) ನಿಜವಾದ ಪ್ರೇಮಿಯೊಂದಿಗೆ ನಿಷ್ಠೆಯ ಸಂಬಂಧ ಹೊಂದುವವ ನನ್ನಾಗಿ ಮಾಡಲಿ. ಅಹ್ಮದಿಯಾ ಖಿಲಾಫತಿನ ರಕ್ಷಣೆಗಾಗಿ ಬಲಿದಾನದ ಪ್ರತಿಜ್ಞೆ ಈಡೇರಿಸುವವನನ್ನಾಗಿ ಮಾಡಲಿ. ಇಂದು ನಾವು ನೋಡಿದ ಐಕ್ಯತೆಯ, ಖಿಲಾಫತ್‌ನೊಂದಿಗೆ ಪ್ರೀತಿ ಮತ್ತು ನಿಷ್ಠೆಯ ಭಾವಾವೇಶದ ದೃಶ್ಯಗಳು ಅನ್ಯರನ್ನೂ ಪ್ರಭಾವಿಸುವಂತೆ ಮಾಡುವ ಒಂದು ಪವಾಡವಾಗಿತ್ತು. ಅಂತಹ ಸ್ಥಿತಿಯನ್ನು ಕಾಪಾಡಲು ಅಲ್ಲಾಹನ ಮುಂದೆ ಬಾಗುತ್ತಾ ಇರಬೇಕು. ಈ ಕಾರಣದಿಂದ ಅಲ್ಲಾಹನು ತನ್ನ ಬಹುಮಾನಗಳನ್ನು ನಮ್ಮಲ್ಲಿ ಪ್ರತಿಯೊಬ್ಬರಿಗೆ ಮತ್ತು ನಮ್ಮ ಸಂತಾನ ಪರಂಪರೆಗೆ ಶಾಶ್ವತವಾಗಿ ನೀಡುತ್ತಾ ಇರಲಿ. ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ವಾಗ್ದಾನ ಮಾಡಿರುವುದೇನೆಂದರೆ, ನೀವು ಕೃತಜ್ಞತೆ ಸೂಚಿಸುವವರಾದರೆ ಇನ್ನಷ್ಟು ಬಹುಮಾನಗಳನ್ನು ನೀಡುವೆನು. ನಿಮ್ಮ ವಿಶ್ವಾಸವನ್ನು ವರ್ಧಿಸುವೆನು. ಹಾಗೆ ನೀವು ನನ್ನ ಅನುಗ್ರಹಗಳ ವಾರೀಸುದಾರರಾಗುತ್ತಾ ಹೋಗುವಿರಿ.

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ:

"ನೀವು ಕೃತಜ್ಞತೆಯುಳ್ಳವರಾದರೆ ನಾನು ಖಂಡಿತವಾಗಿಯೂ ನಿಮಗೆ ಅನುಗ್ರಹಗಳನ್ನು ವೃದ್ಧಿಗೊಳಿಸುವೆನು." (14 : 8)

ನಾನು ಈ ದಿನಗಳಲ್ಲಿ ನನಗೆ ಬರುವ ಪತ್ರಗಳನ್ನು ಪರಿಶೀಲಿಸುವಾಗ ಹೃದಯ ವಿಚಿತ್ರ ಭಾವನೆ ಹೊಂದುತ್ತದೆ. ಅಲ್ಲಾಹನಿಗೆ

ಹೇಗೆ ಕೃತಜ್ಞತೆ ಅರ್ಪಿಸಲಿ ಎಂದು ಯೋಚಿಸುತ್ತೇನೆ. ಜಮಾಅತಿನ ಮೇಲೆ ಅಲ್ಲಾಹನ ಅನುಗ್ರಹದ ಮಳೆ ಹೇಗೆ ಸುರಿಯುತ್ತದೆ ಎಂದರೆ ಶರೀರದ ಕಣಕಣಗಳೂ ಕೃತಜ್ಞತೆ ಅರ್ಪಿಸಿದರೂ ಕೃತಜ್ಞತೆ ಸಲ್ಲಿಸುವುದು ಸಾಕಾಗಲಾರದು. ಹಝ್ರತ್ ಮಸೀಹ್ ಮೌಊದ್‌ರವರ(ಅ) ಜಮಾಅತಿಗೆ ಖಿಲಾಫತ್ ರೂಪದಲ್ಲಿ ನೀಡಿದ ಬಹುಮಾನದ ಬಗ್ಗೆ ಜಮಾಅತ್ ಕೃತಜ್ಞತೆ ಅರ್ಪಿಸುತ್ತಾ ಇದೆ. ಕೃತಜ್ಞತೆ ಅರ್ಪಣೆಯ ಎಷ್ಟು ಪತ್ರಗಳು ಬರುತ್ತಿವೆ ಎಂದರೆ ನಾನು ನಿಸ್ಸಂಶಯವಾಗಿ ಹೇಳುತ್ತೇನೆ: ಹಝ್ರತ್ ಮಸೀಹ್ ಮೌಊದ್‌ರವರ(ಅ) ಜಮಾಅತ್‌ನಲ್ಲಿ ಎಂತಹ ಜನರಿದ್ದಾರೆಂದರೆ ಅವರು ಅಲ್ಲಾಹನಿಗೆ ತುಂಬಾ ಕೃತಜ್ಞತೆ ಅರ್ಪಿಸುವವರಾಗಿದ್ದಾರೆ. ಕೃತಜ್ಞತೆ ಅರ್ಪಿಸುವ ಇಂತಹ ಭಾವನೆ ವರ್ಧಿಸಿದ ಹಾಗೆ ನಾವು ಅಲ್ಲಾಹನ ಬಹುಮಾನಗಳ ವಾರೀಸುದಾರರಾಗುತ್ತಾ ಹೋಗುವೆವು. ನಮ್ಮ ಸಂತಾನ ಸಹ ವಾರೀಸುದಾರರಾಗುತ್ತಾ ಹೋಗುವರು.

ಆದುದರಿಂದ ನೀವು ಕೃತಜ್ಞತೆಯ ಭಾವನೆಯನ್ನು ಎಂದಿಗೂ ತಗ್ಗುವಂತೆ ಮಾಡಬೇಡಿರಿ. ಈ ಕೃತಜ್ಞತೆ ಅರ್ಪಣೆಯು ನಮಗೆ ಹೊಸ ಹೊಸ ಹಸಿರುಭರಿತ ತೋಟಗಳನ್ನು ಬೆಳೆಸುತ್ತಾ ಹೋಗುವುವು. ನಮ್ಮ ವಿಶ್ವಾಸದ ಅಭಿವೃದ್ಧಿಗೆ ಸಹಾಯಕವಾಗುವುದು. ಇಂದು ಲೋಕವು ಆಟವಿನೋದಗಳಲ್ಲಿ ಮಗ್ನವಾಗಿದೆ. ಅವರಿಗೆ ಮಾರ್ಗದರ್ಶನ ನೀಡಲು ಯಾರೂ ಇಲ್ಲ. ಹಝ್ರತ್ ಮಸೀಹ್ ಮೌಊದ್‌ರವರ(ಅ) ಜಮಾಅತ್ ಏಕಮಾತ್ರ ಜಮಾಅತಾಗಿದೆ; ಅದು ಖಿಲಾಫತಿನ ಪತಾಕೆಯ ಕೆಳಗೆ ತನ್ನ ಸಾಗುವ ದಿಕ್ಕನ್ನು ಸರಿಪಡಿಸುತ್ತಾ ಇರುತ್ತದೆ. ಇದು ಎಂತಹ ಬಹುಮಾನವೆಂದರೆ ಅದರ ಬಗ್ಗೆ ಸಾಕಷ್ಟು ಕೃತಜ್ಞತೆ ಅರ್ಪಿಸಲು ನಮಗೆ ಸಾಧ್ಯವಾಗದು. ಆದರೆ ಅಲ್ಲಾಹನು ಹೇಳಿರುವನು: ನೀವು ಕೃತಜ್ಞತೆ ಅರ್ಪಿಸಲು ಪ್ರಯತ್ನ ಮಾಡುತ್ತಾ ಇದ್ದರೆ, ಕೇವಲ ಬಾಯಿ ಮಾತಿನಿಂದಲ್ಲ, ನಿಮ್ಮ ಕೆಲಸಗಳ ಸರಿಪಡಿಸುವಿಕೆಯ ಪ್ರಯತ್ನ ಮಾಡುತ್ತಾ ಇದ್ದರೆ ಆಗ ಸಹ ನಾನು ನಿಮಗೆ ನನ್ನ ಪಾರಿತೋಷಕಗಳನ್ನು ಕೊಡುವೆನು.

ಆದುದರಿಂದ ನೀವು ಅದಕ್ಕಾಗಿ ಪ್ರಾರ್ಥಿಸುತ್ತಾ ಇರಬೇಕು. ನೀವು ನನಗಾಗಿ ಪ್ರಾರ್ಥಿಸಿರಿ. ನಾನು ನಿಮಗಾಗಿ ಪ್ರಾರ್ಥಿಸುವೆನು. ಈ ಕೃತಜ್ಞತೆ ಅರ್ಪಿಸುವ ಭಾವಾವೇಶ ಮತ್ತು ಅಲ್ಲಾಹನ ಬಹುಮಾನಗಳು ಎಂದೂ ಮುಗಿದು ಹೋಗದಿರಲಿ. ಪ್ರತಿಕ್ಷಣ ಅದು ಹೆಚ್ಚುತ್ತಾ ಹೋಗಲಿ.

ಅಸಂಖ್ಯಾತ ಫ್ಯಾಕ್ಸ್ ಮತ್ತು ಪತ್ರಗಳು ಮಕ್ಕಳಿಂದ, ಸಹೋದರಿಯರಿಂದ ಮತ್ತು ಸಹೋದರರಿಂದ ಬರುತ್ತಾ ಇವೆ. ಕೃತಜ್ಞತೆ ಮತ್ತು ನಿಷ್ಠೆ ಸೂಚಿಸುವ ಪತ್ರಗಳಿಗೆ ಉತ್ತರ ನೀಡಲು ಬಯಸುತ್ತೇನೆ. ಬೇಗನೆ ಉತ್ತರ ನೀಡಲು ಬಯಸುತ್ತೇನಾದರೂ ತಡವಾಗಲೂಬಹುದು. ಈಗ ಬಿಡುವು ಇಲ್ಲ. ಪ್ರವಾಸಗಳಿಗೆ ಸಿದ್ಧತೆ ಮಾಡಬೇಕಾದುದರಿಂದಲೂ ಹೀಗಾಗಿದೆ.

ಅಲ್ಲಾಹನು ನಿಮ್ಮೆಲ್ಲರ ವಿಶ್ವಾಸವನ್ನೂ ನಿಷ್ಠೆಯನ್ನೂ ವರ್ಧಿಸಲಿ. ಎಂತಹ ಪತ್ರಗಳು ಬರುತ್ತಿವೆಯೆಂದರೆ ನಾನು ಭಾವಪರವಶನಾಗುತ್ತೇನೆ. ಹಝ್ರತ್ ಮಸೀಹ್ ಮೌಊದ್‌ರವರ(ಅ) ಹೂದೋಟದಲ್ಲಿ ಎಂತಹ ಹೂಗಳು ಅರಳಿವೆ ಎಂದರೆ ಅವುಗಳ ಸೌಂದರ್ಯ ವರ್ಣನೆ ಕೆಲವು ಸಾರಿ ಕಷ್ಟಕರವಾಗಿದೆ. ಅಲ್ಲಾಹನು ನಿಮ್ಮ ವಿಶ್ವಾಸವನ್ನೂ ನಿಷ್ಠೆಯನ್ನೂ ವರ್ಧಿಸಲಿ.

ಅಲ್ಲಾಹನ ಅನುಗ್ರಹಗಳಲ್ಲಿ ಒಂದು, ಈ ಕಾಲದಲ್ಲಿ ಸ್ಯಾಟಲೈಟ್ ಟೆಲಿವಿಷನಿನ ಆವಿಷ್ಕಾರವಾಗಿದೆ. ಅದನ್ನು ಹಝ್ರತ್ ಮಸೀಹ್ ಮೌಊದ್‌ರವರ(ಅ) ಜಮಾಅತಿಗೆ ದಯಪಾಲಿಸಲಾಗಿದೆ. ಅದರ ಬಗ್ಗೆ ನಾನು ಕೆಲ ವಿಷಯಗಳನ್ನು ಹೇಳಬಯಸುತ್ತೇನೆ. ನಮ್ಮ ಸ್ವಯಂಸೇವಕರು ಬಹಳ ಕಷ್ಟಪಟ್ಟು ಅದರ ಕೆಲಸಮಾಡುತ್ತಾರೆ. ಬಹಳ ಕಡಿಮೆ ಸಂಖ್ಯೆಯಲ್ಲಿ ಸಂಬಳ ಪಡೆಯುವ ಉದ್ಯೋಗಿಗಳೂ ಇದ್ದಾರೆ. ಬಹುತೇಕ ಜನರು ತಮ್ಮ ಸೇವೆಯನ್ನು ಆರ್ಥಿಕ ಪ್ರತಿಫಲ ಪಡೆಯದೆ ಮಾಡುತ್ತಾರೆ. ಎಲ್ಲಾ ಕಾರ್ಯಕ್ರಮಗಳನ್ನು ಸುಗಮವಾಗಿ ನಡೆಸಲಾಗುತ್ತಿದೆ. ಲೋಕದ ಜನರಿಗೆ ಅಲ್ಲಾಹನು ಅಹ್ಮದಿಯಾ ಜಮಾಅತಿಗೆ ನೀಡಿದ ಅನುಗ್ರಹಗಳ ದೃಶ್ಯಗಳನ್ನು ತೋರಿಸಲು ಈ ಜನರು ಕೆಲಸ ಮಾಡುತ್ತಾರೆ. ಜಮಾಅತಿನ ಐಕ್ಯತೆ ಮತ್ತು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರವರ(ಸ) ಸಂದೇಶವನ್ನು ಲೋಕದಾದ್ಯಂತ ತಲಪಿಸಲು ಮತ್ತು ಆ ಮೂಲಕ ಶುದ್ಧ ಆತ್ಮವನ್ನು ಹೊಂದಿದವರು ಈ ಕಡೆಗೆ ಗಮನಹರಿಸಿ ಸತ್ಯವನ್ನು ಗುರುತಿಸಲಿಕ್ಕಾಗಿ ಅವರು ಕಾರ್ಯನಿರತರಾಗುತ್ತಾರೆ.

ಅಲ್ಲಾಹನು ಹಝ್ರತ್ ಮಸೀಹ್ ಮೌಊದ್‌ರವರಿಗೆ(ಅ) ಅನೇಕ ಸಂದೇಶವಾಣಿಗಳ ಮೂಲಕ ಅವರಿಗೆ ಜಯ ಸಿಗುವ ಬಗ್ಗೆ ಶುಭವಾರ್ತೆ ನೀಡಿದ್ದನು. ಅಲ್ಲಾಹನು ಹೀಗೆ ಹೇಳಿದನು: "ಕತಬಲ್ಲಾಹು ಲ ಅಗ್‌ಲಿಬನ್ನ ಅನ ವ ರುಸುಲೀ". ಈ ಇಲ್‌ಹಾಮ್ ಪವಿತ್ರ ಖುರ್‌ಆನಿನ ಒಂದು ವಚನವೂ ಆಗಿದೆ. ಇದರ ಅರ್ಥ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ವಿವರಿಸಿದರು: ಅಲ್ಲಾಹನು ಆರಂಭ ಕಾಲದಿಂದಲೇ ವಿಧಿಸಿರುವನು– ಅವನು ಮತ್ತು ಅವನ ಸಂದೇಶವಾಹಕರು ಜಯಗಳಿಸುವರು ಎಂದು.

ಇಲ್ಲಿ ಇಸ್ಲಾಮಿನ ಕಡೆಗೂ ಹಝ್ರತ್ ಮಸೀಹ್ ಮೌಊದ್‌ರವರ(ಅ) ಜಮಾಅತಿನ ಕಡೆಗೂ ಸೂಚಿಸಲಾಗಿದೆ. ಈಗ ಇಸ್ಲಾಮಿನ ಅಭಿವೃದ್ಧಿ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರವರ(ಸ) ಭವಿಷ್ಯವಾಣಿ ಪ್ರಕಾರ ಮತ್ತು ಅಲ್ಲಾಹನ ವಾಗ್ದಾನದ ಪ್ರಕಾರ ಹಝ್ರತ್ ಮಸೀಹ್ ಮೌಊದ್‌ರವರೊಂದಿಗೆ(ಅ) ಜೋಡಿಸಲ್ಪಟ್ಟಿದೆ. ಅವರಿಗೆ ಜಯನೀಡುವುದು ಅಲ್ಲಾಹನ ವಿಧಿನಿರ್ಣಯಗಳಲ್ಲಿ ಒಂದಾಗಿದೆ. ಆದರೆ ಅದಕ್ಕಾಗಿ ಲೌಕಿಕ ಸಾಮಗ್ರಿಗಳು ಸಹ ಬೇಕಾಗುತ್ತವೆ. ಈ ಸಾಮಗ್ರಿಗಳನ್ನೂ ಆಯಾ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್‌ರವರಿಗೆ(ಅ) ಅಲ್ಲಾಹನು ದಯಪಾಲಿಸುತ್ತಾ ಇದ್ದನು. ಈಗಲೂ ಒದಗಿಸುತ್ತಾ ಇದ್ದಾನೆ. ಮುಂದೆಯೂ ಒದಗಿಸುವನು. ಅವರು ತಮ್ಮ ಕಾಲದಲ್ಲಿ ಬರೆದು ಪ್ರಕಟಿಸಿದ ಗ್ರಂಥಗಳು ಒಂದು ಖಜಾನೆಯಾಗಿತ್ತು. ಅದು ಸಹ ಅವರ ಜಯಕ್ಕೆ ಒಂದು ಮಾರ್ಗವಾಗಿತ್ತು. ಈ ಕಾಲದಲ್ಲಿ ಈ ಖಜಾನೆಯನ್ನು M.T.A. ಮೂಲಕ ಲೋಕಕ್ಕೆ ತಲಪಿಸುವ ವ್ಯವಸ್ಥೆಯನ್ನು ಸಹ ಅಲ್ಲಾಹನು ಮಾಡಿ ಕೊಟ್ಟಿರುವನು. ಜಮಾಅತಿನ ಅಭಿವೃದ್ಧಿಯು ಅಲ್ಲಾಹನ ವಾಗ್ದಾನ ಪ್ರಕಾರ ಜಾರಿಗೊಳಿಸಲಾದ ಖಿಲಾಫತ್ ವ್ಯವಸ್ಥೆಯ ಅನುಗ್ರಹವಾಗಿದೆ. ಆ ಅನುಗ್ರಹಗಳನ್ನು ತೋರಿಸುವ ವ್ಯವಸ್ಥೆ M.T.A. ಮೂಲಕ ಅಲ್ಲಾಹನು ಮಾಡಿರುವನು.

ಹಝ್ರತ್ ಮಸೀಹ್ ಮೌಊದ್‌ರವರ(ಅ) ಸಂದೇಶವನ್ನು ಲೋಕದ ಎಲ್ಲೆಗಳ ತನಕ ತಲಪಿಸಿದ ಪರಿಕರಣಗಳಲ್ಲಿ M.T.A. ಒಂದಾಗಿದೆ. ಅದು ಈಗಲೂ ಸಂದೇಶ ತಲಪಿಸುತ್ತಾ ಇದೆ. ಈ ಕಾಲದಲ್ಲಿ ಹೊಸ ಆವಿಷ್ಕಾರಗಳ ಸರಿಯಾದ ಉಪಯೋಗ ಹಝ್ರತ್ ಮಸೀಹ್ ಮೌಊದ್‌ರವರ(ಅ) ಮೂಲಕ ಮಾತ್ರ ನಡೆಸಲಾಗುತ್ತಿದೆ ಎಂಬುದನ್ನು M.T.A. ಸಾಬೀತುಗೊಳಿಸುತ್ತದೆ.

ಈಗ M.T.A.ದ ಮೂರು ಚ್ಯಾನೆಲ್‌ಗಳು ನಮ್ಮವರಿಗೆ ತರಬೇತಿ ನೀಡುತ್ತದೆಯಲ್ಲದೆ ನಮಗೆ ಹಝ್ರತ್ ಮಸೀಹ್ ಮೌಊದ್(ಅ) ನೀಡಿದ ಸಾಕ್ಷ್ಯಾಧಾರಗಳ ಮೂಲಕ ಶತ್ರುಗಳ ಬಾಯಿ ಮುಚ್ಚಿಸುತ್ತದೆ. M.T.A. ಅಹ್ಮದಿಯತಿನ ಜಯವನ್ನು ತೋರಿಸುವ ಒಂದು ಮಾಧ್ಯಮವನ್ನಾಗಿ ಅಲ್ಲಾಹನು ಮಾಡಿರುವನಲ್ಲದೆ ಅದನ್ನು ಜಯಗಳಿಸಲು ಉಪಯುಕ್ತವಾದ ಒಂದು ಆಯುಧವನ್ನಾಗಿಯೂ ಮಾಡಿದ್ದಾನೆ. ಅದು ಹಝ್ರತ್ ಮಸೀಹ್ ಮೌಊದ್‌ರವರ(ಅ) ಆಗಮನದ ಉದ್ದೇಶವೇನೆಂಬುದನ್ನು ಪ್ರತಿ ಮನೆಗೆ ತಲಪಿಸುತ್ತದೆ. ಹಝ್ರತ್ ಮುಹಮ್ಮದ್

ರಸೂಲುಲ್ಲಾಹ್[ಸ] ಮಾಡಿದ ಕೆಲಸವನ್ನು ಈ ಕಾಲದಲ್ಲಿ ಹಝ್‌ರತ್ ಮಸೀಹ್ ಮೌಊದ್‌ರವರಿಗೆ[ಅ] ವಹಿಸಿ ಕೊಡಲಾಗಿತ್ತು. ಅದನ್ನು ಮುಂದುವರಿಸಿಕೊಂಡು ಹೋಗುವ ಕೆಲಸ ಅವರಿಗೆ ವಹಿಸಲಾಗಿತ್ತು. ಆ ಕೆಲಸಗಳು ಅದ್ಭುತ ದೃಷ್ಟಾಂತಗಳನ್ನು ತೋರಿಸುವುದು, ಹೃದಯಗಳನ್ನು ಪರಿಶುದ್ಧಗೊಳಿಸುವುದು, ಪವಿತ್ರ ಖುರ್‌ಆನಿನ ಉಪದೇಶಗಳನ್ನು ಪ್ರಚಾರಗೊಳಿಸುವುದು, ಜನರಿಗೆ ಸುಜ್ಞಾನದ ಮುತ್ತುಗಳನ್ನು ಹಂಚುವುದು ಮೊದಲಾದವುಗಳಾಗಿವೆ.

ಈ ಕಾಲದಲ್ಲಿ ಅನೇಕ ಮುಸ್ಲಿಮ್ ದೇಶಗಳ ಮತ್ತು ಸಂಸ್ಥೆಗಳ ಟೆಲಿವಿಷನ್ ಚ್ಯಾನಲ್‌ಗಳಿದ್ದರೂ ಕೇವಲ M.T.A. ಮಾತ್ರ ಆಧುನಿಕ ಆವಿಷ್ಕಾರಗಳನ್ನು ಸದುಪಯೋಗ ಪಡಿಸಿ ಮೇಲೆ ವಿವರಿಸಿದ ಕೆಲಸಗಳನ್ನು ಮಾಡುತ್ತದೆ.

ನೀವು M.T.A. ಹೊರತು ಅನ್ಯ ಚ್ಯಾನಲ್‌ಗಳನ್ನು ವೀಕ್ಷಿಸಿದರೆ ಮೇಲಿನ ನಾಲ್ಕು ವಿಚಾರಗಳು ನಿಮಗೆ ಕಾಣಿಸಲಾರವು. ಅವರು ಒಂದು ಮಾತು ಸರಿಯಾಗಿ ಹೇಳಿದರೆ ಬೇರೆ ಕಡೆ ಎಂತಹ ಪರಿಹಾಸಕರ ಮಾತು ಹೇಳುತ್ತಾರೆಂದರೆ, ಯಾವುದೇ ವಿವೇಕವಂತ ಮನುಷ್ಯ ಇಸ್ಲಾಮಿನ ಬಗ್ಗೆ ಸರಿಯಾದ ಚಿತ್ರವನ್ನು ಕಾಣಲಾರನು. ಇತರ ಟಿ.ವಿ. ಚ್ಯಾನಲ್‌ಗಳು ಜಾಹಿರಾತುಗಳ ಸಹಾಯವಿಲ್ಲದೆ ಕಾರ್ಯನಿರ್ವಹಿಸಲಾರವು. ಅವುಗಳಲ್ಲಿ ಹೀನ ವಿಷಯಗಳು ಮತ್ತು ತಿಳಿಗೇಡಿತನವು ಪ್ರಸಾರಗೊಳ್ಳುತ್ತವೆ. ಇಸ್ಲಾಮೀ ದೇಶಗಳ ಚ್ಯಾನಲ್‌ಗಳ ಸ್ಥಿತಿ ಸಹ ಹೀಗೆಯೇ ಇದೆ. ಉಲ್ಲಾಸ ನೀಡುವ ಹೆಸರಲ್ಲಿ ಬಿತ್ತರಿಸಲಾಗುವ ಕಾರ್ಯಕ್ರಮಗಳು ಹೀನವೂ ತಿಳಿಗೇಡಿತನದ್ದೂ ಆಗಿವೆ.

ಇಂದು ಮುಹಮ್ಮದೀ ಮಸೀಹರ ಗುಲಾಮರು ನಡೆಸುವ M.T.A. ಚ್ಯಾನಲ್ ಮಾತ್ರ ಮನುಷ್ಯನ ಸೃಷ್ಟಿಯ ಉದ್ದೇಶವನ್ನು ಈಡೇರಿಸುತ್ತಿದೆ. ಅದು ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್‌ರವರ[ಅ] ಆಗಮನದ ಉದ್ದೇಶವನ್ನು ಈಡೇರಿಸುತ್ತಾ ಇದೆ. ಆದುದರಿಂದ ಅಹ್ಮದಿಯರು M.T.A. ಕಡೆಗೆ ವಿಶೇಷ ಶ್ರದ್ಧೆ ನೀಡಬೇಕು. ನಿಮ್ಮ ತರಬೇತಿಗಾಗಿ ಬಹಳ ಕಷ್ಟಪಟ್ಟು ನಡೆಸುವ ಈ ಚ್ಯಾನಲನ್ನು ನೋಡಿರಿ ಮತ್ತು ಆಲಿಸಿರಿ. ಖುತುಬ ಮತ್ತು ಇದರ ತರಬೇತಿಯ ಕಾರ್ಯಕ್ರಮಗಳ ಕಡೆಗೆ ಗಮನ ಹರಿಸುವುದು ಸಹ ಆವಶ್ಯಕವಾಗಿದೆ. ನಮಗೆ ಅಲ್ಲಾಹನು ನೀಡಿದ ಬಹುಮಾನಗಳ ಬಗ್ಗೆ ಕೃತಜ್ಞತೆ ಅರ್ಪಿಸಬೇಕಾಗಿದೆ. ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಖಿಲಾಫತ್ ರೂಪದಲ್ಲಿ ನಮಗೆ ನೀಡಿದ ಪಾರಿತೋಷಕಕ್ಕಾಗಿ ಕೃತಜ್ಞತೆ ಅರ್ಪಿಸಿರಿ. ಈ ಸಂದೇಶ M.T.A. ಮೂಲಕ ಲೋಕದಾದ್ಯಂತ ತಲಪುತ್ತದೆ. ಖಿಲಾಫತ್ ಇಲ್ಲದಿದ್ದರೆ ಎಷ್ಟು ಉತ್ತಮ ಸಂಕಲ್ಪ ಹೊಂದಿದ್ದರೂ ಈ ರೀತಿಯ ಚ್ಯಾನಲ್ ಯಾವುದೇ ಅಂಜುಮನ್‌ಗೆ (ಸಂಸ್ಥೆಗೆ) ನಡೆಸಲು ಸಾಧ್ಯವಾಗುತ್ತಿರಲಿಲ್ಲ. M.T.A. ಖಿಲಾಫತಿನ ಅನುಗ್ರಹಗಳಲ್ಲಿ ಒಂದಾಗಿದೆ; ಹಝ್‌ರತ್ ಮಸೀಹ್ ಮೌಊದ್‌ರವರ[ಅ] ಜಮಾಅತಿಗೆ ಅಲ್ಲಾಹನು ನೀಡಿದ ಅನುಗ್ರಹಗಳಲ್ಲಿ ಒಂದಾಗಿದೆ. ಆದುದರಿಂದ ಅದರ ಪೂರ್ಣವಾದ ಲಾಭ ಪಡೆಯಿರಿ. ಅಲ್ಲಾಹನು ಹಝ್‌ರತ್ ಮಸೀಹ್ ಮೌಊದ್‌ರವರಿಗೆ[ಅ] ತನ್ನ ವಾಗ್ದಾನ ಈಡೇರಿಸಲು ಒದಗಿಸಿದ ವ್ಯವಸ್ಥೆಗಳು ಖಿಲಾಫತಿನ ಅನುಗ್ರಹಗಳ ಜೊತೆ ಸೇರಿಸಿದ್ದಾನೆ. ನಾವು ಯಾವಾಗಲೂ ಅದರ ಬಗ್ಗೆ ಗಮನ ನೀಡಬೇಕು.

ಖಿಲಾಫತ್ ಜೂಬಿಲಿಯ ಕಾರಣದಿಂದ ಪ್ರತಿಯೊಬ್ಬ ಅಹ್ಮದಿಯಲ್ಲಿ ಉಂಟಾದ ಬದಲಾವಣೆ ತಾತ್ಕಾಲಿಕವಾಗಬಾರದು; ತಾತ್ಕಾಲಿಕ ಉತ್ಸಾಹವಾಗಬಾರದು. ನೀವು ಯಾವಾಗಲೂ ಅದನ್ನು ನಿಮ್ಮ ಜೀವಿತದ ಭಾಗವನ್ನಾಗಿ ಮಾಡಿರಿ. ನಾನು ನಿಮ್ಮಿಂದ ಮಾಡಿಸಿದ ಪ್ರತಿಜ್ಞೆಯ ಪ್ರಭಾವ ಸಹ ಬಹಳ ಆಗಿದೆ. ಎಲ್ಲರಲ್ಲಿಯೂ ಅದರ ಪ್ರಭಾವ ಕಾಣಿಸುತ್ತಿದೆ. ಅದನ್ನು ನೆನಪಿಡಲು ಪ್ರಯತ್ನಿಸುತ್ತಾ ಇರಿ. ನೀವು ಪ್ರತಿಜ್ಞೆ ಮಾಡಿದರೆ ಅದನ್ನು ಈಡೇರಿಸಬೇಕೆಂದು ಅಲ್ಲಾಹನು ಹೇಳಿದ್ದಾನೆ. ನಿಮ್ಮ ಪ್ರತಿಜ್ಞೆಗಳ ಬಗ್ಗೆ ನಿಮ್ಮನ್ನು ಪ್ರಶ್ನಿಸಲಾಗುವುದು.

ಈಗ ಈ ಸಂಗತಿಗಳೆಲ್ಲಾ ನಿಮ್ಮ ಮನಸ್ಸಿನಲ್ಲಿ ಇದೆ. ನಾನು ಈ ಬಗ್ಗೆ ಹೇಳುತ್ತಿರುವುದು ನೀವು ಯಾವಾಗಲೂ ಅದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕೆಂದಾಗಿದೆ. ಈ ಪ್ರತಿಜ್ಞೆ ನಿಮ್ಮಲ್ಲಿ ಇನ್ನಷ್ಟು ಶಕ್ತಿ ಉಂಟುಮಾಡಲಿ. ಆದರೆ ಯಾವುದೇ ಪ್ರತಿಜ್ಞೆ ಅಲ್ಲಾಹನ ಅನುಗ್ರಹವಿಲ್ಲದೆ ಈಡೇರದು ಎಂಬುದು ನೆನಪಿರಲಿ. ಹಲವರು ನನಗೆ ತಮ್ಮ ಪ್ರತಿಜ್ಞೆ ಈಡೇರಿಸುವುದಾಗಿ ಬರೆದಿದ್ದಾರೆ. ಅದನ್ನು ಈಡೇರಿಸುವುದಕ್ಕೆ ಅಲ್ಲಾಹನ ಸಹಾಯ ಅಪೇಕ್ಷಿಸಿರಿ. ನೀವು ನಿಮ್ಮ ಆರಾಧನೆಯ ಮಟ್ಟವನ್ನು ಉನ್ನತಗೊಳಿಸಿರಿ. ಒಳಿತನ್ನು ಮಾಡುವುದರಲ್ಲಿ ಮೊದಲಿಗಿಂತ ಮುಂದೆ ಸಾಗಿರಿ. ಸತ್ಕಾರ್ಯ ಮಾಡಲು ಪ್ರಯತ್ನಿಸುತ್ತಾ ಇರಬೇಕು. ಜಮಾಅತ್ ವ್ಯವಸ್ಥೆಯನ್ನು ಅನುಸರಿಸುವುದು ಸತ್ಕಾರ್ಯಗಳಲ್ಲಿ ಮುಖ್ಯವಾಗಿದೆ. ಖಿಲಾಫತ್ ಅನುಸರಣೆಯಲ್ಲಿ ಜಮಾಅತ್ ವ್ಯವಸ್ಥೆಯ ಅನುಸರಣೆ ಮುಖ್ಯವಾಗಿದೆ. ಅದಿಲ್ಲದಿದ್ದರೆ ಒಳಿತುಗಳೂ ಇಲ್ಲ; ಪ್ರತಿಜ್ಞೆಯ ಪಾಲನೆಯೂ ಇಲ್ಲ. ಜಮಾಅತ್ ವ್ಯವಸ್ಥೆ ಸಹ ಖಿಲಾಫತನ್ನು ನೆಲೆಗೊಳಿಸುತ್ತದೆ. ಆದುದರಿಂದ ಅದನ್ನು ಅನುಸರಿಸುವುದು ಆವಶ್ಯಕವಾಗಿದೆ. ಪ್ರತಿಯೊಬ್ಬರು ತಮ್ಮ ಪ್ರತಿಜ್ಞೆ ಈಡೇರಿಸಿ ಅಲ್ಲಾಹನಿಗೆ ಸಮೀಪವಾಗುತ್ತಾ ಹೋಗಲಿಕ್ಕೆ ಅಲ್ಲಾಹನು ಸೌಭಾಗ್ಯ ನೀಡಲಿ.

ಮೇ 27ನೇ ದಿನಾಂಕ ಒಂದು ಶುಭವಾರ್ತೆಯನ್ನೂ ಅಲ್ಲಾಹನು ನಮಗೆ ನೀಡಿರುವನು. ಇಟೆಲಿಯಲ್ಲಿ ಮಸ್‌ಜಿದ್ ಮತ್ತು ಮಿಶನ್ ಹೌಸ್ ಸ್ಥಾಪನೆಗಾಗಿ ದೀರ್ಘಕಾಲದಿಂದ ಪ್ರಯತ್ನ ನಡೆಸಲಾಗಿತ್ತು. ಅದಕ್ಕಾಗಿ ಸ್ಥಳ ಸಿಗುತ್ತಿರಲಿಲ್ಲ. ಮೇ 27ನೇ ದಿನಾಂಕ ಮುನ್ಸಿಪಲ್ ಕೌನ್ಸಿಲ್‌ನವರು ನಮ್ಮನ್ನು ಕರೆದು ಒಂದು ನಿವೇಶನವನ್ನು ನಮಗೆ ಆ ಉದ್ದೇಶಕ್ಕಾಗಿ ನೀಡಿದರು. ಒಪ್ಪಂದ ಮಾಡಲಾಗಿದೆ. ಆ ದೇಶದಲ್ಲಿ ಕ್ರೈಸ್ತರ ಖಿಲಾಫತ್ ಈಗಿನ ತನಕ ಜಾರಿಯಲ್ಲಿದೆ. ಅಹ್ಮದಿಯಾ ಖಿಲಾಫತ್‌ಗೆ ನೂರು ವರ್ಷ ತುಂಬಿದ ಈ ಸಂದರ್ಭದಲ್ಲಿ ನಮಗೆ ನಿವೇಶನ ನೀಡಲಾಗಿದೆ. ಅಲ್ಲಿ ಮುಹಮ್ಮದೀ ಮಸೀಹ್‌ರವರ ದಾಸರ ಒಂದು ಕೇಂದ್ರ ಸ್ಥಾಪಿತವಾಗುವುದು. ಒಂದು ಮಸ್‌ಜಿದ್ ನಿರ್ಮಿಸಲಾಗುವುದು. ಅಲ್ಲಿ ಅಲ್ಲಾಹನ ಏಕತ್ವದ ಪ್ರಕಟಣೆ ನಡೆಸಲಾಗುವುದು – ಇನ್‌ಶಾಅಲ್ಲಾಹ್.

ಇಲ್ಲಿ ನಮ್ಮ ಕಾರ್ಯಕ್ರಮ ಅಲ್ಲಾಹನ ಅನುಗ್ರಹದಿಂದ ಪೂರ್ಣಗೊಂಡಿತು. ಮೌಲವಿಗಳು ಬೊಬ್ಬೆ ಹೊಡೆದರೂ ಪಾಕಿಸ್ತಾನದಲ್ಲಿ ಜಮಾಅತ್‌ಗಳು ಅದರಲ್ಲಿ ಭಾಗವಹಿಸಿದವು. ಅವರು ತಮ್ಮ ಕಾರ್ಯಕ್ರಮಗಳನ್ನೂ ನಡೆಸಿದರು. ಈಗ ಅಂತಹ ಕಾರ್ಯಕ್ರಮಗಳನ್ನು ಸರಕಾರ ನಿಷೇಧಿಸಿದೆ. ಆದರೆ 1989ರ ಶತವಾರ್ಷಿಕ ಜೂಬಿಲಿ ಸಂದರ್ಭದಲ್ಲಿ ಅನುಭವಿಸಿದ ಕೊರತೆ ಈ ಸಲ ಅನುಭವಿಸಲಿಲ್ಲ. ಆಗ ಎಲ್ಲಾ ಸಿದ್ಧತೆಗಳನ್ನು ನಡೆಸಿದ್ದರೂ ಒಂದು ಆರ್ಡಿನೆನ್ಸ್ ಮೂಲಕ ಅಹ್ಮದಿಯಾ ಜಮಾಅತಿನ ಕಾರ್ಯಕ್ರಮಗಳನ್ನು ನಿಷೇಧಗೊಳಿಸಲಾಗಿತ್ತು. ಮಕ್ಕಳಿಗೆ ಮಿಠಾಯಿ ಹಂಚುವುದು ಕೂಡ ನಿಷೇಧಿಸಲ್ಪಟ್ಟಿತ್ತು.

ಪಂಜಾಬಿನಲ್ಲಿ 1989ರಲ್ಲಿ ಅಧಿಕಾರದಲ್ಲಿದ್ದ ಪಾರ್ಟಿ ಈ ವರ್ಷ ಸಹ ಅಧಿಕಾರದಲ್ಲಿತ್ತು. ಆದುದರಿಂದ ಚಿಂತೆ ಇತ್ತು. ಆದರೆ ಅಲ್ಲಾಹನು ಅನುಗ್ರಹಿಸಿದನು. ಅಲ್ಲಿನ ಅಹ್ಮದಿಯರು ಮೇ ದಿನಾಂಕ 27ರಂದು ಜಲ್ಸ ನಡೆಸಿದರು. ಇತರ ಕಾರ್ಯಕ್ರಮಗಳನ್ನೂ ಮಾಡಿದರು. ಮಿಠಾಯಿ ಹಂಚಲಾಯಿತು. ಇವೆಲ್ಲಾ ಬಹಳ ಪ್ರಚಾರವಿಲ್ಲದೆ, ಸದ್ದುಗದ್ದಲವಿಲ್ಲದೆ ನಡೆಯಿತು. ಮೌಲವಿಗಳಿಗೆ ಆ ಬಗ್ಗೆ ತಿಳಿಯಲಿಲ್ಲ. ಸರಕಾರ ಕಾರ್ಯಕ್ರಮಗಳನ್ನು ಪ್ರಾಯಶಃ ತಡೆದಿದೆ ಎಂದು ಮೌಲವಿಗಳು ಯೋಚಿಸಿದರು. ಮೌಲವಿಗಳು ಹೇಳಿದರು: "ಖಾದಿಯಾನಿಗಳಿಗೆ ಈ ಕಾರ್ಯಕ್ರಮ

# ಮುಹಮ್ಮದ್ ಪೈಗಂಬರ್(ಸ) ಬೈಬಲ್‌ನಲ್ಲಿ

✡ ಡಾಕ್ಟರ್ ಖಲೀಲ್ ಅಹ್ಮದ್ ನಾಸಿರ್

**ದೇವನಿಂದ ತಾನು ನೇಮಿಸಲ್ಪಟ್ಟಿರುವೆನೆಂದು ವಾದಿಸುವ ವ್ಯಕ್ತಿಯ ಸತ್ಯತೆಯ ಕುರಿತು ವೈಚಾರಿಕ ಮತ್ತು ಚಾರಿತ್ರಿಕ ಸಾಕ್ಷ್ಯಗಳನ್ನು ಲೋಕವು ಇಂದು ಆವಶ್ಯಪಡುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸತ್ಯತೆಗೆ ಇಂತಹ ಸಾಕ್ಷ್ಯಾಧಾರಗಳು ಸಾಕಷ್ಟು ಇವೆ.**

## ವೈಚಾರಿಕ ಸಾಕ್ಷ್ಯಗಳು

ವೈಚಾರಿಕ ಚಿಂತನೆಯು ಸೂಚಿಸುವುದೇನೆಂದರೆ, ಪೈಗಂಬರರ(ಸ) ಆಗಮನದ ಕಾಲಘಟ್ಟದಲ್ಲಿ ದೈವಿಕ ಸಂದೇಶದ ಎಂದರೆ ಆಧ್ಯಾತ್ಮಿಕ ಮಾರ್ಗದರ್ಶನದ ಕಾರಂಜಿಯಿಂದ ನೀರನ್ನು ಪಡೆಯಲು ಲೋಕವು ತೀವ್ರ ಆವಶ್ಯಕತೆಯನ್ನು ಅನುಭವಿಸುತ್ತಿತ್ತು. ಅವರು ಆಗಮಿಸಿ ಮಾದರಿ ಜೀವಿತವನ್ನು ನಡೆಸಿ ಮುಂದೆ ಯಾವಾಗಲೂ ಅನುಕರಿಸಬೇಕಾದ ಉದಾಹರಣೆಯನ್ನು ಲೋಕದ ಮುಂದಿರಿಸಿದರು. ಅವರು ಅನೇಕ ಕಷ್ಟಗಳನ್ನು ಅನುಭವಿಸುತ್ತಾ ತನ್ನ ಉದ್ದೇಶದ ಗಳಿಕೆಯ ದಾರಿಯಲ್ಲಿ ಸಾಗಿದರು. ಅವರು ಮತ್ತು ಅವರ ಅನುಯಾಯಿಗಳು ಹಿಂಸಾಚಾರವನ್ನೂ ವಿರೋಧವನ್ನೂ ಎದುರಿಸಿದರು. ಆದರೆ ದೇವನು ಅವರನ್ನು ಪವಾಡ ಸದೃಶ ರೀತಿಗಳಲ್ಲಿ ರಕ್ಷಿಸಿದನು. ಅವರು ನಿಧನ ಹೊಂದುವ ಮೊದಲು ಅವರ ಆಗಮನದ ಉದ್ದೇಶವು ಅರೇಬಿಯಾ ದೇಶದಲ್ಲೆಲ್ಲಾ ಸ್ಥಾಪಿಸಲ್ಪಟ್ಟಿತ್ತು ಮತ್ತು ಅವರ ಸಂದೇಶ ಇತರ ದೇಶಗಳಲ್ಲೂ ವೇಗವಾಗಿ ಹರಡುತ್ತಿತ್ತು. ಅವರು ಪವಾಡಗಳನ್ನು ತೋರಿಸಿದರು. ಅವರು ಭವಿಷ್ಯತ್ ಕಾಲದ ಕುರಿತು ಮುಂಚಿತವಾಗಿ ಸಮಾಚಾರ ನೀಡಿದರು. ಅವರ ಭವಿಷ್ಯವಾಣಿಗಳು ಅವರ ಕಾಲದಲ್ಲಿ ಈಡೇರಿದವು ಮಾತ್ರವಲ್ಲ ಅವರು ನಿಧನಹೊಂದಿದ ನಂತರ ಸಹ ಈಡೇರುತ್ತಾ ಇವೆ. ಅಸಂಖ್ಯಾತ ಜನರು ಅವರ ಆಗಮನದ ನಂತರ ಅವರ ಉಪದೇಶಗಳ ಕಡೆಗೆ ಆಕರ್ಷಿಸಲ್ಪಟ್ಟರು. ಸಂಕ್ಷಿಪ್ತವಾಗಿ ಹೇಳುವುದಾದರೆ, ಎಲ್ಲಾ ವೈಚಾರಿಕ ಪರೀಕ್ಷೆಗಳಿಂದ ಸಾಬೀತಾಗುವುದೇನೆಂದರೆ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಸತ್ಯವಾಗಿಯೂ ದೇವನ ಕಡೆಯಿಂದ ಆಗಮಿಸಿದವರಾಗಿದ್ದಾರೆ.

## ಚಾರಿತ್ರಿಕ ಸಾಕ್ಷ್ಯಗಳು

ದೇವನ ಸಂದೇಶವಾಹಕನ ಸತ್ಯತೆಗೆ ಸಾಕ್ಷ್ಯವಾಗಿ ಚಾರಿತ್ರಿಕ ಸಾಕ್ಷ್ಯಾಧಾರಗಳನ್ನು ಲೋಕವು ಆವಶ್ಯಪಡುತ್ತದೆ. ಕೆಥೋಲಿಕ್ ಪಂಗಡದ ಒಬ್ಬ ಗಣ್ಯ ಅಮೇರಿಕನ್ ಬಿಷಪ್ ಪ್ರಸಿದ್ಧವಾದ ಒಂದು ರಾಷ್ಟ್ರೀಯ ನಿಯತಕಾಲಿಕದಲ್ಲಿ ಹೀಗೆ ಬರೆದರು:

ಎಲ್ಲಾ ಜನರಿಗೆ, ಎಲ್ಲಾ ನಾಗರಿಕತೆ ಗಳಿಗೆ ಮತ್ತು ಎಲ್ಲಾ ಕಾಲಗಳಿಗೆ ಸಂಬಂಧಿಸಿದ ಚಾರಿತ್ರಿಕ ಸಾಕ್ಷ್ಯವು ಯೇಸು ಕ್ರಿಸ್ತರಿಗೆ ಮಾತ್ರ ಲಭಿಸಿವೆ ಏಕೆಂದರೆ:

ಯೇಸುಕ್ರಿಸ್ತರ ಹೊರತು, ಬುದ್ಧ, ಮುಹಮ್ಮದ್ ಅಥವಾ ಬೇರೆ ಯಾರ ಕುರಿತು ಸಹ ಯಾವುದೇ ಭವಿಷ್ಯವಾಣಿಯಲ್ಲಿ ಪ್ರಸ್ತಾಪಿಸಲ್ಪಟ್ಟಿಲ್ಲ. ಯೇಸು ಕ್ರಿಸ್ತರ ಹೊರತು ಅನ್ಯರು ಬಂದು ಹೇಳಿದರು: 'ನಾನು ಬಂದಿದ್ದೇನೆ. ನನ್ನನ್ನು ನಂಬಿರಿ.' ಯೇಸುಕ್ರಿಸ್ತರು ಮಾತ್ರ ಮುಂದೆ ಬಂದು ಹೇಳುತ್ತಾರೆ: ನನ್ನ ಬರುವಿಕೆಯ ಕುರಿತು ಸುವಾರ್ತೆ ನೀಡಲಾಗಿತ್ತು. ಅದರ ಕುರಿತು ಅತ್ಯಂತ ಚಿಕ್ಕ ವಿವರ ಸಹ ವಿವರಿಸಲಾಗಿತ್ತು.

ಈ ಹೇಳಿಕೆ ಪಂಥಾಹ್ವಾನ ನೀಡುವಂತಹದ್ದಾಗಿದೆ ಮತ್ತು ಅದರ ಕುರಿತು ಗಮನಿಸುವುದು ಆವಶ್ಯಕವಾಗಿದೆ. ಮುಸ್ಲಿಮರಾದ ನಾವು ಯೇಸುಕ್ರಿಸ್ತರನ್ನು(ಅ) ಒಬ್ಬ ಪ್ರವಾದಿ ಎಂದು ನಂಬುತ್ತೇವೆ. ಅವರ ಕುರಿತು ಹಿಂದಿನ ಧಾರ್ಮಿಕ ಗ್ರಂಥಗಳಲ್ಲಿ ಭವಿಷ್ಯ ನುಡಿಯಲಾಗಿತ್ತು ಎಂದು ಸಹ ನಾವು ನಂಬುತ್ತೇವೆ.

---

ಮಾಡಲು ಬಿಡಲಿಲ್ಲ. ಮಕ್ಕಳಿಗೆ ಮಿಠಾಯಿ ಹಂಚಲು ಬಿಡಲಿಲ್ಲ. ಸಂತೋಷಾಚರಣೆ ಮಾಡಲು ಅನುಮತಿಸಲಿಲ್ಲ. ಸರಕಾರ ಬಹಳ ಉತ್ತಮ ಕೆಲಸ ಮಾಡಿದೆ. ಮುಸ್ಲಿಮ್ ಸಮುದಾಯವನ್ನು ನಾಶದಿಂದ ರಕ್ಷಿಸಿದೆ."

ಮೌಲವಿಗಳ ದೃಷ್ಟಿಯಲ್ಲಿ ಮಕ್ಕಳಿಗೆ ಮಿಠಾಯಿ ಹಂಚುವುದರಿಂದ ಮುಸ್ಲಿಮ್ ಸಮುದಾಯ ನಾಶೋನ್ಮುಖವಾಗುತ್ತದೆ. ಇದು ಅವರ ಬುದ್ಧಿಯ ಸ್ಥಿತಿಯಾಗಿದೆ. ಅವರು ಸ್ವತಃ ನಾಶದ ಹೊಂಡದ ಕಡೆಗೆ ಹೋಗುತ್ತಿದ್ದಾರೆಂದು ಅವರು ತಿಳಿಯುವುದಿಲ್ಲ. ಆದುದರಿಂದ ನೀವು ಪಾಕಿಸ್ತಾನಕ್ಕಾಗಿ ಸಹ ಪ್ರಾರ್ಥಿಸಿರಿ. ಮುಲ್ಲಾಗಳಿಗೆ ಪ್ರಾಯಶಃ ವಿವೇಕೋದಯವಾಗಲಾರದು. ಆದರೆ ಅಲ್ಲಿನ ಜನರಿಗಾಗಿ ಪ್ರಾರ್ಥಿಸಿರಿ. ಅಲ್ಲಾಹನು ಅವರನ್ನು ನೇರಮಾರ್ಗದಲ್ಲಿ ನಡೆಸಲಿ. ಅಲ್ಲಿನ ರಾಜಕಾರಣಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಮಾತ್ರ ಪ್ರಯತ್ನ ಮಾಡುವವರಾಗದಿರಲಿ. ಅವರು ಸರಕಾರದ ಕರ್ತವ್ಯಗಳನ್ನು ಈಡೇರಿಸುವವರಾಗಲಿ. ಅವರು ಬಡವರ ಹಕ್ಕುಗಳನ್ನು ನೀಡುವವರಾಗಲಿ.

ಈಗ ಪಾಕಿಸ್ತಾನದ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಖಜಾನೆ ಖಾಲಿಯಾಗಿದೆ. ಅಲ್ಲಿ ತಿನ್ನಲು ಏನೂ ಇಲ್ಲ. ಹೀಗಿದ್ದರೂ ಅಲ್ಲಿ ಸಂಪತ್ತಿನ ಲೂಟಿ ನಡೆಯುತ್ತಿದೆ. ಹೆಜ್ಜೆ ಹೆಜ್ಜೆಗೆ ಲಂಚ ಪಡೆಯಲಾಗುತ್ತಿದೆ. ಸಾಮಾನ್ಯ ಜನರು ಹಸಿವೆಯಿಂದ ಸಾಯುತ್ತಿದ್ದರೂ ಆ ಬಗ್ಗೆ ಯಾರಿಗೂ ಗಮನವಿಲ್ಲ. ರಾಜಕಾರಣಿಗಳು ತಮ್ಮ ಕುರ್ಚಿಯ ಸಂರಕ್ಷಣೆಗಾಗಿ ಯೋಚಿಸುತ್ತಿದ್ದಾರೆ. ಅಲ್ಲಾಹನು ಜನರ ಮೇಲೆ ದಯೆದೋರಲಿ.

ನಾವು ಇಲ್ಲಿ ಸಂತೋಷಪಡುವಾಗ ಲೋಕದಲ್ಲೆಲ್ಲಾ ಅಹ್ಮದಿಯರು ಸಂತೋಷಪಡುತ್ತಿದ್ದಾರೆ. ಅವರು ಖಿಲಾಫತ್ ಜೂಬಿಲಿ ಸಮಾರಂಭಗಳನ್ನು ಜರಗಿಸುತ್ತಿದ್ದಾರೆ. ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಲು ಬೇರೆ ಕಾರ್ಯಕ್ರಮಗಳನ್ನೂ ರೂಪಿಸುತ್ತಾರೆ. ದುಆ ಮಾಡುವಾಗ ಪಾಕಿಸ್ತಾನವನ್ನು ನೆನಪಿಸಿರಿ. ಅಲ್ಲಿನ ಬಡವರ ಸ್ಥಿತಿಯನ್ನು ಅಲ್ಲಾಹನು ಸುಧಾರಣೆ ಮಾಡಲಿ. ಅಧಿಕಾರಿಗಳು ದೌರ್ಜನ್ಯಗಾರರಾಗಿದ್ದಾರೆ. ಅವರಿಂದ ಜನರನ್ನು ಅಲ್ಲಾಹನು ರಕ್ಷಿಸಲಿ. ಅವರನ್ನು ನೇರಮಾರ್ಗದಲ್ಲಿ ನಡೆಸಲಿ. ಮುಸ್ಲಿಮ್ ದೇಶಗಳಿಗಾಗಿ ಪ್ರಾರ್ಥಿಸಿರಿ. ಅಲ್ಲಾಹನು ಅವರಿಗೆ ಮುಹಮ್ಮದೀ ಮಸೀಹರನ್ನು ಗುರುತಿಸುವ ಭಾಗ್ಯ ನೀಡಲಿ. ಲೋಕಕ್ಕಾಗಿ ಸಹ ಪ್ರಾರ್ಥಿಸಿರಿ. ಅದು ನಾಶದ ಕಡೆಗೆ ಸಾಗುತ್ತಿದೆ. ಅಲ್ಲಾಹನು ತನ್ನ ಶಿಕ್ಷೆಗಳಿಂದ ಲೋಕದ ಜನರನ್ನು ರಕ್ಷಿಸಲಿ. ಸತ್ಯವನ್ನು ತಿಳಿಯುವ ಭಾಗ್ಯ ನೀಡಲಿ. ಲೋಕದಲ್ಲಿ ಕೇವಲ ದೇವನ ಸರಕಾರ ಸ್ಥಾಪಿತವಾಗುವ ದೃಶ್ಯನೋಡುವಂತಾಗಲಿ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ರವರ(ಸ) ಪತಾಕೆ ಹಾರುವಂತಾಗಲಿ – ಆಮೀನ್. ✪

## ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕುರಿತು ಸಾಕ್ಷ್ಯಗಳು

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಆಗಮನದ ಕುರಿತು ಸಹ ಸ್ಪಷ್ಟವಾಗಿ ಯೇಸುಕ್ರಿಸ್ತರು ಮಾತ್ರವಲ್ಲ ಪ್ರವಾದಿ ಮೋಶೆ(ಅ) ಮತ್ತು ಇತರ ಪ್ರವಾದಿಗಳು ನುಡಿದ ಭವಿಷ್ಯವಾಣಿಗಳು ಬೈಬಲ್‌ನಲ್ಲಿವೆ. ಯೇಸುಕ್ರಿಸ್ತರು ನುಡಿದುದಾಗಿ ಲೋಕಕ್ಕೆ ಲಭಿಸಿದ ವಚನಗಳು ಸೂಚಿಸುವುದೇನೆಂದರೆ, ಅವರ ಆಗಮನದ ಮುಖ್ಯ ಉದ್ದೇಶಗಳಲ್ಲಿ ಒಂದು, ಮುಂದೆ ಆಗಮಿಸಲಿರುವ ಒಬ್ಬ ಮಹಾನ್ ಪ್ರವಾದಿಯ ಕುರಿತು ಸುವಾರ್ತೆ ನೀಡುವುದಾಗಿತ್ತು.

ಯೇಸುಕ್ರಿಸ್ತರು ಪದೇ ಪದೇ ಹೀಗೆ ಹೇಳುತ್ತಾ ಇದ್ದರು: ತನ್ನ ಕಾಲದ ಜನರು ಪ್ರಯೋಜನ ಪಡೆಯಲು ಸಾಧ್ಯವಿರುವಷ್ಟು ಮಾರ್ಗದರ್ಶನವನ್ನು ನೀಡಲಿಕ್ಕಾಗಿ ಮಾತ್ರ ತಾನು ಆಗಮಿಸಿದುದಾಗಿದೆ. ಮಾನವರಿಗೆ ಸದಾಕಾಲ ಮಾರ್ಗದರ್ಶನ ನೀಡಲಿರುವ ಪರಿಪೂರ್ಣ ಉಪದೇಶದ ಕುರಿತು ಅವರು ಹೀಗೆ ಹೇಳಿದರು:

**"ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು." (ಯೋಹಾನ (14:26)**

ಯೇಸುಕ್ರಿಸ್ತರ ಈ ಸುವಾರ್ತೆಯನ್ನು ಮುಹಮ್ಮದ್ ಪೈಗಂಬರರಿಗೆ ಮಾತ್ರ ಈಡೇರಿಸಲು ಸಾಧ್ಯವಾಯಿತು. ಹಝ್ರತ್ ಮುಹಮ್ಮದ್ ಪೈಗಂಬರರನ್ನು ಯೇಸುಕ್ರಿಸ್ತರ ಸುವಾರ್ತೆಯನ್ನು ಈಡೇರುವಂತೆ ಕಳುಹಿಸಲಾಗಿತ್ತು. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

**"ಮರ್‌ಯಮ್ ಪುತ್ರ ಮಸೀಹ್ ಕೇವಲ ಒಬ್ಬ ಸಂದೇಶವಾಹಕರಾಗಿದ್ದರು. ಅವರಿಗಿಂತ ಹಿಂದಿನ ಎಲ್ಲಾ ಸಂದೇಶವಾಹಕರು ಗತಿಸಿದ್ದಾರೆ."** (5:76)

ಪವಿತ್ರ ಖುರ್‌ಆನ್ ಇನ್ನೊಂದೆಡೆ ಹೀಗೆ ಹೇಳುತ್ತದೆ:

**ದೇವದೂತರು ಹೇಳಿದ ಸಂದರ್ಭ– "ಓ ಮರ್‌ಯಮ್, ನಿಶ್ಚಯವಾಗಿಯೂ ಅಲ್ಲಾಹನು ತನ್ನ ಬಳಿಯ ಒಂದು ವಚನದ ಮೂಲಕ ನಿನಗೆ (ಒಬ್ಬ ಪುತ್ರನ ಕುರಿತು) ಶುಭವಾರ್ತೆ ಅರುಹುತ್ತಾನೆ. ಅವನ ಹೆಸರು ಮಸೀಹು ಈಸಬ್ನು ಮರ್‌ಯಮ್ ಎಂದು. (ಆತನು) ಇಹದಲ್ಲೂ ಪರದಲ್ಲೂ ಆದರಣೀಯನೂ ದೇವ ಸಾಮೀಪ್ಯವನ್ನು ಗಳಿಸಿದವರ ಪೈಕಿಯವನೂ ಆಗುವನು." (3:46)**

ಹಝ್ರತ್ ಪೈಗಂಬರರು, ಯೇಸುಕ್ರಿಸ್ತರು ದೇವನಿಯುಕ್ತ ಪ್ರವಾದಿಯೆಂದೂ ಅವರು ಶಾಪಗ್ರಸ್ತರೆಂದು ಹೇಳುವವರು ತಪ್ಪು ಗ್ರಹಿಕೆಗೆ ಒಳಗಾದವರೂ ತಪ್ಪು ಮಾರ್ಗದರ್ಶನ ಪಡೆದವರೂ ಎಂದು ಘೋಷಿಸಿದರು. ಪವಿತ್ರ ಖುರ್‌ಆನ್ ಅವರ ಉಪದೇಶಗಳನ್ನು "ಮಾರ್ಗದರ್ಶನ ಮತ್ತು ಪ್ರಕಾಶ" ಎಂದು ಕರೆದಿದೆ.

ಯೇಸುಕ್ರಿಸ್ತರು ಹೀಗೆ ಹೇಳಿದರು:

**"ಆದರೂ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ, ಕೇಳಿರಿ: ನಾನು ಹೋಗುವುದು ನಿಮಗೆ ಹಿತಕರವಾಗಿದೆ; ಹೇಗೆಂದರೆ, ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವುದಿಲ್ಲ; ನಾನು ಹೋದರೆ ಆತನನ್ನು ನಿಮ್ಮ ಬಳಿಗೆ ಕಳುಹಿಸಿಕೊಡುತ್ತೇನೆ. ಆತನು ಬಂದು ಪಾಪ, ನೀತಿ, ನ್ಯಾಯತೀರ್ವಿಕೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು......... ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು." (ಯೋಹಾನ 16:7-14)**

ಯೇಸುಕ್ರಿಸ್ತರು ನುಡಿದ ಈ ಸುವಾರ್ತೆ ಈ ಕೆಳಗಿನ ವಿಷಯಗಳನ್ನು ಸ್ಪಷ್ಟಪಡಿಸುತ್ತದೆ.

1. ಯೇಸುಕ್ರಿಸ್ತರು ನಿಧನ ಹೊಂದಿದ ನಂತರ ಸಹಾಯಕ ಆಗಮಿಸುವರು.
2. ಸಹಾಯಕ ಬಂದು ಪಾಪ, ಸತ್ಯ ಮತ್ತು ನ್ಯಾಯದ ಕುರಿತು ಲೋಕಕ್ಕೆ ಅರಿವನ್ನು ನೀಡುವರು.
3. ಅವರು ಸತ್ಯದ ಕಡೆಗೆ ಮಾರ್ಗದರ್ಶನ ನೀಡುವರು.
4. ಅವರಿಗೆ ಅವತೀರ್ಣವಾದ ಗ್ರಂಥದಲ್ಲಿ ಮಾನವರ ಹಸ್ತಕ್ಷೇಪ ಉಂಟಾಗಲಾರದು.
5. ಅವರು ಮುಂದೆ ಘಟಿಸಲಿರುವ ಸಂಗತಿಗಳ ಕುರಿತು ತಿಳಿಸುವರು.
6. ಅವರು ಯೇಸುಕ್ರಿಸ್ತರನ್ನು ದೋಷಾರೋಪಣೆಗಳಿಂದ ಮುಕ್ತರನ್ನಾಗಿ ಮಾಡಿ ಅವರನ್ನು ಗೌರವಿಸುವರು.

ನಾವು ಯೇಸುಕ್ರಿಸ್ತರ ಭವಿಷ್ಯವಾಣಿಗಳನ್ನು ಅಂಶ ಅಂಶವಾಗಿ ಪರಿಶೀಲಿಸಿದರೆ ಯೇಸುಕ್ರಿಸ್ತರು ನುಡಿದ ಭವಿಷ್ಯವಾಣಿ ಹಝ್ರತ್ ಮುಹಮ್ಮದ್ ಪೈಗಂಬರರಿಗೆ ಹೊರತು ಬೇರೆ ಯಾರಿಗೂ ಅನ್ವಯಿಸುವುದಿಲ್ಲ ಎಂದು ತಿಳಿಯುತ್ತದೆ. ಅವರು ಯೇಸುಕ್ರಿಸ್ತರ ನಂತರ ಆಗಮಿಸಿದರು. ಸಹಾಯಕ ಬಂದು ಯೇಸುಕ್ರಿಸ್ತರ ಅನುಯಾಯಿಗಳಿಗೆ ಉಪದೇಶ ನೀಡುವುದಾಗಿ ಹೇಳಲಾಗಿದೆ. ಹಾಗೆ ಆಗಮಿಸುವ ವ್ಯಕ್ತಿ ಕ್ರೈಸ್ತನೋ ಯಹೂದಿಯನೋ ಆಗಲು ಸಾಧ್ಯವಾಗದು. ಬರಲಿರುವ ಸಹಾಯಕ ಅನ್ಯ ಜನತೆಗೆ ಸೇರಿದವರೂ ಯೇಸುಕ್ರಿಸ್ತರ ಗೌರವವನ್ನು ಪ್ರಚಾರಗೊಳಿಸುವವರೂ ಆಗಬೇಕು. ಮುಹಮ್ಮದ್ ಪೈಗಂಬರ್(ಸ) ಯಹೂದಿ ಅಥವಾ ಕ್ರೈಸ್ತ ಆಗಿರಲಿಲ್ಲ. ಅವರು ಹಝ್ರತ್ ಇಸ್ಮಾಈಲ್‌ರವರ(ಅ) ವಂಶಜ. ಆದರೆ ಅವರು ಯೇಸುಕ್ರಿಸ್ತರನ್ನು ಗೌರವಿಸಿದರು. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

**"ವಾಸ್ತವದಲ್ಲಿ (ಯಹೂದಿಯರು) ಅವರನ್ನು (ಯೇಸುಕ್ರಿಸ್ತರನ್ನು) ವಧಿಸಲಿಲ್ಲ. ಶಿಲುಬೆಗೇರಿಸಿ ಕೊಲ್ಲಲೂ ಇಲ್ಲ. ಆದರೆ ಅವರು ಹಾಗೆ (ಶಿಲುಬೆಯ ಮೇಲೆ ಮೃತಪಟ್ಟಂತೆ) ಅವರಿಗೆ ತೋರಿಸಲ್ಪಟ್ಟರು. ತತ್ಸಂಬಂಧದಲ್ಲಿ ಭಿನ್ನಾಭಿಪ್ರಾಯವಿರುವವರು ಆ ವಿಚಾರದಲ್ಲಿ ಸಂಶಯದಲ್ಲೇ ಇದ್ದಾರೆ. ಅವರು ಊಹಾಪೋಹಗಳನ್ನು ಅವಲಂಬಿಸಿರುವರು ಹೊರತು ಅವರಿಗೆ ಆ ಬಗ್ಗೆ ಸ್ಪಷ್ಟವಾದ ಯಾವ ಅರಿವೂ ಇಲ್ಲ. ಖಂಡಿತವಾಗಿಯೂ ಅವರು ಅವರನ್ನು ವಧಿಸಲಿಲ್ಲ. ಬದಲಾಗಿ ಅಲ್ಲಾಹನು ಅವರನ್ನು ತನ್ನೆಡೆಗೆ ಎತ್ತಿದನು." (4: 158-159)**

ಯೇಸುಕ್ರಿಸ್ತರನ್ನು ಶಾಪಗ್ರಸ್ತ ಮರಣಕ್ಕೆ ಗುರಿಪಡಿಸಬೇಕೆಂದು ಅವರ ಶತ್ರುಗಳು ಉದ್ದೇಶಿಸಿದ್ದರೂ ಅವರನ್ನು ಅಲ್ಲಾಹನು ರಕ್ಷಿಸಿದನೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಯೇಸುಕ್ರಿಸ್ತರನ್ನು ಶಿಲುಬೆಗೇರಿಸಿ ಕೊಲ್ಲುವುದರಲ್ಲಿ ತಾವು ಜಯಶಾಲಿಗಳಾಗಿದ್ದೇವೆಂದು ಶತ್ರುಗಳು ಊಹಿಸಿದ್ದರು. ಆದರೆ ಅಲ್ಲಾಹನು ಅವರನ್ನು ರಕ್ಷಿಸಿದನು. ಮಾತ್ರವಲ್ಲ, ತನ್ನ ಸಾಮೀಪ್ಯ ಪಡೆದವರೊಂದಿಗೆ ಅವರನ್ನು ಸೇರಿಸಿದನು.

ಯೇಸುಕ್ರಿಸ್ತರು ಆಗಮಿಸಲಿರುವ ಪ್ರವಾದಿಯ ಕುರಿತು, "ಮುಂದೆ ಆಗಲಿರುವುದನ್ನು ತಿಳಿಸುವರು" ಎಂದು ಹೇಳಿದುದರ ಬಗ್ಗೆ, ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮುಂದೆ ಸಂಭವಿಸಲಿರುವ ಸಂಗತಿಗಳ ಕುರಿತು ಎಷ್ಟು ವಿಶದವಾಗಿ ಹೇಳಿರುವರೋ ಅಷ್ಟು ಬೇರೆ ಯಾವ

ಪ್ರವಾದಿಯೂ ನುಡಿದಿಲ್ಲ ಎಂದು ನಾವು ಹೇಳಬಯಸುತ್ತೇವೆ.

ಆಗಮಿಸಲಿರುವ ಪ್ರವಾದಿ ತನ್ನ ಮಾತನ್ನು ಹೇಳದ ಕೇಳಿದ ಮಾತುಗಳನ್ನೇ ಆಡುವರು ಎಂದು ಯೇಸುಕ್ರಿಸ್ತರು ನುಡಿದಿದ್ದರು. ಈ ವರ್ಣನೆ ಹಝ್ರತ್ ಮುಹಮ್ಮದ್ ಪೈಗಂಬರರಿಗೆ ಮಾತ್ರ ಅನ್ವಯಿಸುತ್ತದೆ. ಬೈಬಲಿನ ಹಳೆ ಮತ್ತು ಹೊಸ ಒಡಂಬಡಿಕೆಗಳಲ್ಲಿ ಯಾವುದೇ ಒಂದು ಪುಸ್ತಕ ಮನುಷ್ಯ ವಚನ ಮತ್ತು ದೇವವಚನ ಮಿಶ್ರಿತವಾಗದೆ ಸುರಕ್ಷಿತವಾಗಿಲ್ಲ. ಆದರೆ ಪವಿತ್ರ ಖುರ್‌ಆನ್‌ನಲ್ಲಿ ಆರಂಭದಿಂದ ಅಂತ್ಯದ ತನಕ ದೇವವಚನಗಳು ಮಾತ್ರ ಇವೆ. ಅದರಲ್ಲಿ ಪೈಗಂಬರರ ಸ್ವಂತ ಒಂದೇ ಒಂದು ಶಬ್ದ ಇಲ್ಲ.

ಬೈಬಲಿನಲ್ಲಿ ಸಂತ ಪೀಟರ್‌ರವರು ಜೆರುಸಲೇಮಿನ ಜನರ ಮುಂದೆ ಹೇಳಿದರು: "ಮನುಷ್ಯರೇ, ಸಹೋದರರೇ, ನಾನು ನಿಮ್ಮೊಂದಿಗೆ ಮಾತಾಡುತ್ತೇನೆ." ಯೋಹಾನ ಹೀಗೆ ಮಾತಾಡಲು ಪ್ರಾರಂಭಿಸುತ್ತಾರೆ: "ನಾನು ಯೋಹಾನ, ನಿಮ್ಮ ಸಹೋದರ". ಇದೇ ರೀತಿ ಫಿಲಿಪ್, ಜೇಮ್ಸ್ ಮತ್ತಿತರರ ಮಾತುಗಳು ಬೈಬಲ್‌ನಲ್ಲಿವೆ.

ಪವಿತ್ರ ಖುರ್‌ಆನ್ ಹಝ್ರತ್ ಪೈಗಂಬರರ ಕುರಿತು ಹೀಗೆ ಹೇಳುತ್ತದೆ:

**"ಅವರು (ಪೈಗಂಬರ್) ತನ್ನ ಇಚ್ಛೆಯಂತೆ ಮಾತನಾಡುವುದಿಲ್ಲ. ಇದು ಅವತೀರ್ಣಗೊಳಿಸಲ್ಪಟ್ಟ ದಿವ್ಯ ಸಂದೇಶ ಹೊರತು ಬೇರೇನೂ ಅಲ್ಲ" (53 : 4,5)**

ಯೇಸುಕ್ರಿಸ್ತರು ನುಡಿದ ಸುವಾರ್ತೆಯಲ್ಲಿ ಹೀಗೆ ಹೇಳಿದೆ: **"ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು."**

ಸಾರ್ವಲೌಕಿಕವೂ ಪರಿಪೂರ್ಣವೂ ಆದ ನಿಯಮ ಸಂಹಿತೆಯನ್ನು ತಂದುದಾಗಿ ಘೋಷಿಸಿದ ಏಕಮಾತ್ರ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರಾಗಿರುವರು. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

**"ಈ ದಿನ ನಿಮ್ಮ ಧರ್ಮವನ್ನು ನಿಮಗೆ ನಾನು ಪರಿಪೂರ್ಣಗೊಳಿಸಿರುವೆನು; ನನ್ನ ಅನುಗ್ರಹವನ್ನು ನಿಮಗೆ ಸಂಪೂರ್ಣವಾಗಿ ದಯಪಾಲಿಸಿರುವೆನು." (5:4)**

ಯೇಸುಕ್ರಿಸ್ತರು ಹೇಳಿದ ಸುವಾರ್ತೆ ಹಝ್ರತ್ ಮುಹಮ್ಮದ್ ಪೈಗಂಬರರಲ್ಲಿ ಸ್ಪಷ್ಟವಾಗಿ ಪ್ರತಿ ಅಂಶದಲ್ಲೂ ಸರಿಹೊಂದುವಂತೆ ಈಡೇರಿದೆ. ಈ ಆಶ್ಚರ್ಯಕರವಾದ ಸುವಾರ್ತೆಯ ಮಹತ್ವವನ್ನು ಕುಂದಿಸಲು ಕೆಲವು ಅಸಫಲ ಪ್ರಯತ್ನಗಳು ನಡೆದಿವೆ. ಈ ಸುವಾರ್ತೆಯಲ್ಲಿ ಹೇಳಲಾದ ಸಹಾಯಕ ಯೇಸುಕ್ರಿಸ್ತರ ಶಿಷ್ಯರ ಬಳಿಗೆ ಅವರು ಹೋದ ನಂತರ ಆಗಮಿಸಿದ ಪವಿತ್ರಾತ್ಮ ಎಂದು ಪ್ರತಿಪಾದಿಸಲಾಗಿದೆ. ಆಗಮಿಸಲಿರುವ ಸಹಾಯಕನ ಕುರಿತು ಅವನು ಎಂಬ ಪದವನ್ನು ಬಳಸಲಾಗಿದ್ದು ಅದು ಒಂದು ಆತ್ಮಕ್ಕೆ ಸಂಬಂಧಿಸಿ ಪ್ರಯೋಗಿಸಲ್ಪಡುವುದಿಲ್ಲ. ಸುವಾರ್ತೆಯಲ್ಲಿ ಸತ್ಯದ ಆತ್ಮನು ಯೇಸುಕ್ರಿಸ್ತರು ಹೋದ ನಂತರ ಬರುವುದಾಗಿ ಹೇಳಲಾಗಿದೆ. ಹಾಗಾದರೆ ಇವರು ಹೇಳುವ ಪವಿತ್ರಾತ್ಮ ಯೇಸುಕ್ರಿಸ್ತರ ಜೊತೆಯಲ್ಲಿ ಇರಲಿಲ್ಲವೆ? ಯಾವುದೇ ನಿಷ್ಠಾವಂತ ಕ್ರೈಸ್ತನು ಈ ನಿಲುವನ್ನು ಅಂಗೀಕರಿಸಲಾರನು. ಬೈಬಲಿನ ಹೊಸ ಒಡಂಬಡಿಕೆಯಲ್ಲಿ ಮೊದಲು ಇರದ ಮತ್ತು ಅನಂತರ ಪವಿತ್ರಾತ್ಮನಿಂದ ತರಲಾದ ಸತ್ಯ ಯಾವುದೆಂದು ಸಹ ಕೇಳಬೇಕಾಗಿದೆ.

## ನಿಮ್ಮ ಸಹೋದರರಲ್ಲಿ ಪ್ರವಾದಿ

ಯೇಸುಕ್ರಿಸ್ತರಿಗೆ ಮೊದಲು ಪ್ರವಾದಿ ಮೋಶೆ ಸಹ ಒಬ್ಬ ಮಹಾನ್ ಪ್ರವಾದಿಯ ಕುರಿತು ಶುಭವಾರ್ತೆನೀಡಿದ್ದರು. ಹೋರೇಬ್ ಪರ್ವತ ಪ್ರದೇಶದಲ್ಲಿ ಇಸ್ರಾಯೇಲ್ ಜನಾಂಗದವರನ್ನು ಸಂಬೋಧಿಸಿ ಅವರು ಹೇಳಿದರು:

**"ನಿಮ್ಮ ದೇವರಾದ ಕರ್ತನು ನಿಮ್ಮ ಸಹೋದರರಲ್ಲಿ ನನ್ನಂಥ ಪ್ರವಾದಿಯನ್ನು ನಿಮಗೆ ಏರ್ಪಡಿಸುವನು; ಅವನಿಗೇ ನೀವು ಕಿವಿಗೊಡಬೇಕು." (ಧರ್ಮೋಪದೇಶ ಕಾಂಡ: 18:15)**

ಪ್ರವಾದಿ ಮೋಶೆಗೆ ದೇವನು ಹೀಗೆ ಹೇಳಿದನು: **"ಇವರ ಸ್ವದೇಶದವರಲ್ಲಿ ನಿನ್ನಂಥ ಪ್ರವಾದಿಯನ್ನು ಅವರಿಗೋಸ್ಕರ ಏರ್ಪಡಿಸುವೆನು; ಅವನ ಬಾಯಿಂದ ನನ್ನ ಮಾತುಗಳನ್ನು ನುಡಿಸುವೆನು; ನಾನು ಅವನಿಗೆ ಅಜ್ಞಾಪಿಸಿದ್ದನ್ನೆಲ್ಲಾ ಅವನು ಅವರಿಗೆ ತಿಳಿಸುವನು. ಅವನು ನನ್ನ ಹೆಸರಿನಲ್ಲಿ ಹೇಳಿದ ಮಾತುಗಳಿಗೆ ಯಾರು ಕಿವಿಗೊಡುವುದಿಲ್ಲವೋ ಅಂಥವರನ್ನು ನಾನು ಶಿಕ್ಷಿಸುವೆನು." (ಧರ್ಮೋಪದೇಶಕಾಂಡ 18: 18-19)**

ಮೇಲಿನ ಬೈಬಲ್ ವಚನಗಳಿಂದ ಸ್ಪಷ್ಟವಾಗುವುದೇನೆಂದರೆ, ಪ್ರವಾದಿ ಮೋಶೆ ನಿಯಮ ಸಂಹಿತೆ ತರುವ ಒಬ್ಬ ಪ್ರವಾದಿ ತನ್ನ ಅನಂತರ ಇಸ್ರಾಯೇಲ್ ಸಂತತಿಗಳ ಸಹೋದರರ ವಂಶದಲ್ಲಿ ಜನಿಸುವುದಾಗಿ ಶುಭವಾರ್ತೆ ನೀಡಿದ್ದರು. ಆಗಮಿಸುವ ಪ್ರವಾದಿ ಸಾಮಾನ್ಯರಾಗಿರದೆ ನಿಯಮಸಂಹಿತೆ ತರುವ ಮಹಾಪ್ರವಾದಿ ಆಗುವರೆಂದು "ನಿನ್ನಂಥ ಪ್ರವಾದಿ" ಎಂದು ಹೇಳಿದುದರಿಂದ ಸ್ಪಷ್ಟವಾಗುತ್ತದೆ.

ಆಗಮಿಸಲಿರುವ ಪ್ರವಾದಿ ಹೊಸದಾದ ನಿಯಮಸಂಹಿತೆ ತರುವ ಪ್ರವಾದಿ ಆಗುವರೆಂದು ಸ್ಪಷ್ಟವಾಗುತ್ತದೆ. ಅಂತಹ ಪ್ರವಾದಿ ಸಾಮಾನ್ಯ ಉಪದೇಶಕರೋ ಸುಧಾರಕರೋ ಆಗಿರಲಾರರು. ಅವರು ಪರಿಪೂರ್ಣ ಉಪದೇಶಗಳನ್ನೊಳಗೊಂಡ ಮೂಲಭೂತ ತತ್ವಗಳೂ ನಿಯಮಗಳೂ ಅಡಕವಾದ ತತ್ವೋಪದೇಶಗಳನ್ನು ತರುವವರಾಗಬೇಕು. ಯೇಸುಕ್ರಿಸ್ತರು ಅಂತಹ ಪ್ರವಾದಿ ಆಗಿದ್ದರೆ? ಅವರು ಯಾವುದಾರೂ ಹೊಸ ನಿಯಮ ಸಂಹಿತೆ ತಂದಿದ್ದರೆ? ಅವರು ಹೇಳಿದ ಉತ್ತರ ಬೈಬಲಿನಲ್ಲಿ ಹೀಗಿದೆ:

**ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದುಹಾಕುವುದಕ್ಕೆ ನಾನು ಬಂದೆನೆಂದು ನೆನಸಬೇಡಿರಿ. ತೆಗೆದು ಹಾಕುವುದಕ್ಕೆ ಬಂದಿಲ್ಲ; ನೆರವೇರಿಸುವುದಕ್ಕೆ ಬಂದಿದ್ದೇನೆ. ನಿಮಗೆ ಸತ್ಯವಾಗಿ ಹೇಳುತ್ತೇನೆ– ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿನಿಂದ ಒಂದು ಸೊನ್ನೆಯಾದರೂ ಒಂದು ಗುಡಸಾದರೂಅಳಿದು ಹೋಗಲಾರದು." (ಮತ್ತಾಯ 5:17, 18)**

ಯೇಸುಕ್ರಿಸ್ತರ ಶಿಷ್ಯರು ಹೀಗೆ ಹೇಳಿದರು: **"ಯೇಸುಕ್ರಿಸ್ತ ಧರ್ಮಶಾಸ್ತ್ರದ ಶಾಪದಿಂದ ನಮ್ಮನ್ನು ಬಿಡಿಸಿದನು." (ಗಲಾತ್ಯದವರಿಗೆ 3:13)**

ಯೇಸುಕ್ರಿಸ್ತರು ಹೊಸ ಧರ್ಮಶಾಸ್ತ್ರವನ್ನು ತರಲಿಲ್ಲ, ಅವರ ಶಿಷ್ಯರು ಧರ್ಮಶಾಸ್ತ್ರ ಎಂದರೆ ನಿಯಮ ಸಂಹಿತೆಯನ್ನು ಶಾಪವೆಂದು ಗಣಿಸಿದರು. ಪವಿತ್ರ ಖುರ್‌ಆನ್ ಹೀಗೆ ಪ್ರತಿಪಾದಿಸಿದೆ:

**"ಇದು ಪರಿಪೂರ್ಣ ಗ್ರಂಥವಾಗಿದೆ. ಇದರಲ್ಲಿ ಸಂದೇಹವೇನೂ ಇಲ್ಲ. ಭಯಭಕ್ತಿಯುಳ್ಳವರಿಗೆ ಇದು ಒಂದು ಮಾರ್ಗದರ್ಶಕವಾಗಿದೆ." (2:3)**

ಆಗಮಿಸಲಿರುವ ಪ್ರವಾದಿ ಇಸ್ರಾಯೇಲ್ ಸಂತತಿಗಳಿಂದ ನೇಮಿಸಲ್ಪಡಲಾರರೆಂದೂ ಅವರ ಭ್ರಾತೃವರ್ಗದಿಂದ ನೇಮಿಸಲ್ಪಡುವರೆಂದೂ ಭವಿಷ್ಯವಾಣಿಯಲ್ಲಿ ಸೂಚಿಸಲಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಇಸ್ರಾಯೇಲ್ ಸಂತತಿಗಳ ಭ್ರಾತೃವರ್ಗಕ್ಕೆ ಸೇರಿದ ಹಝ್ರತ್ ಇಸ್ಮಾಯೀಲ್‌ರವರ(ಅ) ಸಂತಾನಕ್ಕೆ ಸೇರಿದವರಾಗಿದ್ದರು.

ಆಗಮಿಸಲಿರುವ ಪ್ರವಾದಿಗೆ ದೇವನು ತನ್ನ ವಚನಗಳನ್ನು ಅವತೀರ್ಣಗೊಳಿಸುವನೆಂದು ಭವಿಷ್ಯವಾಣಿಯಲ್ಲಿ ಸೂಚಿಸಲಾಗಿದೆ. ಯೇಸುಕ್ರಿಸ್ತರಿಗೆ ದೇವನು ಅವತೀರ್ಣಗೊಳಿಸಿದ ವಚನಗಳನ್ನು ನಾವು ಹೊಸ ಒಡಂಬಡಿಕೆಯಲ್ಲಿ ಕಾಣಲಾರೆವು. ಅದರಲ್ಲಿ ಯೇಸು ಕ್ರಿಸ್ತರ

ಜೀವನ ಚರಿತ್ರೆ ಹಾಗೂ ಅವರು ಮತ್ತು ಅವರ ಶಿಷ್ಯರು ಹೇಳಿದ ಮಾತುಗಳಿವೆ. ಆದರೆ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಹೇಳು (ಓ ಮುಹಮ್ಮದ್): **'ನಾನು ನಿಮ್ಮಂತಹ ಒಬ್ಬ ಮನುಷ್ಯ ಮಾತ್ರ. ಆದರೆ ನಿಮ್ಮ ಪ್ರಭು ಒಬ್ಬನೇ ಒಬ್ಬನೆಂದು ನನಗೆ ದಿವ್ಯ ಸಂದೇಶ ನೀಡಲ್ಪಟ್ಟಿದೆ.'"** (18:111)

ಭವಿಷ್ಯವಾಣಿಯಲ್ಲಿ "ಅವನ ಬಾಯಿಯಿಂದ ನನ್ನ ಮಾತುಗಳನ್ನು ನುಡಿಸುವೆನು" ಎಂದು ಹೇಳಲಾಗಿದೆ. ಆಶ್ಚರ್ಯಕರವಾದ ಸಂಗತಿ ಏನೆಂದರೆ ಯೇಸುಕ್ರಿಸ್ತರಿಗೆ ದೇವನಿಂದ ಸಂದೇಶರೂಪವಾಗಿ ಜನರಿಗೆ ತಲಪಿಸಲು ಲಭಿಸಿದ ಯಾವ ವಚನವೂ ಹೊಸ ಒಡಂಬಡಿಕೆಯಲ್ಲಿ ಉಲ್ಲೇಖಿಸಲ್ಪಟ್ಟಿಲ್ಲ. ಆದರೆ ಪವಿತ್ರ ಖುರ್‌ಆನ್‌ನಲ್ಲಿರುವ ವಚನಗಳು ದೇವನಿಂದ ಅವತೀರ್ಣಗೊಂಡವುಗಳೇ ಆಗಿವೆ ಎಂದು ಸ್ಪಷ್ಟಪಡಿಸಲಾಗಿದೆ.

ಆಗಮಿಸಲಿರುವುದು ಒಬ್ಬ ಪ್ರವಾದಿ ಎಂದು ಭವಿಷ್ಯವಾಣಿಯಲ್ಲಿ ಸೂಚಿಸಲಾಗಿದೆ. ಆದರೆ ಕ್ರೈಸ್ತ ಧರ್ಮಪ್ರಚಾರಕರು ವಾದಿಸುವುದೇನೆಂದರೆ, ಯೇಸುಕ್ರಿಸ್ತರು ತಾನು ಪ್ರವಾದಿ ಎಂದು ಹೇಳಿರಲಿಲ್ಲವೆಂದು. ಮತ್ತಾಯ ಹೀಗೆ ವರದಿ ಮಾಡುತ್ತಾರೆ: ಯೇಸುಕ್ರಿಸ್ತರು **"ಮನುಷ್ಯ ಕುಮಾರನೆಂಬ ನನ್ನನ್ನು ಯಾರು ಅನ್ನುತ್ತಾರೆ ಎಂದು ತನ್ನ ಶಿಷ್ಯರನ್ನು ಕೇಳಿದ್ದಕ್ಕೆ "... ಪೇತ್ರನು, "ನೀನು ಕ್ರಿಸ್ತನು, ಜೀವಸ್ವರೂಪವಾದ ದೇವರ ಕುಮಾರನು ಎಂದು ಉತ್ತರಕೊಟ್ಟನು."** (ಮತ್ತಾಯ 16:13, 16)

ಯೇಸುಕ್ರಿಸ್ತರು ತಾನು ಸ್ನಾನಿಕನಾದ ಯೋಹಾನ ಅಥವಾ ಎಲೀಯ ಅಥವಾ ಬೇರೆ ಯಾವ ಪ್ರವಾದಿಗಳಲ್ಲೂ ಒಬ್ಬನಲ್ಲವೆಂದು ಹೇಳಿದ್ದರು. ಆದರೆ ಹಝ್ರತ್ ಮುಹಮ್ಮದ್‌ರವರನ್ನು ಪೈಗಂಬರ್ (ಪ್ರವಾದಿ) ಎಂದು ಹೇಳಲಾಯಿತಲ್ಲದೆ ಪ್ರವಾದಿ ಮೂಸಾರಂತಹ ಪ್ರವಾದಿ ಎಂದೂ ಹೇಳಲಾಗಿದೆ. ಪವಿತ್ರ ಖುರ್‌ಆನ್ ಹೀಗೆನ್ನುತ್ತದೆ:

**"ಫಿರ್‌ಔನನ ಬಳಿಗೆ ನಾವು ಒಬ್ಬ ಸಂದೇಶವಾಹಕನನ್ನು ಕಳುಹಿಸಿದಂತೆ ನಿಶ್ಚಯವಾಗಿಯೂ ನಿಮಗೆ ಸಾಕ್ಷಿಯಾಗಿ ನಿಮ್ಮ ಬಳಿಗೆ ಒಬ್ಬ ಸಂದೇಶವಾಹಕನನ್ನು ನಾವು ಕಳುಹಿಸಿದ್ದೇವೆ."** (73:16)

ಸಂಕ್ಷಿಪ್ತವಾಗಿ ಹೇಳುವುದಾದರೆ, ಹಝ್ರತ್ ಮುಹಮ್ಮದ್ ಪೈಗಂಬರ್ ಆಗಮಿಸುವುದಕ್ಕೆ ಒಂದು ಸಾವಿರದ ಒಂಭೈನೂರು ವರ್ಷಗಳ ಮೊದಲು ಪ್ರವಾದಿ ಮೂಸಾ ಹೀಗೆ ಹೇಳಿದ್ದರು: ದೇವನ ವಿಧಿನಿರ್ಣಯದ ಪ್ರಕಾರ ನಾನು ತಂದುದು ಅಂತಿಮವಾದ ಧರ್ಮಶಾಸ್ತ್ರ ಅಲ್ಲ; ಮುಂದೆ ಬೇರೊಬ್ಬ ಪ್ರವಾದಿಯ ಮೂಲಕ ಹೊಸದಾದೊಂದು ಧರ್ಮಶಾಸ್ತ್ರ ಜಾರಿಗೊಳಿಸಲ್ಪಡುವುದು. ಆ ಪ್ರವಾದಿ ಎಲ್ಲಾ ಸತ್ಯಗಳನ್ನು ಕಲಿಸುವವರು. ಅವರು ಮನುಷ್ಯನ ಆಧ್ಯಾತ್ಮಿಕ ಪ್ರಗತಿಯ ಉತ್ತುಂಗ ಶಿಖರವನ್ನು ಏರಿದವರಾಗುವರು. ಲೋಕವು ಇನ್ನೊಬ್ಬ ಪ್ರವಾದಿ ಮತ್ತು ಇನ್ನೊಂದು ಧರ್ಮಶಾಸ್ತ್ರಕ್ಕಾಗಿ ಕಾಯುತ್ತಾ ಇರಬೇಕು.

ಪ್ರವಾದಿಗಳಾದ ಮೋಶೆ ಮತ್ತು ಯೇಸುಕ್ರಿಸ್ತರ ನಂತರ ಮತ್ತು ಬೈಬಲಿನ ನಂತರ ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಪೈಗಂಬರ್ ಪ್ರವಾದಿ ಆಗಮಿಸಿರುವುದು ದೇವನ ನಿರ್ಧಾರದ ಪ್ರಕಾರವೇ ಆಗಿದೆ. ಅವರನ್ನು ಮನುಷ್ಯರ ಮಾರ್ಗದರ್ಶನಕ್ಕೆ ಕಳುಹಿಸಲಾಗಿದೆ. ಅವರ ವಾದಗಳು ನ್ಯಾಯಬದ್ಧವೂ ಸತ್ಯವೂ ಆಗಿವೆ. ಅವರ ಆಗಮನವು ಹಿಂದೆ ನೀಡಲ್ಪಟ್ಟ ಸುವಾರ್ತೆಗಳ ಈಡೇರಿಕೆಯಾಗಿವೆ. ಪವಿತ್ರ ಖುರ್‌ಆನಿನ ಸಂದೇಶವು ಅನಾವಶ್ಯಕವೂ ಅನಗತ್ಯವೂ ಆಗಿಲ್ಲ. ಪವಿತ್ರ ಖುರ್‌ಆನ್ ಅವತೀರ್ಣವಾಗದಿರುತ್ತಿದ್ದರೆ ದೇವನು ತನ್ನ ಪ್ರವಾದಿಗಳ ಮೂಲಕ ಮಾಡಿದ ವಾಗ್ದಾನಗಳು ಈಡೇರುತ್ತಿರಲಿಲ್ಲ ಹಾಗೂ ಲೋಕವು ಸಂಶಯ ಮತ್ತು ಅವಿಶ್ವಾಸಕ್ಕೆ ಗುರಿಯಾಗುತ್ತಿತ್ತು.

## ಪಾರಾನ್‌ನಿಂದ ದಿವ್ಯ ಪ್ರಕಾಶ

ಬೈಬಲನ್ನು ನಂಬುವವರಿಗೆ ಅದರ ಭವಿಷ್ಯವಾಣಿಗಳು ಮಹಾನ್ ಪ್ರವಾದಿಯು ಆಗಮಿಸಲಿರುವ ಪ್ರದೇಶವನ್ನು ಸಹ ಸೂಚಿಸುತ್ತದೆ:

ಪ್ರವಾದಿ ಮೋಶೆ ಹೇಳಿದರು: **"ಕರ್ತನು ಸೀನಾಯಿ ಬೆಟ್ಟದಿಂದ ಬಂದು ಸೇಯೀರ್ ಎಂಬ ಬೆಟ್ಟದ ಸೀಮೆಯೊಳಗಿಂದ ಪ್ರಕಾಶಿಸಿ ಪಾರಾನ್ ಪರ್ವತದಿಂದ ಹೊಳೆದು ಲಕ್ಷಾಂತರ* ಪರಿಶುದ್ಧ ದೂತರ ಮಧ್ಯದಿಂದ ಅವರಿಗೋಸ್ಕರ ದಯಮಾಡಿದನು; ಆತನ ಬಲಪಾರ್ಶ್ವದಲ್ಲಿ ಅಗ್ನಿ ಸದೃಶವಾದ ಧರ್ಮಶಾಸ್ತ್ರವಿತ್ತು."** (ಧರ್ಮೋಪದೇಶಕಾಂಡ 33:2)

ಬೈಬಲಿನ ಈ ವಚನದಲ್ಲಿ ದೇವನ ಮಹಿಮೆಯ ಮೂರು ಪ್ರದರ್ಶನಗಳನ್ನು ಸೂಚಿಸಲಾಗಿದೆ. ಮೊದಲನೆಯದು ಪ್ರವಾದಿ ಮೋಶೆಯ ಕಾಲದಲ್ಲಿ ಸಿನಾಯಿ ಪರ್ವತದಲ್ಲಿ ಪ್ರಕಟವಾಯಿತು. ಎರಡನೆಯ ಸಾರಿ ಸೇಯೀರ್‌ನಲ್ಲಿ ಅದು ಪ್ರಕಟವಾಯಿತು. ಸೇಯೀರ್ ಎಂಬುದು ಯೇಸುಕ್ರಿಸ್ತರು ಪವಾಡಗಳನ್ನು ತೋರಿಸಿದ ಪ್ರದೇಶವಾಗಿತ್ತು. ಸೇಯೀರ್ ಸೀಮೆಯಲ್ಲಿ ಪ್ರಕಾಶಿಸಿತು ಎಂದು ಹೇಳಿದುದು ಯೇಸುಕ್ರಿಸ್ತರ ಆಗಮನದ ಕುರಿತಾಗಿದೆ. ದೇವನ ಮಹಿಮೆಯ ಮೂರನೆಯ ಪ್ರಕಟಣೆ ಪಾರಾನ್‌ನಲ್ಲಿ ಆಗಲಿಕ್ಕಿತ್ತು. ಪಾರಾನ್ (ಅರಬಿ ಭಾಷೆಯಲ್ಲಿ ಫಾರಾನ್ ಎನ್ನುತ್ತಾರೆ) ಹಝ್ರತ್ ಮುಹಮ್ಮದ್ ಪೈಗಂಬರ್ ಜನಿಸಿದ ಮಕ್ಕ ಮತ್ತು ಅವರು ನಿಧನ ಹೊಂದಿದ ಮದೀನ ನಗರಗಳ ಮಧ್ಯೆ ಇರುವ ಪರ್ವತ ಪ್ರದೇಶವಾಗಿದೆ. ಬೈಬಲಿನ ಹಳೆ ಒಡಂಬಡಿಕೆ ಪ್ರಕಾರ ಹಝ್ರತ್ ಮುಹಮ್ಮದ್ ಪೈಗಂಬರರ ವಂಶದ ಮೂಲಪುರುಷ ಹಝ್ರತ್ ಇಸ್ಮಾಈಲ್(ಅ) ಈ ಪ್ರದೇಶದಲ್ಲಿ ವಾಸಿಸುತ್ತಿದ್ದರು. ಬೈಬಲ್‌ನಲ್ಲಿ ಹೀಗೆ ಬರೆದಿದೆ:

**"ದೇವರು ಆ ಹುಡುಗನ (ಇಸ್ಮಾಈಲ್) ಸಂಗಡ ಇದ್ದನು; ಅವನು ಬೆಳೆದು ಕಾಡಿನಲ್ಲಿ ವಾಸವಾಗಿದ್ದು ಬಿಲ್ಲುಗಾರನಾದನು. ಅವನು ಪಾರಾನಿನ ಅರಣ್ಯದಲ್ಲಿ ವಾಸಮಾಡಿದನು."** (ಆದಿಕಾಂಡ 21:20, 21)

ಚಾರಿತ್ರಿಕ ಮತ್ತು ಭೌಗೋಳಿಕ ಸಾಕ್ಷ್ಯಗಳಿಂದ ತಿಳಿಯುವುದೇನೆಂದರೆ, ಹಝ್ರತ್ ಇಬ್ರಾಹೀಮ್‌ರವರ(ಅ) ವಂಶದವರು ಅರಬ್ ದೇಶದಲ್ಲಿ ವಾಸಿಸುತ್ತಿದ್ದರು. ಮಕ್ಕದಲ್ಲಿ ಹಝ್ರತ್ ಇಬ್ರಾಹೀಮ್‌ರವರಿಂದ ನಿರ್ಮಿಸಲ್ಪಟ್ಟ ಕಅ್‌ಬ ಆರಾಧನಾಲಯವನ್ನು ಅವರು ಬಹಳ ಆದರಭಾವದಿಂದ ಕಾಣುತ್ತಿದ್ದರು. ಹಝ್ರತ್ ಇಬ್ರಾಹೀಮ್‌ರವರ ಪುತ್ರ ಹಝ್ರತ್ ಇಸ್ಮಾಈಲ್ ಮೊದಲು ಮಕ್ಕದಲ್ಲಿ ವಾಸಿಸುತ್ತಿದ್ದರು. ಬೈಬಲಿನ ಆದಿಕಾಂಡವು ಹಝ್ರತ್ ಇಸ್ಮಾಈಲ್‌ರವರ ಹನ್ನೆರಡು ಮಕ್ಕಳ ಹೆಸರುಗಳನ್ನು ಸೂಚಿಸುತ್ತವೆ. ಅವರಲ್ಲಿ ತೇಮಾ ಮತ್ತು ಕೇದಾರ್ ಸೇರಿದ್ದರು. (ಆದಿಕಾಂಡ 25:13-16)

ಬೈಬಲ್ ಈ ಬಗ್ಗೆ ಹೀಗೆ ಹೇಳುತ್ತದೆ:

"ಅರಬಿಯ ವಿಷಯವಾದ ದೈವೋಕ್ತಿ.

ಸಾರ್ಥವಾಹರಾದ ದೇದಾನ್ಯರೇ, **ಮರುಭೂಮಿಯ ಪೊದೆಗಳಲ್ಲಿ ಇಳಿದುಕೊಳ್ಳಿರಿ. ಬಾಯಾರಿದವರಿಗೆ ನೀರನ್ನು ತಂದುಕೊಡಿರಿ. ತೇಮಾ ದೇಶದವರೇ, ಓಡಿಹೋದವರನ್ನು ಅನ್ನದೊಡನೆ ಎದುರುಗೊಳ್ಳಿರಿ. ಕತ್ತಿ, ಹಿರಿದ ಕತ್ತಿ, ಬಾಗಿದ ಬಿಲ್ಲು, ಯುದ್ಧದ ಬಾಧೆ ಇವುಗಳ ಕಡೆಯಿಂದ ಓಡಿಹೋಗುತ್ತಿದ್ದಾರಷ್ಟೆ. ಕರ್ತನು ನನಗೆ ಹೇಳಿರುವುದೇನೆಂದರೆ– ಆಳಿನ ವರುಷ ವಾಯಿದೆಗೆ ಸರಿಯಾದ ಒಂದು ವರುಷಕ್ಕೇ ಕೇದಾರಿನ ಸಕಲ ವೈಭವವು ಇಲ್ಲವಾಗುವುದು. ಬಿಲ್ಲುಗಾರರಲ್ಲಿ ಉಳಿದವರೂ ಕೇದಾರಿನವರ ಶೂರರೂ ವಿರಳವಾಗುವರು. ಇಸ್ರಾಯೇಲ್ಯರ ದೇವರಾದ ಕರ್ತನು ಇದನ್ನು ನುಡಿದಿದ್ದಾನೆ**

* Ten thousand (ಹತ್ತು ಸಾವಿರ) ಎಂದು ಇಂಗ್ಲಿಷ್ ಬೈಬಲ್ ಭಾಷಾಂತರದಲ್ಲಿದೆ.
– ಸಂಪಾದಕ

ಎಂಬುದೇ." (ಯೆಶಾಯ 21:13-17).

ಪ್ರವಾದಿ ಯೆಶಾಯರವರ ಈ ಪ್ರವಾದನೆ ಬದ್ರ್ ಯುದ್ಧದ ಚಿತ್ರ ನೀಡುತ್ತದೆ. ಹಝ್ರತ್ ಪೈಗಂಬರರು ಮಕ್ಕದಿಂದ ಮದೀನಕ್ಕೆ ವಲಸೆಹೋಗಿ ಒಂದು ವರ್ಷ ಕಳೆದ ನಂತರ ಈ ಯುದ್ಧವು ನಡೆಯಿತು. ಈ ಯುದ್ಧದಲ್ಲಿ ಕೇದಾರನ ಮಕ್ಕಳಾದ ಮಕ್ಕದ ನಿವಾಸಿಗಳೂ ಸುತ್ತು ಮುತ್ತಲಿನ ಪ್ರದೇಶದ ನಿವಾಸಿಗಳೂ ಮುಸ್ಲಿಮ್ ಖಡ್ಗಧಾರಿಗಳನ್ನು ಮತ್ತು ಬಿಲ್ಲುಗಾರರನ್ನು ಯುದ್ಧದಲ್ಲಿ ಎದುರಿಸಲಾಗದೆ ವಿನಾಶಕಾರಿ ಸೋಲಿಗೆ ಪಾತ್ರರಾದರು. ಅನುಭವಶಾಲಿ ಸೇನಾನಾಯಕರನ್ನು ಹೊಂದಿದ್ದ ಮಕ್ಕದ ಸೈನ್ಯವು ಅವರಿಗಿಂತ ಕಡಿಮೆ ಸಂಖ್ಯೆಯಲ್ಲಿದ್ದ ಮತ್ತು ಸಾಕಷ್ಟು ಆಯುಧಗಳು ಮತ್ತು ಸಾಮಾನು ಸರಂಜಾಮುಗಳಿಲ್ಲದ ಮುಸ್ಲಿಮರಿಂದ ಹೀನಾಯ ಸೋಲಿಗೆ ಗುರಿಯಾಯಿತು.

ಮುಸ್ಲಿಮರು ಮಕ್ಕದವರ ವಿರುದ್ಧ ಅನನುಕೂಲ ಪರಿಸ್ಥಿತಿಗಳಲ್ಲಿ ಹೋರಾಟ ಮುಂದುವರಿಸುತ್ತಾ ಇದ್ದರು. ಕೊನೆಗೆ ಹಝ್ರತ್ ಮುಹಮ್ಮದ್ ಪೈಗಂಬರರು ಹತ್ತು ಸಾವಿರ ಸಂತರಾದ ಶಿಷ್ಯರೊಂದಿಗೆ ಮಕ್ಕವನ್ನು ಪ್ರವೇಶಿಸಿದರು. ದೇವನ ಸಂದೇಶವು ಪವಿತ್ರ ಖುರ್‌ಆನ್ ಮೂಲಕ ಪರಿಪೂರ್ಣಗೊಳಿಸಲ್ಪಟ್ಟಿದೆ ಎಂದು ಹಝ್ರತ್ ಪೈಗಂಬರರು ಘೋಷಿಸಿದರು.

ಈ ರೀತಿ ಬೈಬಲಿನಲ್ಲಿರುವ ಪ್ರವಾದಿ ಮೋಶೆಯವರ ಭವಿಷ್ಯ ವಾಣಿ ಈಡೇರಿತು. ದೇವನು ಪಾರಾನ್‌ನಲ್ಲಿ ಹತ್ತು ಸಾವಿರ ಸಂತ ರೊಂದಿಗೆ ಪ್ರಕಾಶಿಸುವನು; ಅವನ ಕೈಯಲ್ಲಿ ಅಗ್ನಿ ಸದೃಶ ಧರ್ಮಶಾಸ್ತ್ರ ಇರುವುದು ಎಂದು ಹೇಳಲಾಗಿತ್ತು. ಯೇಸುಕ್ರಿಸ್ತರು ಸುವಾರ್ತೆ ನೀಡಿದ, ಸತ್ಯದ ಆತ್ಮ ಎಲ್ಲ ಸತ್ಯಗಳಿಗೆ ಮಾರ್ಗದರ್ಶನ ನೀಡುವುದು ಎಂದು ಹೇಳಿದುದು ಸಹ ಈಡೇರಿತು.

ಪವಿತ್ರ ಖುರ್‌ಆನ್ ಅಗ್ನಿ ಸದೃಶವಾಗಿ ಮಾನವರ ಎಲ್ಲಾ ಅಶುದ್ಧ ಪದಾರ್ಥಗಳನ್ನು ಸುಟ್ಟುಹಾಕುತ್ತದೆ ಮತ್ತು ಮಲೀನ ಹೃದಯಗಳನ್ನು ಶುದ್ಧ ಹೃದಯಗಳಾಗಿ ಪರಿವರ್ತಿಸುತ್ತದೆ.

ಈ ಭವಿಷ್ಯವಾಣಿ ಯೇಸುಕ್ರಿಸ್ತರಿಗೆ ಅನ್ವಯಿಸುತ್ತದೆಯೋ? ಇಲ್ಲ. ಅವರು ಪಾರಾನಿನ ಪ್ರದೇಶದಿಂದ ಬರಲಿಲ್ಲ. ಅವರಿಗೆ ಕೇವಲ ಹನ್ನೆರಡು ಶಿಷ್ಯರಿದ್ದರು. ಹತ್ತುಸಾವಿರ ಸಂತರು ಅವರ ಜೊತೆಗಿರಲಿಲ್ಲ. ಪ್ರವಾದಿ ಯೆಶಾಯ ಓಡಿಹೋದವರ ಕುರಿತು ಪ್ರಸ್ತಾಪಿಸುತ್ತಾರೆ. ಹಝ್ರತ್ ಮುಹಮ್ಮದ್ ಪೈಗಂಬರರು ಮಕ್ಕದಿಂದ ಮದೀನಕ್ಕೆ ವಲಸೆಹೋದುದು ಮುಸ್ಲಿಮರ ಚರಿತ್ರೆಯ ಪ್ರಮುಖ ಭಾಗವಾಗಿದೆ. ಇಸ್ಲಾಮಿಕ ಕ್ಯಾಲೆಂಡರ್ ಪೈಗಂಬರರು ಮದೀನಕ್ಕೆ ವಲಸೆಹೋದ ಆ ವರ್ಷದಿಂದ ಆರಂಭವಾಗುತ್ತದೆ.

### "ಆತನ ಮಹಿಮೆಯು ಭೂಮಂಡಲವನ್ನು ತುಂಬುತ್ತದೆ."

ಪ್ರವಾದಿ ಹಬಕ್ಕೂಕ್‌ರವರು ಹಲವು ಶತಮಾನಗಳ ಹಿಂದೆ ಹೀಗೆ ಸುವಾರ್ತೆ ನೀಡಿದ್ದರು:

**"ದೇವರು ತೇಮಾನಿನಿಂದ ಬರುತ್ತಾನೆ, ಸದಮಲಸ್ವಾಮಿಯು ಪಾರಾನ್ ಪರ್ವತದಿಂದ ಐತರುತ್ತಾನೆ; ಸೆಲಾ. ಆತನ ಪ್ರಭಾವವು ಆಕಾಶಮಂಡಲವನ್ನು ಆವರಿಸುತ್ತಿದೆ, ಆತನ ಮಹಿಮೆಯು ಭೂ ಮಂಡಲವನ್ನು ತುಂಬುತ್ತಿದೆ; ಆತನ ತೇಜಸ್ಸು ಸೂರ್ಯನಂತಿದೆ, ಅದರ ಪಕ್ಕಗಳಲ್ಲಿ ಕಿರಣಗಳು ಹೊರಡುತ್ತಿವೆ; ಅದೇ ಆತನ ಶಕ್ತಿನಿಧಿ. ಆತನ ಮುಂದೆ ಮುಂದೆ ವ್ಯಾಧಿಯು ನಡೆಯುತ್ತದೆ; ಆತನ ಹೆಜ್ಜೆ ಜಾಡುಗಳಲ್ಲಿ ಜ್ವರ ಜ್ವಾಲೆಯು ಏಳುತ್ತದೆ. ಆತನು ನಿಂತುಕೊಳ್ಳಲು ಭೂಮಿಯು ಕಂಪಿಸುತ್ತದೆ;**

**ದೃಷ್ಟಿಸಲು ಜನಾಂಗಗಳು ಬೆದರುತ್ತವೆ;**
**ಪುರಾತನ ಪರ್ವತಗಳು ಸೀಳಿಹೋಗುತ್ತವೆ;**
**ಸನಾತನ ಗಿರಿಗಳು ಕುಸಿದು ಬೀಳುತ್ತವೆ;**
**ಆತನ ಆಗಮನವು ಅನಾದಿಯಿಂದ ಹೀಗೆಯೇ ಇರುವುದು.**
**ಇಗೋ, ಕೂಷಾನಿನ ಗುಡಾರಗಳು ಸಂಕಟಪಡುತ್ತಿವೆ,**
**ಮಿದ್ಯಾನ್ ದೇಶದ ಡೇರೆಗಳು ನಡುಗುತ್ತಿವೆ." (ಹಬಕ್ಕೂಕ್ 3: 3-7)**

ದೇವನ ಮೂರನೆಯ ಪ್ರಕಟಣೆಯ ಕುರಿತು ಇದರ ಮೊದಲು ಪ್ರಸ್ತಾಪಿಸಲಾಗಿದೆ. ಅದನ್ನು ಪ್ರಕಟಗೊಳಿಸುವ ಪ್ರವಾದಿ ತೇಮಾ ಮತ್ತು ಪಾರಾನಿನ ಪ್ರದೇಶದಿಂದ ಬರಲಿರುವರು ಎಂದು ಸೂಚಿಸಲಾಗಿದೆ. ಭೂಮಿಯು ಅವರ ಮಹಿಮೆಯಿಂದ ತುಂಬಿರುವುದು ಎಂದರೆ ಅವರು ಸ್ತುತಿಸಲ್ಪಡುವವರು ಎಂದಾಗುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರರಿಗೆ ಮುಹಮ್ಮದ್ ಎಂಬ ಹೆಸರು ದೊರಕಿದುದು ಆಕಸ್ಮಿಕವಾಗಿ ಅಲ್ಲ. ಮುಹಮ್ಮದ್ ಎಂದರೆ ಸ್ತುತಿಸಲ್ಪಟ್ಟವನೆಂದು ಅರ್ಥ. ಅಂತಹ ಸುಂದರ ಹೆಸರು ಮತ್ತು ವ್ಯಕ್ತಿತ್ವವನ್ನು ಹೊಂದಿದ ವ್ಯಕ್ತಿಯೇ ಹಬಕ್ಕೂಕರ ವರ್ಣನೆಗೆ ಅರ್ಹರಾಗುತ್ತಾರೆ. ಹಝ್ರತ್ ಪೈಗಂಬರರ(ಸ) ಶತ್ರುಗಳು ನಾಶವನ್ನೂ ವ್ಯಾಧಿಯನ್ನೂ ಜ್ವರಜ್ವಾಲೆಯನ್ನೂ ಅನುಭವಿಸಿ ಸೋತರು. ಶತ್ರುಗಳು ಹೆಚ್ಚು ಬಲಶಾಲಿ ಸೈನ್ಯವನ್ನು ಹೊಂದಿದ್ದರೂ ಸೋಲನ್ನು ಅನುಭವಿಸಬೇಕಾಯಿತು.

ಪ್ರವಾದಿ ಮೋಶೆ ಶತ್ರುಗಳನ್ನು ಎದುರಿಸುತ್ತಾ ಇದ್ದಾಗಲೇ ಮೃತರಾದರು. ಯೇಸುಕ್ರಿಸ್ತರನ್ನು ಶಿಲುಬೆಗೆ ಜಡಿಯಲಾಯಿತು. ಜನಾಂಗಗಳು ಬೆದರಿದವು ಎಂದು ಯಾವ ಪ್ರವಾದಿಯ ಕುರಿತು ಭವಿಷ್ಯ ನುಡಿಯಲಾಗಿದೆಯೋ ಅವರು ಹಝ್ರತ್ ಮುಹಮ್ಮದ್ ಪೈಗಂಬರರ ಹೊರತು ಬೇರೆ ಯಾರೂ ಆಗಲು ಸಾಧ್ಯವಿಲ್ಲ. ಅವರ ಶತ್ರುಗಳು "ಪುರಾತನ ಪರ್ವತಗಳು ಮತ್ತು ಸನಾತನ ಗಿರಿಗಳು" ಆಗಿದ್ದರೂ (ಎಂದರೆ ಬಹಳ ಶಕ್ತಿಶಾಲಿಗಳಾಗಿದ್ದರೂ) ಅವರೆಲ್ಲರೂ ಸೋಲಿಸಲ್ಪಟ್ಟರು.

ಕೂಷಾನಿನ ಗುಡಾರಗಳು ಮತ್ತು ಮಿಂದ್ಯಾನಿನ ಡೇರೆಗಳು ಎಂದು ಹೇಳಿದ್ದು ರೋಮನ್ ರಾಜನ ಅಧೀನದಲ್ಲಿದ್ದ ಪ್ರದೇಶಗಳ ಕುರಿತಾಗಿದೆ. ಆ ಪ್ರದೇಶಗಳು ಹಝ್ರತ್ ಮುಹಮ್ಮದ್ ಪೈಗಂಬರರ ಶಿಷ್ಯರ ಅಧೀನಕ್ಕೆ ಅನಂತರ ಬಂತು.

### ಸಮಾಧಾನದ ಪ್ರಭು

ಪ್ರವಾದಿ ಯೆಶಾಯರವರ ಗ್ರಂಥದಲ್ಲಿ ಆಗಮಿಸಲಿರುವ ಪ್ರವಾದಿಯ ಕುರಿತು ಇರುವ ಪ್ರಸ್ತಾಪಗಳು ಹಝ್ರತ್ ಮುಹಮ್ಮದ್ ಪೈಗಂಬರರಿಗೆ ಮಾತ್ರ ಸತ್ಯವಾಗಿ ಅನ್ವಯಿಸುತ್ತದೆ. ಒಬ್ಬ ಮನುಷ್ಯನು ಲೋಕದ ಜನಾಂಗಗಳಿಗೆ ಕರೆನೀಡುವಾಗ ಅವರು ತ್ವರಿತವಾಗಿ ಅವರ ಕರೆಗೆ ಉತ್ತರನೀಡಿ ಆ ಪ್ರವಾದಿಯ ಸುತ್ತಲೂ ಜಮಾಯಿಸುವರು ಎಂದು ಹೇಳಲಾಗಿದೆ. (ಯೆಶಾಯ 5:26-30 ನೋಡಿರಿ). ವಾಗ್ದತ್ತ ಪ್ರವಾದಿಯ ಅನುಯಾಯಿಗಳನ್ನು ಯುದ್ಧದಲ್ಲಿ ಭಾಗವಹಿಸಲು ಬದ್ಧರಾಗುವರೆಂದು ಸಹ ಹೇಳಲಾಗಿದೆ. ನೆಲ ಮತ್ತು ಜಲದ ಪಾಪ ಮತ್ತು ಭ್ರಷ್ಟಾಚಾರಗಳ ಕಾರಣ ಹಗಲು ಬೆಳಕು ಸಹ ಅಂಧಕಾರ ಮಯವಾಗುವ ಕಾಲದಲ್ಲಿ ಪ್ರವಾದಿ ಆಗಮಿಸುವರೆಂದು ಹೇಳಲಾಗಿದೆ. ಆಗ ದೇವನು ಪ್ರವಾದಿ ಯಾಕೋಬರ ಸಂತತಿಗಳಿಂದ ತನ್ನ ಮುಖವನ್ನು ತಿರುಗಿಸುವನೆಂದು ಸಹ ಪ್ರವಾದಿ ಯೆಶಾಯ ಹೇಳಿರುವರು (ಯೆಶಾಯ 8:13-17 ನೋಡಿರಿ).

ಈ ಕೆಳಗಿನ ಉಲ್ಲೇಖ ನೋಡಿರಿ:

**"ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು; ಆಡಳಿತವು ಅವನ ಬಾಹುಗಳ ಮೇಲಿರುವುದು; ಅದ್ಭುತ ಸ್ವರೂಪನು, ಆಲೋಚನಾಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು. ಅವನ ಮುಖಾಂತರ**

**ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವುದು. ದಾವೀದನ ರಾಜ್ಯದಲ್ಲಿ ನಿತ್ಯ ಸಮಾಧಾನವಿರುವುದು, ಆ ರಾಜ್ಯವು ಇಂದಿನಿಂದ ಯಾವಾಗಲೂ ನೀತಿ ನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವುದು; ಸೇನಾಧೀಶ್ವರನಾದ ಕರ್ತನ ಆಗ್ರಹವು ಇದನ್ನು ನೆರವೇರಿಸುವುದು." (ಯೆಶಾಯ 9:6-7)**

ಈ ಉಲ್ಲೇಖದಲ್ಲಿ ಒಬ್ಬ ಅರಸನ ಕುರಿತು ಭವಿಷ್ಯ ನುಡಿಯಲಾಗಿದೆ. ಅವರಿಗೆ ಈ ಕೆಳಗಿನ ಗುಣಗಳಿರುವುವು:

1. ಅದ್ಭುತ ಸ್ವರೂಪನು
2. ಆಲೋಚನಾಕರ್ತನು
3. ಪರಾಕ್ರಮಿಯಾದ ದೇವರು
4. ನಿತ್ಯನಾದ ತಂದೆ
5. ಸಮಾಧಾನದ ಪ್ರಭು

ಯೇಸು ಕ್ರಿಸ್ತರು ಎಂದಾದರೂ ಅರಸರಾಗಿದ್ದರೆ? ಈ ಸುವಾರ್ತೆಯಲ್ಲಿ ಸೂಚಿಸಲ್ಪಟ್ಟ ಹೆಸರುಗಳು ಎಂದಾದರೂ ಅವರಿಗೆ ಅನ್ವಯಿಸಿ ಹೇಳಲಾಗಿದೆಯೆ?

ಅವರ ಜನನದ ಕಾರಣದಿಂದ ಅವರು ಅದ್ಭುತ ವ್ಯಕ್ತಿ ಎಂದು ಕರೆಯಲ್ಪಟ್ಟಿರಬಹುದು. ಆದರೆ ಅವರ ವಿರೋಧಿಗಳು ಅವರನ್ನು ವ್ಯಭಿಚಾರ ಪುತ್ರ ಎಂದು ಗಣಿಸಿದುದರಿಂದ ಅವರಿಗೆ ಸಹಾಯ ಮಾಡುವವರು ಸಹ ಅವರ ಈ ಪಿತೃತ್ವದ ಕುರಿತು ಸಂಶಯಭರಿತರಾಗಿದ್ದರು. ಮೇಲಿನ ವಚನದಲ್ಲಿ ಹೇಳಿದಂತೆ, ಅವರು ತನ್ನ ಪರಾಕ್ರಮದ ಯಾವ ಪ್ರಕಟಣೆ ಕೂಡ ತೋರಿಸಲಿಲ್ಲ. ಅವರನ್ನು ನಿತ್ಯನಾದ ತಂದೆ ಎಂದೆನ್ನಲು ಸಾಧ್ಯವಿಲ್ಲ. ಅವರು ಸ್ವತಃ ತನ್ನ ಅನಂತರ ಬರುವವರ ಕುರಿತು ಪ್ರಸ್ತಾಪಿಸಿದ್ದರು. ಅವರು ಅರಸರಾಗಲಿಲ್ಲ ಮತ್ತು ಅವರು ಲೋಕಕ್ಕೆ ಶಾಂತಿ ಸಮಾಧಾನಗಳನ್ನು ತರಲೂ ಇಲ್ಲ. ಅವರು ಶಿಲುಬೆಗೆ ಜಡಿಯಲ್ಪಡುವ ತನ್ನ ವಿರೋಧಿಗಳ ಹಿಂಸಾಚಾರಗಳಿಗೆ ಗುರಿಯಾಗುತ್ತಿದ್ದರು. ಆದುದರಿಂದ ಅವರನ್ನು ಸಮಾಧಾನದ ಪ್ರಭು ಎಂದೆನ್ನಲು ಸಾಧ್ಯವಿಲ್ಲ. ಅವರು ಎಂದೂ ಯಾವ ಸರಕಾರವನ್ನೂ ಸ್ಥಾಪಿಸಲಿಲ್ಲ. ಆದುದರಿಂದ ಅವರ ಸರಕಾರ ಸ್ಥಿರವಾಗಿ ನಿಲ್ಲುವುದು ಎಂದು ಅವರ ಜೀವಿತಕ್ಕೆ ಸಂಬಂಧಿಸಿ ಹೇಳಲಾಗದು. ಯೆಶಾಯ ಪ್ರವಾದಿಯ ಗ್ರಂಥದಲ್ಲಿ ವಿವರಿಸಲಾದ ಚಿಹ್ನೆಗಳು ಹಝ್ರತ್ ಮುಹಮ್ಮದ್ ಪೈಗಂಬರರಿಗೆ ಮಾತ್ರ ಅನ್ವಯಿಸುತ್ತದೆ. ಅವರು ಅರಬ್ ರಾಜ್ಯದ ಆಡಳಿತೆ ವಹಿಸಿದುದರಿಂದ ಅವರನ್ನು ಅರಸರೆಂದು ಅವರ ಇಚ್ಛೆಗೆ ವಿರುದ್ಧವಾಗಿ ಕರೆಯಬೇಕಾಯಿತು.

ಹಝ್ರತ್ ಮುಹಮ್ಮದ್ ಪೈಗಂಬರ್ ಹೆಸರಿನಲ್ಲಿಯೂ ಅವರ ಸಾಧನೆಗಳ ದೃಷ್ಟಿಯಲ್ಲೂ ಅದ್ಭುತ ವ್ಯಕ್ತಿಯಾಗಿದ್ದರು. ಯೇಸು ಕ್ರಿಸ್ತರು ದ್ರಾಕ್ಷೆ ತೋಟದ ಉಪಮೆಯಲ್ಲಿ ಕೆಲಸಗಾರರಿಗೆ ಅದರ ಮೇಲ್ವಿಚಾರಣೆ ನೀಡಿದುದನ್ನು ಪ್ರಸ್ತಾಪಿಸುತ್ತಾರೆ. ಆ ಕೆಲಸಗಾರರು ದುಷ್ಟರಾಗಿದ್ದರು. ಅವರು ತಮ್ಮ ಯಜಮಾನನ ಇತರ ಸೇವಕರಿಗೆ ಕಲ್ಲೆಸೆದು ಕೊಂದರಲ್ಲದೆ ಮಾಲಿಕನ ಮಗನನ್ನೂ ಕೊಂದರು. ಯೇಸು ಕ್ರಿಸ್ತರು ಕೊನೆಗೆ ಹೇಳಿದರು:

**ಯಜಮಾನನೇ ಸ್ವತಃ ಬಂದು ದುಷ್ಟರನ್ನು ಕೊಂದು ದ್ರಾಕ್ಷೆ ತೋಟವನ್ನು, "ಕಾಲ ಕಾಲಕ್ಕೆ ಹಣ್ಣುಗಳನ್ನು ತನಗೆ ಸಲ್ಲಿಸುವಂಥ ಬೇರೆ ಒಕ್ಕಲಿಗರಿಗೆ ತನ್ನ ತೋಟವನ್ನು ವಾರಕ್ಕೆ ಕೊಡುವನು."**

**ಈ ಬಗ್ಗೆ ಹೀಗೆ ಹೇಳಲಾಗಿದೆ:**

**"ಮನೆ ಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು;**

**ಇದು ಕರ್ತನಿಂದಲೇ ಆಯಿತು; ನಮಗೆ ಆಶ್ಚರ್ಯವಾಗಿ ತೋರುತ್ತದೆ. (ಮತ್ತಾಯ 21:33-42 ನೋಡಿರಿ)**

ಅದ್ಭುತ ವ್ಯಕ್ತಿ ಬರುವುದು ಈ ರೀತಿಯಾಗಿದೆ. ಪುತ್ರನನ್ನು ಕೊಂದ ನಂತರ ಇನ್ನೊಬ್ಬನನ್ನು ಕಳುಹಿಸಲಾಗುವುದು. ಆ ವ್ಯಕ್ತಿ ಕಟ್ಟಡದ ಮೂಲೆಗಲ್ಲಾಗುವರು. ಅವರು ಯೇಸು ಕ್ರಿಸ್ತರ ದೃಷ್ಟಿಯಲ್ಲೂ ಲೋಕದ ಜನರ ದೃಷ್ಟಿಯಲ್ಲೂ ಆಶ್ಚರ್ಯಕರರಾಗುವರು.

ಹಝ್ರತ್ ಮುಹಮ್ಮದ್ ಪೈಗಂಬರರ ಅದ್ಭುತ ಸಾಧನೆಗಳ ಕುರಿತು ತೋಮಸ್ ಕಾರ್ಲೈಲ್ ಹೀಗೆ ಹೇಳುತ್ತಾರೆ:

**"ಅರಬ್ ಜನಾಂಗಕ್ಕೆ ಅದು (ಪ್ರವಾದಿಯ ಆಗಮನ) ಅಂಧಕಾರದಿಂದ ಹೊರಗೆ ಬಂದು ಬೆಳಕಿಗೆ ಜನ್ಮತಾಳಿದ ಹಾಗಿತ್ತು. ಅದರ ಮೂಲಕ ಅರಬ್ ದೇಶ ಮೊತ್ತಮೊದಲು ಚೈತನ್ಯಶಾಲಿಯಾಯಿತು. ಅರಬಿಗಳು ಲೋಕದ ಸೃಷ್ಟಿಯ ಕಾಲದಿಂದ ಮೊದಲುಗೊಂಡು ಬಡ ಕುರಿಗಾಹಿಗಳಾಗಿ ಯಾರ ಗಮನಕ್ಕೂ ಬಾರದೆ ಮರುಭೂಮಿಗಳಲ್ಲಿ ಅಲೆದಾಡುತ್ತಿದ್ದರು. ಒಬ್ಬ ಶೂರ ಪ್ರವಾದಿಯನ್ನು ಅವರಿಗೆ ಅವರು ನಂಬುವಂತಹ ಮಾತಿನೊಂದಿಗೆ ಕಳುಹಿಸಲಾಯಿತು. ಅನಂತರ ಯಾರ ಗಮನಕ್ಕೂ ಬಾರದವರು ಲೋಕದಾದ್ಯಂತ ಗಮನಿಸಲ್ಪಡುವವರಾದರು; ಖ್ಯಾತಿಗಳಿಸದವರು ಲೋಕದಾದ್ಯಂತ ಖ್ಯಾತಿಗಳಿಸಿದವರಾದರು. ನೂರು ವರ್ಷದೊಳಗೆ ಅರೇಬಿಯಾದ ಆಡಳಿತೆ ಒಂದು ಕಡೆ ಸ್ಪೈನಿನ ಗ್ರೆನಡಾ ವರೆಗೂ ಇನ್ನೊಂದು ಕಡೆ ಡೆಲ್ಲಿವರೆಗೂ ವ್ಯಾಪಿಸಿತು. ಶೌರ್ಯ, ತೇಜಸ್ಸು ಮತ್ತು ಪ್ರತಿಭೆಯ ಬೆಳಕನ್ನು ಹೊಂದಿದ ಅರೇಬಿಯಾ ಪ್ರಪಂಚದ ಒಂದು ಭೂಭಾಗದಲ್ಲಿ ದೀರ್ಘ ಕಾಲದಿಂದ ಪ್ರಕಾಶಿಸುತ್ತಿದೆ. ವಿಶ್ವಾಸವು ಮಹತ್ವಪೂರ್ಣವಾದುದೂ ದೀರ್ಘ ಕಾಲ ಬಾಳುವುದೂ ಆಗಿದೆ. ಒಂದು ಜನಾಂಗದ ಚರಿತ್ರೆಯು ಫಲದಾಯಕವಾಗುವುದು, ಆತ್ಮೋನ್ನತಿ ಗಳಿಸುವುದು ಮತ್ತು ಶ್ರೇಷ್ಠತೆ ಗಳಿಸುವುದು ಅದು ನಂಬಿಕೆಯನ್ನು ಅವಲಂಬಿಸಿದ ಕೂಡಲೆ ಆಗಿದೆ. ಅರಬಿಗಳು ಮತ್ತು ಮುಹಮ್ಮದ್ ಕುರಿತು ಹೇಳುವುದಾದರೆ, ಯಾರ ಗಮನಕ್ಕೂ ಬಾರದೆ ಇದ್ದ, ಕಪ್ಪು ಮರುಭೂಮಿ ಪ್ರದೇಶದ ಬೆಂಕಿಯ ಒಂದು ಕಿಡಿಯು ಬಂದೆರಗಿತು. ಆಗ ಮರುಭೂಮಿಯ ಆ ಮರುಳು ಸ್ಫೋಟಕ ವಸ್ತು ಆಯಿತು. ಅದರಿಂದ ಹೊರಟ ಬೆಂಕಿಯ ಜ್ವಾಲೆಗಳು ಡೆಲ್ಲಿಯಿಂದ ಗ್ರೆನೆಡಾದ ತನಕ ವ್ಯಾಪಿಸುತ್ತಾ ಇದೆ. ನಾನು ಇದರ ಮೊದಲು ಹೇಳಿದ ಹಾಗೆ ಮಹಾಪುರುಷರು ಆಕಾಶದಿಂದ ಬಂದೆರಗುವ ಸಿಡಿಲು ಮಿಂಚುಗಳ ಹಾಗಿದ್ದಾರೆ. ಅವರ ಆಗಮನಕ್ಕೆ ಕಾದುಕೊಂಡಿದ್ದ ಇಂಧನದ ಹಾಗೆ ಜನರು ಅವರ ಜೊತೆಗೂಡಿ ಉಳಿಯಲು ತೊಡಗುತ್ತಾರೆ." (Thomas Carlyle in Heros and Hero-Worship).**

ಯೆಶಾಯ ಪ್ರವಾದಿಯ ಭವಿಷ್ಯವಾಣಿಯಲ್ಲಿ ಆಗಮಿಸಲಿರುವ ಪ್ರವಾದಿಯನ್ನು ಆಲೋಚನಾಕರ್ತನೆಂದು ಹೇಳಲಾಗಿದೆ. ಇದು ಸಹ ಹಝ್ರತ್ ಮುಹಮ್ಮದ್ ಪೈಗಂಬರರಿಗೆ ಅನ್ವಯಿಸುತ್ತದೆ. ಒಂದು ದೇಶವೇ ಅವರ ಸಲಹೆ ಮತ್ತು ಉಪದೇಶಗಳನ್ನು ಬಯಸಿತು. ಪೈಗಂಬರರು ಸಹ ತನ್ನ ಜನತೆಯೊಂದಿಗೆ ಸಮಾಲೋಚನೆ ನಡೆಸಿದರು. ಪ್ರಾಮುಖ್ಯವಾದ ಎಲ್ಲ ವಿಚಾರಗಳಲ್ಲಿ ಸರಕಾರವು ಜನರ ಅಭಿಪ್ರಾಯಗಳನ್ನು ತಿಳಿಯುವ ಬದ್ಧತೆಯನ್ನು ಅವರು ಮನಗಾಣಿಸಿದರು. ಪೈಗಂಬರರ ಶಿಷ್ಯರು ಸದಾ ಅವರ ಸಲಹೆ ಸೂಚನೆ, ಉಪದೇಶಗಳನ್ನು ಬಯಸುತ್ತಿದ್ದರೆಂದು ಖುರ್‌ಆನ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಯೆಶಾಯ ಪ್ರವಾದಿಯ ಭವಿಷ್ಯವಾಣಿಯಲ್ಲಿ ಆಗಮಿಸಲಿರುವ ಪ್ರವಾದಿಯನ್ನು ಪರಾಕ್ರಮಿಯಾದ ದೇವರು ಎಂದು ವರ್ಣಿಸಲಾಗಿದೆ. ಬೈಬಲ್‌ನಲ್ಲಿ ಅನೇಕ ಸ್ಥಳಗಳಲ್ಲಿ ಪ್ರವಾದಿಗಳ ಕುರಿತು ದೇವರೆಂದು ಪ್ರಸ್ತಾಪಿಸಲಾಗಿದೆ. (ವಿಮೋಚನಾ ಕಾಂಡ 7:1, 4:16 ನೋಡಿರಿ).

ಮನುಷ್ಯನ ಕುರಿತು ದೇವನ ಹಾಗೆ ಎಂದು ಹೇಳಿದರೆ ಅದರ ಅರ್ಥ ಸರ್ವಶಕ್ತನ ಶಕ್ತಿಯನ್ನು ಅವರ ಮೂಲಕ ಪ್ರಕಟಿಸಲಾಗುವುದು

ಎಂದಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್ ಈ ಭವಿಷ್ಯವಾಣಿ ಪ್ರಕಾರ ವರ್ತಿಸಿದವರಾಗಿದ್ದಾರೆ. ಪವಿತ್ರ ಖುರ್‌ಆನ್‌ನಲ್ಲಿ ಈ ಬಗ್ಗೆ ಅನೇಕ ಕಡೆ ಪ್ರಸ್ತಾಪಿಸಲಾಗಿದೆ. ಬದ್ರ್ ಯುದ್ಧದ ಸಮಯದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ ಕಲ್ಲು ಚೂರುಗಳನ್ನು ಬೊಗಸೆ ತುಂಬಿ ಶತ್ರುಗಳ ಕಡೆಗೆ ಎಸೆದರು. ಆಗ ಧೂಳಿನಿಂದ ಕೂಡಿದ ಬಿರುಗಾಳಿ ಬೀಸಿತು ಮತ್ತು ಶತ್ರುಗಳು ಸೋಲಿಸಲ್ಪಟ್ಟರು. ಅಲ್ಲಾಹನು ಇದರ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿರುವನು:

**"ನೀನು ಎಸೆದಾಗ ನೀನಲ್ಲ ಎಸೆದದ್ದು, ಬದಲು ಅಲ್ಲಾಹನು ಎಸೆದನು."** **(8:18)**

**"ನಿನ್ನೊಡನೆ ನಿಷ್ಠೆಯ ಪ್ರತಿಜ್ಞೆ (ಬೈಅತ್) ಮಾಡುವವರು ನಿಜವಾಗಿಯೂ ಅಲ್ಲಾಹನೊಡನೆಯೇ ನಿಷ್ಠೆಯ ಪ್ರತಿಜ್ಞೆ ಮಾಡುತ್ತಾರೆ." (48:11)**

ಈ ರೀತಿ ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರ ಮೂಲಕ ತನ್ನ ಶಕ್ತಿಯನ್ನು ಪ್ರಕಟಿಸಿದನು. ಅವರು ತನ್ನ ಜೀವಿತ ಕಾಲದಲ್ಲಿ ತನ್ನ ಎಲ್ಲಾ ಶತ್ರುಗಳನ್ನು ಸೋಲಿಸಿದರು ಮತ್ತು ವಿರೋಧವನ್ನು ಕೊನೆಗೊಳಿಸಿದರು.

ಯೆಶಾಯ ಪ್ರವಾದಿಯ ಭವಿಷ್ಯವಾಣಿಯಲ್ಲಿ ಆಗಮಿಸಲಿರುವ ಪ್ರವಾದಿಯ ಕುರಿತು ನಿತ್ಯನಾದ ತಂದೆ ಎಂದು ವರ್ಣಿಸಲಾಗಿದೆ. ಯೇಸು ಕ್ರಿಸ್ತರನ್ನು ಇಸ್ರಾಯೇಲ್ ಜನಾಂಗದ ಕಳೆದುಹೋದ ಕುರಿಗಳಿಗಾಗಿ ಕಳುಹಿಸಲಾಗಿತ್ತು. ಆದುದರಿಂದ ಅವರ ದೌತ್ಯವು ಶಾಶ್ವತ ಸ್ವಭಾವ ಹೊಂದಿರಲಾರದು. ಆದರೆ ಮುಹಮ್ಮದ್ ಪೈಗಂಬರರ ಕುರಿತು ಪವಿತ್ರ ಖುರ್‌ಆನ್‌ನಲ್ಲಿ **"ಮಾನವರಿಗೆಲ್ಲಾ ಶುಭವಾರ್ತೆ ನೀಡುವವನೂ ಮುನ್ನೆಚ್ಚರಿಕೆ ಕೊಡುವವನೂ"** ಎಂದು ಹೇಳಲಾಗಿದೆ (34:29 ನೋಡಿರಿ). ಅವರು ತನ್ನ ಉಪದೇಶಗಳು ಶಾಶ್ವತವಾಗಿ ಅನುಷ್ಠಿಸಲ್ಪಡುವುವೆಂದೂ ಲೋಕದ ಕೊನೆಯ ಕಾಲಘಟ್ಟದಲ್ಲಿ ವಾಗ್ದತ್ತ ಮಸೀಹರು ಅವರ ಅನುಯಾಯಿಗಳಲ್ಲಿ ಆಗಮಿಸಿ ಇಸ್ಲಾಮಿನ ತತ್ವೋಪದೇಶಗಳನ್ನು ಮನಶ್ಚೇತನಗೊಳಿಸುವರೆಂದೂ ಇಸ್ಲಾಮಿನ ಪ್ರವಾದಿಯ ಆಧ್ಯಾತ್ಮಿಕ ಅಗ್ರಸ್ಥಾನವು ಶಾಶ್ವತವಾಗಿದೆ ಎಂದೂ ಅವರ ಅನುಯಾಯಿಗಳಾಗದವರಲ್ಲಿ ಯಾವುದೇ ದೇವನೇಮಿತ ಉಪದೇಶಕರು ಬರಲಾರರೆಂದು ಅವರು ಸಾಬೀತುಗೊಳಿಸುವರೆಂದೂ ಹಝ್ರತ್ ಮುಹಮ್ಮದ್ ಪೈಗಂಬರರಿಗೆ ವಾಗ್ದಾನ ನೀಡಲಾಗಿದೆ.

ಯೆಶಾಯ ಪ್ರವಾದಿಯ ಭವಿಷ್ಯವಾಣಿಯಲ್ಲಿ ಆಗಮಿಸುವ ಪ್ರವಾದಿಯ ಕುರಿತು ಸಮಾಧಾನದ ಪ್ರಭು ಎಂದು ಹೇಳಲಾಗಿದೆ. ಯೇಸುಕ್ರಿಸ್ತರು ತನ್ನ ಜೀವಿತದಲ್ಲಿ ಎಂದೂ ಅಧಿಕಾರ ಗಳಿಸಲಿಲ್ಲ. ತನ್ನ ಶತ್ರುಗಳಿಗೆ ಕ್ಷಮೆಯನ್ನು ನೀಡುವ ಅಧಿಕಾರ ಅವರಿಗಿರಲಿಲ್ಲ. ಆದುದರಿಂದ ತನ್ನ ಉಪದೇಶದ ಪ್ರಕಾರ ನಡೆಯಲು ಅವರಿಗೆ ಸಂದರ್ಭ ಸಿಗಲಿಲ್ಲ. ಆದರೆ ಹಝ್ರತ್ ಮುಹಮ್ಮದ್ ಪೈಗಂಬರರ ಸ್ಥಿತಿ ಬೇರೆಯೇ ಆಗಿದೆ. ಇಸ್ಲಾಮ್ ಎಂಬ ಪದದ ಅರ್ಥ ಶಾಂತಿ ಮತ್ತು ಸಮಾಧಾನ ಎಂದಾಗಿದೆ. ಅವರು ಶಾಂತಿ ಸಮಾಧಾನ ಸ್ಥಾಪಿಸಿದ ಕುರಿತು ಮತ್ತು ಜನರಿಗೆ ಕ್ಷಮೆಯನ್ನು ನೀಡಿದ ಕುರಿತು ಸಾಕಷ್ಟು ಸಾಕ್ಷ್ಯಗಳಿವೆ.

ಹದಿಮೂರು ವರ್ಷಗಳಷ್ಟು ದೀರ್ಘಕಾಲ ಪೈಗಂಬರರು ಮತ್ತು ಅವರ ಅನುಯಾಯಿಗಳು ಮಕ್ಕದ ಜನರ ಹಿಂಸಾಚಾರವನ್ನು ಮೌನವಾಗಿ ಸಹಿಸಿದರು. ಆಹಾರದ ಕೊರತೆ, ಚಡಿಯೇಟು, ಅಪಹಾಸ್ಯ, ನಿಂದನೆ, ಹೀನೈಸುವಿಕೆ ಮತ್ತು ಎಲ್ಲಾ ರೀತಿಯ ಹಿಂಸಾಚಾರಗಳನ್ನು ಅವರು ಸಹಿಸಿದರು. ಪೈಗಂಬರರು ಮದೀನದಲ್ಲಿ ಆಶ್ರಯಪಡೆದರೂ ಅಲ್ಲಿ ಸಹ ಸಮಾಧಾನದಿಂದಿರಲು ಶತ್ರುಗಳು ಬಿಡಲಿಲ್ಲ.

ಮದೀನಕ್ಕೆ ವಲಸೆಹೋಗಿ ಏಳು ವರ್ಷಗಳು ಕಳೆದ ನಂತರ ಪೈಗಂಬರರು ಹಠಾತ್ತಾಗಿ ಪಾರಾನಿನ ಪರ್ವತ ಶಿಖರಗಳ ಮೇಲೆ ತನ್ನ ಹತ್ತುಸಾವಿರ ಅನುಯಾಯಿಗಳೊಂದಿಗೆ ಕಾಣಿಸಿಕೊಂಡರು. ಯಾವುದೇ ಯುದ್ಧಮಾಡದೆ, ಒಂದು ಹನಿ ರಕ್ತಪಾತ ಮಾಡದೆ ಅವರು ಮಕ್ಕದೊಳಗೆ ಪ್ರವೇಶಿಸಿದರು. ಮಕ್ಕದವರ ಹಿಂಸಾಚಾರಗಳಿಗೆ ಪ್ರತಿಯಾಗಿ ನೀಡುವ ಯಾವ ಶಿಕ್ಷೆಯೂ ಲಘುವೆಂದು ಗಣಿಸಲ್ಪಡಬಹುದಾಗಿದ್ದರೂ ಹಝ್ರತ್ ಮುಹಮ್ಮದ್ ಪೈಗಂಬರರು ಹೇಳಿದರು:

**"ಇಂದು ನಿಮ್ಮ ಮೇಲೆ ಯಾವುದೇ ದೋಷಾರೋಪಣೆ ಇಲ್ಲ. ಅಲ್ಲಾಹನು ನಿಮ್ಮನ್ನು ಕ್ಷಮಿಸಲಿ.**

ಕ್ರೈಸ್ತ ಧರ್ಮಾವಲಂಬಿಗಳು ಅಧಿಕಾರ ಗಳಿಸಿದಾಗ ತಮ್ಮ ಶತ್ರುಗಳಿಗೆ ಹೀಗೆ ಕ್ಷಮಾದಾನ ಎಂದಾದರೂ ನೀಡಿದ್ದರೆ? ಹೀಗಿರುವಾಗ ಯಾರನ್ನು ಸಮಾಧಾನದ ಪ್ರಭು (ಶಾಂತಿಯ ರಾಜಕುಮಾರ) ಎಂದು ಕರೆಯಬೇಕು? ಹಝ್ರತ್ ಮುಹಮ್ಮದ್ ಪೈಗಂಬರರನ್ನೋ? ಯೇಸುಕ್ರಿಸ್ತರನ್ನೋ? ಯೇಸುಕ್ರಿಸ್ತರಿಗೆ ತನ್ನ ಶತ್ರುಗಳಿಗೆ ಕ್ಷಮಾದಾನ ನೀಡುವ ಸಂದರ್ಭ ಸಿಕ್ಕಿರಲಿಲ್ಲ. ಅವರ ಅನುಯಾಯಿಗಳಿಗೆ ಹಾಗೆ ಮಾಡಲು ಸಾಧ್ಯವಿತ್ತು. ಆದರೆ ಅವರು ಕ್ಷಮಾದಾನ ನೀಡಲಿಲ್ಲ. ಹಝ್ರತ್ ಪೈಗಂಬರರಿಗೆ ಶತ್ರುಗಳನ್ನು ಶಿಕ್ಷಿಸುವ ಅಧಿಕಾರವಿತ್ತು. ಆದರೆ ಅವರು ಶಿಕ್ಷೆ ನೀಡಲಿಲ್ಲ. ಆದುದರಿಂದ ಯೆಶಾಯ ಪ್ರವಾದಿ ಪ್ರವಾದಿಸಿದ ಸಮಾಧಾನದ ಪ್ರಭು ಪೈಗಂಬರರೇ ಆಗಿದ್ದಾರೆ. ಅವರಿಗೆ ಅಧಿಕಾರ ಲಭಿಸಿತು ಮತ್ತು ಯೆಶಾಯ ಪ್ರವಾದಿಯ ಭವಿಷ್ಯವಾಣಿಯ **"ಆ ರಾಜ್ಯವು ಇಂದಿನಿಂದ ಯಾವಾಗಲೂ ನೀತಿ ನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವುದು"** ಎಂಬ ಭವಿಷ್ಯವು ಈಡೇರಿತು.

## ಉಪಸಂಹಾರ

ಬೈಬಲಿನಲ್ಲಿ ಆಗಮಿಸಲಿರುವ ಮಹಾನ್ ಪ್ರವಾದಿಯ ಕುರಿತು ಇರುವ ಅನೇಕ ಭವಿಷ್ಯವಾಣಿಗಳಲ್ಲಿ ಕೆಲವನ್ನು ಮಾತ್ರ ಮೇಲೆ ವಿವರಿಸಲಾಗಿದೆ. ಅವರು ಲೋಕವನ್ನು ಸತ್ಯದ ಕಡೆಗೆ ಒಯ್ಯುವರು ಎಂದು ಹೇಳಲಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರ ಕುರಿತು ಬೈಬಲಿನ ಪರಮಗೀತದಲ್ಲಿ **ಮುಹಮ್ಮದೀಮ್** ಎಂದು ಹಿಬ್ರೂ ಭಾಷೆಯಲ್ಲಿ ಹೇಳಲಾಗಿದೆ. ಅದರ ಅರ್ಥ: **ಸರ್ವಾಂಗದಲ್ಲಿಯೂ ಮನೋಹರನು ಎಂದಾಗಿದೆ. (ಪರಮಗೀತ 5:16)**

ಅವರು ದಾನಿಯೇಲ್ ಪ್ರವಾದಿಯ ಸ್ವಪ್ನದ ಈಡೇರುವಿಕೆಯ 'ಬಂಡೆ' ಆಗಿದ್ದಾರೆ (2:34,35). ಅವರ ಆಗಮನವು ದ್ರಾಕ್ಷೆತೋಟದ ಯಜಮಾನನ ಬರುವಿಕೆಯ ಹಾಗೆ ಆಗಿದೆ. ಇದು ಯೇಸುಕ್ರಿಸ್ತರ ಭವಿಷ್ಯವಾಣಿಯ ಪ್ರಕಾರವಾಗಿದೆ.

ಬೈಬಲಿನ ಹಳೆಯ ಒಡಂಬಡಿಕೆಯಲ್ಲಿ ಯೇಸುಕ್ರಿಸ್ತರ ಬಗ್ಗೆ ಸಹ ಭವಿಷ್ಯವಾಣಿಗಳಿವೆಯಾದರೂ ಅನೇಕ ಭವಿಷ್ಯವಾಣಿಗಳನ್ನು ಅವರಿಗೆ ಅನ್ವಯಿಸಿ ಹೇಳಲು ಸಾಧ್ಯವಿಲ್ಲ ಎಂಬುದು ಸಹ ಸತ್ಯವಾಗಿದೆ.

ಆ ಭವಿಷ್ಯವಾಣಿಗಳು ಒಂದು ಹೊಸ ನಿಯಮ ಸಂಹಿತೆ ತರುವಂತಹ ಮತ್ತು ಕೇವಲ ಇಸ್ರಾಯೇಲ್ ಸಂತತಿಗಳ ಕಳೆದುಹೋದ ಕುರಿಗಳಿಗೆ ಮಾತ್ರ ಬರದೆ ಲೋಕದಾದ್ಯಂತ ಎಲ್ಲರಿಗಾಗಿ ಬರುವ ಪ್ರವಾದಿಗೆ ಅನ್ವಯಿಸುತ್ತದೆ. ಅವರ ಕುರಿತು ಯೇಸುಕ್ರಿಸ್ತರು ಸಹಾಯಕ ಎಂದೂ ಸತ್ಯದ ಆತ್ಮ ಎಂದೂ ಹೇಳಿರುವರು. ಹಝ್ರತ್ ಮುಹಮ್ಮದ್ ಪೈಗಂಬರರ ಕುರಿತು ಬೈಬಲಿನ ಭವಿಷ್ಯವಾಣಿಗಳು ಸ್ಪಷ್ಟವೂ ನಿಖರವೂ ಆಗಿವೆ.

ಈ ಭವಿಷ್ಯವಾಣಿಗಳ ಈಡೇರುವಿಕೆಯಿಂದ ಸ್ವರ್ಗರಾಜ್ಯಕ್ಕೆ ಬಾಗಿಲು ತೆರೆಯಲ್ಪಟ್ಟಿದೆ. ಆಕಾಶ ಮತ್ತು ಭೂಮಿಯ ಒಡೆಯನಾದ ದೇವನ ಕರೆಯನ್ನು ಅಂಗೀಕರಿಸಿ ಸ್ವರ್ಗ ರಾಜ್ಯವನ್ನು ಪ್ರವೇಶಿಸುವವರು ಭಾಗ್ಯಶಾಲಿಗಳು.

*

*(ಇಂಗ್ಲಿಷ್‌ನಿಂದ ಭಾಷಾಂತರ : ಎಂ. ಉಬೈದುಲ್ಲಾ)*

ಪಾಕ್ ಮರೆಯಲಾಗದ ವಿಜ್ಞಾನಿ

# ಅಬ್ದುಸ್ ಸಲಾಮ್



ಮೂಲಭೂತವಾದದ ತಾರಕ ದಂತಿರುವ 'ತಾಲಿಬಾನ್'ಗಳು ಪಾಕಿಸ್ತಾನದ ನೆಮ್ಮದಿ ಕೆಡಿಸುತ್ತಿದ್ದು, ನಮಗೆ ಸಾಕಾಗಿ ಹೋಗಿದೆ' ಎಂದು ಸ್ವತಃ ಪಾಕ್‌ನ ಅಧ್ಯಕ್ಷ ಜರ್ದಾರಿ ಮೊನ್ನೆ ತಮ್ಮ ಅಳಲು ತೋಡಿ ಕೊಂಡಿದ್ದು ವ್ಯಾಪಕ ಸುದ್ದಿಯಾಗಿತ್ತು. ಗೃಹಬಂಧನ ದಲ್ಲಿದ್ದ ಎ. ಕ್ಯು. ಖಾನ್ ಎಂಬ ಪರಮಾಣು ವಿಜ್ಞಾನಿಯನ್ನು ಮೊನ್ನೆ ಪಾಕ್ ನ್ಯಾಯಾಲಯ ಬಂಧಮುಕ್ತ ಗೊಳಿಸುವಂತೆ ಆದೇಶಿಸಿತು. ವಿದೇಶ ಗಳಿಗೆ ಪರಮಾಣು ಶಸ್ತ್ರಾಸ್ತ್ರ ತಯಾರಿಯ 'ಗುಟ್ಟು'ಗಳನ್ನು ಅಕ್ರಮವಾಗಿ ರವಾನಿಸಿದರೆಂಬ ಆರೋಪ ಖಾನ್ ಮೇಲಿದೆ. 'ಪರಮಾಣು ಕಳ್ಳ ಸಾಗಾಣಿಕೆದಾರ' ಎಂದೇ ಅವರು ಕುಖ್ಯಾತರು.

ಪಾಕ್‌ನ ಇಂತಹ ಸಂದಿಗ್ಧದಲ್ಲಿ ನೆನಪಾಗುವ ಹೆಸರು ಅಬ್ದುಸ್ ಸಲಾಮ್. ಕಳೆದ ಶತಮಾನದ ಉತ್ತರಾರ್ಧದಲ್ಲಿ ಮೂರನೇ ಜಗತ್ತಿನ ನೋವು ನಲಿವುಗಳ ಬಗ್ಗೆ ಮಾತನಾಡುತ್ತಲೇ ಪಾಕ್‌ನ ಸರ್ವತೋಮುಖ ಪ್ರಗತಿಯ ಕುರಿತು ಅಪಾರ ಕನಸು ಕಂಡಿದ್ದ ವಿಜ್ಞಾನಿ. ವಿಜ್ಞಾನವನ್ನು ಪ್ರಯೋಗಾಲಯದ ನಾಲ್ಕು ಗೋಡೆಗಳ ಒಳಗೆ ಸೀಮಿತಗೊಳಿಸದೆ ಸಮಾಜಮುಖಿ ಚಿಂತನೆಯ ದಿಕ್ಕಿನಲ್ಲಿ ಕೊಂಡೊಯ್ದ ಸಲಾಮ್, ಧಾರ್ಮಿಕ ಚಿಂತನೆಯನ್ನು ಭೌತಶಾಸ್ತ್ರದೊಂದಿಗೆ ಸಮೀಕರಿಸಿಕೊಂಡು ಮಾನವ ಕಲ್ಯಾಣದ ಬಗ್ಗೆ ಹೊಸ ಆಲೋಚನೆಗಳನ್ನು ನೀಡಿದ ಮಹತ್ವದ ವಿಜ್ಞಾನಿ. ಎರಡು ವಾರಗಳ ಹಿಂದೆ ಇಟಲಿಯ ಟೀಸ್ತೆಯಲ್ಲಿ ಸಲಾಮ್ ಅವರ 83ನೇ ಹುಟ್ಟುಹಬ್ಬವನ್ನು ಆಚರಿಸಿ ಅವರ ಕೊಡುಗೆಯನ್ನು ನೆನಪಿಸಿಕೊಂಡಿದ್ದು ಪಾಕ್‌ನಲ್ಲಂತೂ ಸುದ್ದಿಯಾಗಲಿಲ್ಲ. ಈ ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿ ಪಾಕ್‌ನಲ್ಲಿ ಯಾರ ನೆನಪಿನಲ್ಲಿಯೂ ಉಳಿದಿಲ್ಲ!

ಅಬ್ದುಸ್ ಸಲಾಮ್ ಅವರದು ಮರೆತುಹೋಗುವಂತಹ ವ್ಯಕ್ತಿತ್ವ ವಂತೂ ಅಲ್ಲ. ಪಾಕ್‌ನ ಕುಗ್ರಾಮ ಜಂಗ್ ಎಂಬಲ್ಲಿ 1926ರ ಜನವರಿ 29ರಂದು ಜನಿಸಿದ ಸಲಾಮ್ ಹುಟ್ಟೂರಿನಲ್ಲೇ ಮೆಟ್ರಿಕ್ಯುಲೇಷನ್ ಮುಗಿಸಿ, ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಮೊದಲ ರ್‍ಯಾಂಕ್‌ನೊಂದಿಗೆ ಪದವಿ ಪರೀಕ್ಷೆಯಲ್ಲಿ ತೇರ್ಗಡೆಗೊಂಡಿದ್ದರು. ಆ ವಿ.ವಿ.ಯ ಮಟ್ಟಿಗೆ ಅಂತಹ ಸಾಧನೆ ಮಾಡಿದ ಮೊದಲ ಮುಸ್ಲಿಂ ಎಂಬ ಹೆಗ್ಗಳಿಕೆಯೂ ಅವರದು. 1946ರಲ್ಲಿ ಎಂ.ಎ. ಮುಗಿಸಿದಾಗ ಸಲಾಮ್ ಅವರ ಹೆತ್ತವರು ತಮ್ಮ ಮಗ ಐಸಿಎಸ್ ಪರೀಕ್ಷೆಗೆ ಕುಳಿತುಕೊಳ್ಳಬೇಕೆಂದು ಬಯಸಿದ್ದರು. ಸಲಾಮ್ ಮಾತ್ರ ಕೇಂಬ್ರಿಡ್ಜ್‌ನಲ್ಲಿ ಗಣಿತಶಾಸ್ತ್ರ ಅಧ್ಯಯನ ನಡೆಸಲು ಅರ್ಜಿ ಹಾಕಿದ್ದರು!

ಆದರೆ ಶಿಕ್ಷಣ ಇಲಾಖೆಯಲ್ಲಿ ಉದ್ಯೋಗಿಯಾಗಿದ್ದ ಅವರ ತಂದೆಯ ಬಳಿ ಮಗನನ್ನು ವಿದೇಶಕ್ಕೆ ಕಳಿಸುವಷ್ಟು ಹಣವಿರಲಿಲ್ಲ. ಆಗ ಪಂಜಾಬ್ ಪ್ರಾಂತ್ಯದ ಸಚಿವರಾಗಿದ್ದ ಚೋಟೂರಾಮ್ ನೆರವಿಗೆ ನಿಂತರು. ಕೇಂಬ್ರಿಡ್ಜ್‌ನ ಟ್ರಿಪೋಸ್‌ನಲ್ಲಿ ಗಣಿತಶಾಸ್ತ್ರದ ಪ್ರತಿಷ್ಠಿತ 'ರಾಂಗ್ಲರ್'ಎನಿಸಿದ ಸಲಾಮ್, ನಂತರ ನೊಬೆಲ್ ಪ್ರಶಸ್ತಿ ವಿಜೇತ ಭೌತಶಾಸ್ತ್ರ ಅಧ್ಯಯನಕ್ಕಿಳಿದು ಅದರಲ್ಲಿಯೂ ಪದವಿ ಗಳಿಸಿದರು. 1952ರಲ್ಲಿ ಪಿಎಚ್‌ಡಿ ಪಡೆದರು. ಈ ನಡುವೆ ಟ್ರಿನಿಟಿ ಕಾಲೇಜಿನ ಫೆಲೋಷಿಪ್ ಅನ್ನು ತಿರಸ್ಕರಿಸಿ ಹುಟ್ಟೂರಿನ ಪ್ರೀತಿಯಿಂದ ಪಾಕ್‌ಗೆ ವಾಪಸಾಗಿ ಲಾಹೋರ್ ಸರ್ಕಾರಿ ಕಾಲೇಜಿನಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಆರಂಭಿಸಿದರು. ಜತೆಗೆ ಅಲ್ಲಿ ಫುಟ್‌ಬಾಲ್ ತಂಡದ ಕೋಚ್ ಆಗಿದ್ದುಕೊಂಡು ಚೌಬುರ್ಜಿ ಮೈದಾನದಲ್ಲಿ ಉತ್ಸಾಹಿ ತರುಣರಿಗೆ ತರಬೇತು ನೀಡತೊಡಗಿದರು!

ಪಾಕಿಸ್ತಾನವನ್ನು ಇವರು ಪ್ರೀತಿಸಿದರೂ ಪಾಕ್ ಮಾತ್ರ ಇವರನ್ನು ಅಪ್ಪಿಕೊಳ್ಳಲೇ ಇಲ್ಲ. ಸಂಶೋಧನೆಗೂ ಉತ್ತಮ ವಾತಾವರಣ ಇರಲಿಲ್ಲ. ಹೀಗಾಗಿ 1957ರಲ್ಲಿ ಲಂಡನ್‌ನ ಇಂಪಿರಿಯಲ್ ಕಾಲೇಜಿನಲ್ಲಿ ಸೈದ್ಧಾಂತಿಕ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿ ಅಲ್ಲಿಗೆ ತೆರಳಿದರು. ತಮ್ಮ 16ನೇ ವಯಸ್ಸಿನಲ್ಲೆ ಲಾಹೋರ್‌ಗೆ ಬರುವವರೆಗೂ ವಿದ್ಯುತ್ ದೀಪದ ಬೆಳಕನ್ನೂ ಕಾಣದಿದ್ದ 'ಹಳ್ಳಿ ಗಮಾರ'ನೊಬ್ಬ 30ನೇ ವಯಸ್ಸಿಗೆ ಲಂಡನ್‌ನ ಪ್ರತಿಷ್ಠಿತ ಸಂಸ್ಥೆಯಲ್ಲಿ ಪ್ರಾಧ್ಯಾಪಕ ಹುದ್ದೆಗೇರಿದ್ದು ಕಡಿಮೆ ಸಾಧನೆ ಅಲ್ಲ. ಆರಂಭದಲ್ಲಿ ಕ್ಯಾವಂಡೀಶ್ ಪ್ರಯೋಗಾಲಯದಲ್ಲಿ ಪ್ರಯೋಗನಿರತ ರಾದರೂ ಕೊನೆಗೆ ಅದನ್ನು ಬಿಟ್ಟು ಸೈದ್ಧಾಂತಿಕ ಭೌತಶಾಸ್ತ್ರದತ್ತ ಗಮನ ಕೇಂದ್ರೀಕರಿಸಿದ್ದು ಅವರ ಬದುಕಿನಲ್ಲಿ ಮಹತ್ವದ ಘಟ್ಟ.. ಈ ನಡುವೆ ಇಸ್ಲಾಮಾಬಾದ್‌ನಲ್ಲಿ ಅಂತರರಾಷ್ಟ್ರೀಯ ಭೌತಶಾಸ್ತ್ರ ಅಧ್ಯಯನ ಸಂಸ್ಥೆ ಕಟ್ಟಲು ಅಹರ್ನಿಶಿ ಪ್ರಯತ್ನಿಸಿದರಾದರೂ ಅವರಿಗೆ ಪಾಕ್ ಸರ್ಕಾರದಿಂದ ಪ್ರೋತ್ಸಾಹ ಸಿಗಲೇ ಇಲ್ಲ. ವಿಧಿ ಇಲ್ಲದೆ ಇವರು 1964ರಲ್ಲಿ ಇಟಲಿಯ ಟೀಸ್ತೆ ಎಂಬಲ್ಲಿ ನೆಲೆಸಿ ಅಲ್ಲಿ ಭೌತಶಾಸ್ತ್ರ ಅಧ್ಯಯನ ಸಂಸ್ಥೆ ಕಟ್ಟಿದ್ದು, 1993ರವರೆಗೆ ಮೂರು ದಶಕಗಳ ಕಾಲ ಅದರ ನಿರ್ದೇಶಕರಾಗಿದ್ದರು.

'ಎಲ್ಲಾ ಶಕ್ತಿಗಳೂ ಒಂದು ಮೂಲದಿಂದ ಒಡಮೂಡುತ್ತವೆ' ಎಂಬ ಸಿದ್ಧಾಂತವನ್ನು ಆಧ್ಯಾತ್ಮಿಕ ನೆಲೆಗಟ್ಟಿನೊಂದಿಗೆ ವಿಶ್ಲೇಷಿಸಿದ್ದ ಇವರು ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಜನಜನಿತರಾಗಿದ್ದರು. ಇವರು ವಿದ್ಯುತ್ ಕಾಂತತ್ವ ರಂಗದಲ್ಲಿ ನಡೆಸಿದ ಸಂಶೋಧನೆಗಾಗಿ 1979ರಲ್ಲಿ ಶೆಲ್ಡನ್ ಗ್ಲಾಶೊ ಮತ್ತು ಸ್ಟೀವನ್ ವೆನ್‌ಬರ್ಗ್ ಜತೆಗೆ ನೊಬೆಲ್ ಪ್ರಶಸ್ತಿಯನ್ನು ಹಂಚಿಕೊಂಡರು. ಆ ನಂತರ ತಮಗೆ ಸಿಕ್ಕಿದ ಭಾರಿ ಮೊತ್ತದ ಹಣವನ್ನೆಲ್ಲಾ ಪಾಕಿಸ್ತಾನದ ನೂರಾರು ಪ್ರತಿಭಾವಂತರಿಗೆ ವಿದ್ಯಾರ್ಥಿ ವೇತನದ ರೂಪದಲ್ಲಿ ಹಂಚಿದರು. ಪಾಕಿಸ್ತಾನದ ಐನೂರಕ್ಕೂ ಹೆಚ್ಚು ಕಿರಿಯ ವಿಜ್ಞಾನಿಗಳಿಗೆ ವಿದೇಶಗಳಲ್ಲಿ ಹೆಚ್ಚಿನ ಸಂಶೋಧನೆ ನಡೆಸಲು ಅವಕಾಶಗಳನ್ನು ಕಲ್ಪಿಸಿದರು. 60ರ ದಶಕದಲ್ಲಿ ಪಾಕ್ ಅಧ್ಯಕ್ಷ ಅಯೂಬ್‌ಖಾನ್‌ರ ವಿಜ್ಞಾನ ಸಲಹೆಗಾರರಾಗಿದ್ದ ಸಲಾಮ್ 'ಪಾಕಿಸ್ತಾನ ಪರಮಾಣು ಶಕ್ತಿ ಆಯೋಗ' ಹುಟ್ಟುಪಡೆಯಲು ಮುಖ್ಯ ಕಾರಣಕರ್ತ ಕೂಡ. ಇಸ್ಲಾಮಾಬಾದ್ ಮತ್ತು ಕರಾಚಿ ನಗರಗಳ ಬಳಿ ಪರಮಾಣು ಅಧ್ಯಯನ ಕೇಂದ್ರ ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಇವರು 'ನಾಗರಿಕ ಬಳಕೆಗೆ ಪರಮಾಣು ತಂತ್ರಜ್ಞಾನದ ಅಳವಡಿಕೆ' ಕುರಿತು ಆಡಳಿತಗಾರರಿಗೆ ಮನದಟ್ಟು ಮಾಡಿಕೊಟ್ಟಿದ್ದರು.

ಆದರೆ ಅಹ್‌ಮದೀಯ ಪಂಥಕ್ಕೆ ಸೇರಿದ್ದ ಸಲಾಮ್ ಅವರನ್ನು ಪಾಕ್ ಸರ್ಕಾರ ಅವಗಣಿಸುತ್ತಲೇ ಬಂದಿತು. ಇದರಿಂದ ಸಲಾಮ್ ಬಹಳ ನೊಂದುಕೊಂಡಿದ್ದರು. ಇವರು ತಮ್ಮ 70ನೇ ವಯಸ್ಸಿನಲ್ಲಿ 1996ರ ನವೆಂಬರ್ 21ರಂದು ಆಕ್ಸಫರ್ಡ್‌ನಲ್ಲಿ ನಿಧನರಾದರು. ಅವರ ಇಚ್ಛೆಯಂತೆ ಅವರ ಮೃತದೇಹವನ್ನು ಪಾಕ್‌ನ ರಬ್ವಾ ಎಂಬ ಊರಿನಲ್ಲಿ ಸಮಾಧಿ ಮಾಡಲಾಯಿತು.

ಪಾಕ್‌ನ ಬಗ್ಗೆ ಅಪಾರ ಪ್ರೀತಿ, ಕಳಕಳಿ ಇರಿಸಿಕೊಂಡಿದ್ದ ಸಲಾಮ್ ಅವರ ಹೆಸರನ್ನು ಆ ದೇಶದ ಯಾವುದೇ ಸಂಸ್ಥೆ, ರಸ್ತೆ, ಬಡಾವಣೆಗಳಿಗೆ ಇರಿಸಲಾಗಿಲ್ಲ. ಪಾಕಿಸ್ತಾನದ ಏಕೈಕ ನೊಬೆಲ್ ಪ್ರಶಸ್ತಿ ವಿಜೇತ ಸಲಾಮ್ ಹೆಸರು ಆ ದೇಶದ ಯಾವುದೇ ಪಠ್ಯಪುಸ್ತಕಗಳಲ್ಲೂ ಲಭ್ಯವಿಲ್ಲ. ಮೊನ್ನೆ ಯುರೋಪ್‌ನ ಹಲವೆಡೆ ಸಲಾಮ್ ಹುಟ್ಟುಹಬ್ಬ ಆಚರಿಸಲಾಯಿತಾದರೂ ಪಾಕ್‌ನಲ್ಲಿ ಸಲಾಮ್ ಸುದ್ದಿಯೇ ಇರಲಿಲ್ಲ. ಆದರೆ ಎಲ್ಲೆಲ್ಲೂ 'ಪರಮಾಣು ಕಳ್ಳಸಾಗಣಿಕೆದಾರ' ಎ. ಕ್ಯು. ಖಾನ್‌ದೇ ಸುದ್ದಿ!! ■ **ಬಿಂದುಸಾರ**

*(ಕೃಪೆ : ಪ್ರಜಾವಾಣಿ 22-2-2009)*

ಮಕ್ಕಳ ಪಂಕ್ತಿ

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ಕೆಲವು ಪ್ರಧಾನ ಸಂಗತಿಗಳು

ಪ್ರತಿಯೊಂದು ರಾಜ್ಯ ಮತ್ತು ಪ್ರತಿಯೊಂದು ಜನಾಂಗದಲ್ಲಿ ಪ್ರವಾದಿಗಳು ಆಗಮಿಸಿದ್ದಾರೆ. ಎಲ್ಲಾ ಪ್ರವಾದಿಗಳನ್ನು ನಂಬುವವನೇ ಸರಿಯಾದ ಮುಸ್ಲಿಮನಾಗಿದ್ದಾನೆ. ಹಝ್‌ರತ್ ಈಸಾ ಅಲೈಹಿಸ್ಸಲಾಮ್ (ಯೇಸುಕ್ರಿಸ್ತರು) ಒಬ್ಬ ಪ್ರವಾದಿ ಆಗಿದ್ದರು. ಅವರನ್ನು ಶಿಲುಬೆಗೆ ಏರಿಸಲಾಗಿದ್ದರೂ ಅವರು ಅದರಲ್ಲಿ ಮೃತರಾಗಲಿಲ್ಲ. ಅವರು ಆಕಾಶಕ್ಕೆ ಎತ್ತಲ್ಪಡಲೂ ಇಲ್ಲ. ಅವರು ಈಗ ಜೀವಿಸಿಲ್ಲ. ಅವರು ಪುನಃ ಈ ಲೋಕಕ್ಕೆ ಬರಲಾರರು. ಅವರು 120 ವರ್ಷ ಜೀವಿಸಿ ಮೃತರಾದರು. ಅವರ ಗೋರಿ ಕಾಶ್ಮೀರದಲ್ಲಿ ಶ್ರೀನಗರದ ಖಾನ್‌ಯಾರ್ ಎಂಬ ಬಡಾವಣೆಯಲ್ಲಿದೆ.

ಮೃತರಾದವರು ಲೋಕಕ್ಕೆ ಪುನಃ ಬರುವುದಿಲ್ಲ. ಎಲ್ಲಾ ಮನುಷ್ಯರಿಗೆ ಮರಣವು ವಿಧಿಸಲ್ಪಟ್ಟಿದೆ. ಅಲ್ಲಾಹನ ನಿಯಮವನ್ನು ಬದಲಾಯಿಸಲು ಯಾರಿಗೂ ಸಾಧ್ಯವಿಲ್ಲ.

ಕ್ರೈಸ್ತರ ವಿಶ್ವಾಸದಂತೆ ದೇವರು ಮೂವರು. ಆದರೆ ಮೂವರು ದೇವರುಗಳು ಒಬ್ಬ ದೇವನಾಗಲಾರ. ಹಾಗೆಯೇ ಒಬ್ಬ ದೇವ ಮೂವರಾಗಿ ಪರಿವರ್ತನೆಗೊಳ್ಳಲಾರ. ಮೂರು ಒಂದಾಗುವುದಾಗಲೀ ಒಂದು ಮೂರು ಆಗುವುದಾಗಲೀ ಸಾಧ್ಯವಿಲ್ಲ. ಮನುಷ್ಯನು ದೇವನಾಗಲಾರ. ದೇವನು ಮನುಷ್ಯನೂ ಆಗಲಾರ.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಶಿಷ್ಯ ಪ್ರವಾದಿ (ಉಮ್ಮತೀ ನಬಿ) ಆಗಿರುವರು.

ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ವಿಶ್ವದಾದ್ಯಂತ ಇರುವ ಜನರಿಗೆ ಮಾರ್ಗದರ್ಶಕರಾಗಿದ್ದಾರೆ. ಹಝ್‌ರತ್ ಮಸೀಹ್ ಮೌಊದರ ಜಮಾಅತಿನ ಮೂಲಕ ಈ ಮಾರ್ಗದರ್ಶನದ ಪ್ರಚಾರ ಲೋಕದ ಎಲ್ಲೆಡೆಗಳಲ್ಲೂ ನಡೆಯುತ್ತಿದೆ. ಹಝ್‌ರತ್ ಮಸೀಹ್ ಮೌಊದರನ್ನು ತಿರಸ್ಕರಿಸುವವ ಅಲ್ಲಾಹನನ್ನು ತಿರಸ್ಕರಿಸಿದವನ ಹಾಗೆ ಆಗುತ್ತಾನೆ ಮತ್ತು ಶಿಕ್ಷೆಗೆ ಗುರಿಯಾಗುವ ಅಪರಾಧಿಯಾಗುತ್ತಾನೆ. ದುಷ್ಟರ ಮೇಲೆ ಅಲ್ಲಾಹನ ಶಿಕ್ಷೆ ಬಂದೆರಗುತ್ತದೆ. ಶಿಕ್ಷೆ ಬಂದೆರಗುವ ಮೊದಲು ಪ್ರವಾದಿಯ ಆಗಮನ ಅತ್ಯಾವಶ್ಯಕವಾಗಿರುತ್ತದೆ.

ಇಮಾಮ್ ಮಹ್‌ದಿ ಬಂದು ಖಡ್ಗ ಹಿರಿದು ಇಸ್ಲಾಮ್ ಧರ್ಮವನ್ನು ಹರಡುವರು ಎಂದು ಹೇಳುವವರು ಅಜ್ಞಾನಿಗಳಾಗಿದ್ದಾರೆ. ಇಸ್ಲಾಮಿನಲ್ಲಿ ರಕ್ತಪಿಪಾಸು ಮಹ್‌ದಿಗೆ ಯಾವ ಸ್ಥಾನವೂ ಇಲ್ಲ.

ಬರಬೇಕಾಗಿದ್ದ ಮಹ್‌ದೀ ಇಮಾಮ್ ಬಂದಿರುವರು. ಅವರು ಲೋಕಕ್ಕೆ ಅಲ್ಲಾಹನ ಸಂದೇಶ ತಲುಪಿಸಿರುವರು. ಅಹ್ಮದಿಯಾ ಜಮಾಅತಿನ ದಿವ್ಯ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರು ಅಲ್ಲಾಹನು ಕಳುಹಿಸಿದ ಮಹ್‌ದಿಯಾಗಿರುವರು.

## ಪವಿತ್ರ ಖುರ್‌ಆನಿನ ಕೆಲವು ಉಪದೇಶಗಳು

1. ಅಲ್ಲಾಹನು ಒಬ್ಬನೇ. ಅವನಿಗೆ ಸರಿಸಾಟಿಗಳು ಯಾರೂ ಇಲ್ಲ. ಅವನಿಗೆ ಸರಿಸಾಟಿಗಳನ್ನು ಕಲ್ಪಿಸದಿರಿ.
2. ಅಲ್ಲಾಹನನ್ನು ಮಾತ್ರ ಆರಾಧಿಸಿರಿ. ಅಲ್ಲಾಹನ ಹೊರತು ಆರಾಧನೆಗೆ ಅರ್ಹನಾಗಿ ಯಾರೂ ಇಲ್ಲ.
3. ತಂದೆ ತಾಯಂದಿರಿಗೆ ಗೌರವ ನೀಡಿರಿ. ಅವರನ್ನು ಅನುಸರಿಸಿರಿ.
4. ಪ್ರಾರ್ಥನೆಯನ್ನು ನೆಲೆಗೊಳಿಸಿರಿ.
5. ರಮಝಾನ್ ತಿಂಗಳಲ್ಲಿ ಉಪವಾಸ ಮಾಡಿರಿ.
6. ಝಕಾತ್ ನೀಡಿರಿ.
7. ಸಾಧ್ಯವಿದ್ದರೆ ಹಜ್‌ಯಾತ್ರೆ ಮಾಡಿರಿ.
8. ಅಲ್ಲಾಹನ ಮತ್ತು ಅವನ ಪ್ರವಾದಿಗಳ ಆಜ್ಞೆಯನ್ನು ಪಾಲಿಸಿರಿ.
9. ಎಲ್ಲಾ ಸತ್ಯ ವಿಶ್ವಾಸಿಗಳೂ ಸಹೋದರರಾಗಿದ್ದಾರೆ. ಯಾರನ್ನೂ ತಾತ್ಸಾರ ಭಾವದಿಂದ ಕಾಣಬೇಡಿರಿ. ಪದದೂಷಣೆಯನ್ನು ಮಾಡಬೇಡಿರಿ.

10. ಪಾಪಗಳನ್ನು ಕ್ಷಮಿಸಲಿಕ್ಕೆ ಅಲ್ಲಾಹನನ್ನು ಪ್ರಾರ್ಥಿಸಿರಿ.

11. ಕಷ್ಟದ ಕಾಲದಲ್ಲಿ ಸಹನೆದೋರಿರಿ ಮತ್ತು ಇತರರಿಗೆ ಸಹನೆಯ ಉಪದೇಶ ನೀಡಿರಿ.

12. ಪರಸ್ಪರ ಸೌಹಾರ್ದದಿಂದ ಇರಿ.

13. ಮಹತ್ವಪೂರ್ಣವಾದ ಒಂದು ಕಾರ್ಯಮಾಡುವ ಮೊದಲು ಪರಸ್ಪರ ಸಮಾಲೋಚನೆ ಮಾಡಿರಿ.

14. ಅಲ್ಲಾಹನ ಮೇಲೆ ಮಾತ್ರ ಭರವಸೆ ಇಡಿರಿ. ಅವನಿಂದ ಮಾತ್ರ ಸಹಾಯ ಯಾಚಿಸಿರಿ.

15. ಅಲ್ಲಾಹನಿಗೆ ಕೃತಜ್ಞತೆಗಳನ್ನು ಅರ್ಪಿಸಿರಿ. ಅಲ್ಲಾಹನ ಹೊರತು ಬೇರೆ ಯಾರಿಗೂ ಸಾಷ್ಟಾಂಗ ಪ್ರಣಾಮ ಮಾಡಬೇಡಿರಿ.

16. ಭಿಕ್ಷೆ ಬೇಡುವವರನ್ನು ಧಿಕ್ಕರಿಸಬೇಡಿರಿ. ನಿಮಗೆ ದಾನ ನೀಡಲು ಸಾಧ್ಯವಿಲ್ಲದಿದ್ದರೆ ಯಾವುದಾದರೂ ಒಳ್ಳೆಯ ಮಾತನ್ನಾದರೂ ಆಡಿರಿ.

17. ಇಸ್ಲಾಮ್ ಧರ್ಮದ ಸಂದೇಶವನ್ನು ವಿಶ್ವದಾದ್ಯಂತ ತಲಪಿಸಿರಿ.

18. ವಾಗ್ದಾನ ಮಾಡಿದರೆ ಆವಶ್ಯಕವಾಗಿ ಅದನ್ನು ಈಡೇರಿಸಿರಿ. ಅಲ್ಲಾಹನು ವಾಗ್ದಾನಗಳ ಬಗ್ಗೆ ವಿಚಾರಿಸುವನು.

19. ನೀವು ನ್ಯಾಯಯುತವಾಗಿ ನಡೆದುಕೊಳ್ಳಿರಿ. ಯಾರ ಬಗ್ಗೆಯಾದರೂ ನಿಮಗೆ ವಿರೋಧ ಭಾವನೆ ಇದ್ದಲ್ಲಿ ಅದು ನಿಮ್ಮನ್ನು ಅನ್ಯಾಯಕ್ಕೆ ಪ್ರೇರೇಪಿಸದಿರಲಿ.

20. ಕೆಟ್ಟ ಊಹಾಪೋಹಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ನಿಮ್ಮ ಸಹೋದರರೊಂದಿಗೆ ಉತ್ತಮವಾಗಿ ವರ್ತಿಸಿರಿ.

## ಹದೀಸಿನ ಕೆಲವು ಉಪದೇಶಗಳು

1. ಸತ್ಯವಿಶ್ವಾಸಿಯಾದವನು ಪರರಿಗೆ ತೋರಿಸಲಿಕ್ಕಾಗಿ ಏನನ್ನೂ ಮಾಡುವುದಿಲ್ಲ.
2. ಮುಸ್ಲಿಮನಾದವನು ತನ್ನ ಮುಸ್ಲಿಮ್ ಸಹೋದರನಿಗೆ ನಾಲಗೆಯಿಂದಾಗಲೀ ಕೈಯಿಂದಾಗಲೀ ಕಷ್ಟಕೊಡುವುದಿಲ್ಲ.
3. ಯಾರನ್ನೂ ಬೈಯಬೇಡಿರಿ.
4. ತಂದೆ ತಾಯಿಗಳನ್ನು ಅನುಸರಿಸಿರಿ.
5. ಪ್ರತಿಯೊಬ್ಬ ಮುಸ್ಲಿಮ್ ಪುರುಷ ಮತ್ತು ಮಹಿಳೆ; ಬಾಲಕ ಮತ್ತು ಬಾಲಿಕೆಯರಿಗೆ ವಿದ್ಯಾರ್ಜನೆಯನ್ನು ಕಡ್ಡಾಯಗೊಳಿಸಲಾಗಿದೆ.
6. ಅಲ್ಲಾಹನ ಅನುಗ್ರಹಗಳಿಗೆ ಕೃತಜ್ಞತೆ ಅರ್ಪಿಸಿರಿ.
7. ಹಿರಿಯರನ್ನು ಗೌರವಿಸಿರಿ; ಕಿರಿಯರನ್ನು ಪ್ರೀತಿಸಿರಿ.
8. ಪವಿತ್ರ ಖುರ್‌ಆನನ್ನು ಹೆಚ್ಚು ಹೆಚ್ಚಾಗಿ ಓದಿರಿ. ಇದು ನಿಮ್ಮ ಆತ್ಮೋನ್ನತಿಗೆ ಸಹಾಯಕವಾಗಿದೆ.
9. ಯಾವಾಗಲೂ ಶುದ್ಧರಾಗಿಯೂ ಸ್ವಚ್ಛವಾಗಿಯೂ ಇರಿ. ಅಲ್ಲಾಹನು ಪರಿಶುದ್ಧರಾಗಿರುವವರನ್ನು ಪ್ರೀತಿಸುತ್ತಾನೆ.
10. ವಾಗ್ದಾನಗಳನ್ನು ಉಲ್ಲಂಘಿಸಬೇಡಿರಿ.
11. ಸುಳ್ಳು ಹೇಳಬೇಡಿರಿ.
12. ಕಳ್ಳತನ ಮಾಡಬೇಡಿರಿ.
13. ಸತ್ಯವಾದ ಸಾಕ್ಷ್ಯನೀಡಿರಿ.
14. ನೆರೆಹೊರೆಯವರೊಂದಿಗೆ ಉತ್ತಮವಾಗಿ ನಡೆದುಕೊಳ್ಳಿರಿ.
15. ನಿಮಗೆ ಸಲಾಮ್ ಹೇಳಿದರೆ ನೀವು ಪ್ರತಿಯಾಗಿ ಸಲಾಮ್ ಅವಶ್ಯ ಹೇಳಿರಿ. ನೀವು ಸಲಾಮ್ ಹೇಳುವುದರಲ್ಲಿ ಮುಂದಾಗಿರಿ.
16. ಲಜ್ಜೆಯುಳ್ಳವರು ಅಲ್ಲಾಹನಿಗೆ ಪ್ರಿಯರಾದವರಾಗಿದ್ದಾರೆ.
17. ಪರದೂಷಣೆ ಮಾಡಬೇಡಿರಿ. ದುರಂಹಕಾರ ತೋರಬೇಡಿರಿ.
18. ವಿದ್ವಾಂಸರ ಕೂಟದಲ್ಲಿ ಕುಳಿತುಕೊಳ್ಳಿರಿ. ಉಪದೇಶದ ಮಾತುಗಳನ್ನು ಆಲಿಸಿರಿ ಮತ್ತು ಅವುಗಳನ್ನು ಅನುಸರಿಸಿ ವರ್ತಿಸಿರಿ.
19. ಸತ್ಯವಿಶ್ವಾಸಿಯಾದವನು ಜಿಪುಣನಾಗಲಾರ. ಜಿಪುಣತನದಿಂದ ವರ್ತಿಸಬೇಡಿರಿ. ಆದರೆ ಮಿತಿಮೀರಿ ಖರ್ಚು ಮಾಡಬೇಡಿರಿ.
20. ಉತ್ತಮ ಸ್ವಭಾವ ಗುಣಗಳನ್ನು ಅವಲಂಬಿಸಿರಿ. ಅಲ್ಲಾಹನು ಒಳ್ಳೆಯ ಸ್ವಭಾವ ಹೊಂದಿರುವವರನ್ನು ಪ್ರೀತಿಸುತ್ತಾನೆ.

# ಫೆಲಸ್ತೀನರಿಗೋಸ್ಕರ ಪ್ರಾರ್ಥಿಸಿರಿ

## ಅಹ್ಮದಿಯಾ ಪಂಚಮ ಖಲೀಫರ ವಿನಂತಿ

ಒಂದು ಪ್ರಾರ್ಥನೆಗೋಸ್ಕರ ವಿನಂತಿಸಲು ನಾನು ಬಯಸುತ್ತೇನೆ. ಕಳೆದ ಎರಡು ಖುತುಬಗಳಲ್ಲಿ ನಾನು ಈ ವಿಚಾರದ ಕಡೆಗೆ ಜಮಾಅತಿನ ಗಮನವನ್ನು ಸೆಳೆಯುತ್ತಿದ್ದೇನೆ. ಫೆಲಸ್ತೀನ್ ಜನರಿಗೋಸ್ಕರ ತುಂಬಾ ಪ್ರಾರ್ಥಿಸಿರಿ. ಅವರ ಅವಸ್ಥೆ ಅತ್ಯಧಿಕ ದಯನೀಯವಾಗುತ್ತಿದೆ. ಅವರು ಆಕ್ರಮಣದ ಅತಿ ದಾರುಣವಾದ ಚಕ್ರಕ್ಕೆ ಸಿಲುಕಿ ತೊಳಲಾಡುತ್ತಿದ್ದಾರೆ. ಇಸ್ರಾಯೇಲ್‌ನ ಆಕ್ರಮಣ ವರ್ಧಿಸುತ್ತಿದೆ. ಇಷ್ಟರ ತನಕ ಇಸ್ರಾಯೇಲ್‌ನೊಡನೆ ಸಹತಾಪ ತೋರಿಸುತ್ತಿದ್ದ ಹಲವರು ಈಗ ಅವರ ವಿರುದ್ಧ ಸ್ವರವೆತ್ತಲು ಆರಂಭಿಸಿದ್ದಾರೆ. ಈ ಪ್ರತಿಭಟನೆ ಬಾಹ್ಯ ಪ್ರದರ್ಶನವೋ ಅಥವಾ ಪ್ರಾಮಾಣಿಕವಾದುದೋ ಎಂದು ತಿಳಿಯದು. ಹೇಗಿದ್ದರೂ ಪ್ರತಿಭಟನೆ ತೋರಿಬರುತ್ತದೆ. ಮುಂಚೆ ಮೌನವಹಿಸಿದವರು ಇವರೇ ಆಗಿದ್ದರು. ಇವರು ಆರಂಭದಲ್ಲೇ ನ್ಯಾಯವಾದ ರೀತಿಯಲ್ಲಿ ವರ್ತಿಸಿದ್ದರೆ ಎಂದಿಗೂ ಫೆಲಸ್ತೀನ ಜನತೆ ಈ ಅವಸ್ಥೆಗೆ ತಲಪುತ್ತಿರಲಿಲ್ಲ. ಈ ರಾಷ್ಟ್ರಗಳ ಇಷ್ಟರವರೆಗಿನ ನಿಶ್ಶಬ್ದತೆಯೇ ಈ ಆಕ್ರಮಣಕ್ಕೆ ಇವರೆಲ್ಲರ ಬೆಂಬಲವಿರುತ್ತೆಂಬುದಕ್ಕೆ ಪುರಾವೆಯಾಗಿದೆ. ಅಲ್ಲಿ ಅಮಾಯಕರಾದ ಮಕ್ಕಳೂ ನಿರಪರಾಧಿಗಳಾದ ಸ್ತ್ರೀಯರೂ ವೃದ್ಧರೂ ನಿಷ್ಕರುಣೆಯಿಂದ ಕೊಲ್ಲಲ್ಪಡುತ್ತಿದ್ದಾರೆ. ಅವರಿಗೆ ಕಾರುಣ್ಯ ಮತ್ತು ಅನುಗ್ರಹ ಲಭಿಸಲಿಕ್ಕೋಸ್ಕರ ಪ್ರಾರ್ಥಿಸಿರಿ. ಈ ಮರ್ದಿತರಿಗೆ ನಮಗೀಗ ಮಾಡಲು ಸಾಧ್ಯವಿರುವುದು ಇದು ಮಾತ್ರವಾಗಿದೆ. ವಿಶ್ವಸಂಸ್ಥೆಯ ಕೆಲವು ಘಟಕಗಳು ಸಹ ಅಲ್ಲಿರುವ ರೋಗಪೀಡಿತರಿಗೂ ಹಸಿವೆಯಿಂದ ಕಂಗಾಲಾದವರಿಗೂ ಔಷಧಿ ಮತ್ತು ಆಹಾರವನ್ನು ಒದಗಿಸುತ್ತಿವೆ. ಈ ವ್ಯವಸ್ಥೆ ಉನ್ನತ ಮಟ್ಟದ್ದಲ್ಲವಾಗಿದ್ದರೂ ಕೈಲಾದಷ್ಟು ಅವರು ಮಾಡುತ್ತಿದ್ದಾರೆ. ಹಲವರಿಗೆ ವಸ್ತುಗಳು ತಲಪುವುದಿಲ್ಲ. ಹಾಗಿದ್ದರೂ ಈ ಒಂದು ಮಾರ್ಗದಿಂದ ಮಾತ್ರವೇ ಬಾಹ್ಯ ರೀತಿಯಲ್ಲಿ ಇವರಿಗೆ ಸಹಾಯಮಾಡಲು ನಮಗೆ ಸಾಧ್ಯ. ಬೇರೆ ಕೆಲವು ಸಂಘಟನೆಗಳು ಸಹ ಅಲ್ಲಿ ಕಾರ್ಯಶೀಲವಾಗಿವೆ. ಆದುದರಿಂದ ಆ ಸಂಘಟನೆಗಳು ಸಹಾಯಾಭ್ಯರ್ಥನೆ ಮಾಡುವುದಾದರೆ ನಾವು ಅವರಿಗೆ ನೆರವು ನೀಡಬೇಕಾಗಿದೆ. ನಮ್ಮ "ಹ್ಯೂಮನಿಟಿ ಫಸ್ಟ್" ಸಂಸ್ಥೆ ಸಹ ಕೈಲಾದಷ್ಟು ವಸ್ತುಗಳನ್ನು ಸಂಗ್ರಹಿಸಿ ಇವರಿಗೆ ನೀಡುವುದು. ಜಮಾಅತ್ ಮಟ್ಟದಲ್ಲೂ ಸಹಾಯನೀಡಲಾಗುವುದು. ಆದ್ದರಿಂದ ಅಹ್ಮದಿಯರು ತಮ್ಮ ಶಕ್ತ್ಯಾನುಸಾರ ಈ ಕಾರ್ಯದಲ್ಲಿ ಸಹಾಯ ಮಾಡಬೇಕಾಗಿದೆ. ಅತ್ಯಧಿಕವಾಗಿ ನಾವು ಅವರಿಗೋಸ್ಕರ ಪ್ರಾರ್ಥಿಸಬೇಕಾಗಿದೆ. ಅಲ್ಲಾಹನು ನಿರಪರಾಧಿಗಳ ಮೇಲೆ ಕರುಣೆದೋರಲಿ. ಅಕ್ರಮಗಾರರನ್ನು ಅವನು ಹಿಡಿಯಲಿ.

**(ಅಹ್ಮದಿಯಾ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು 16-1-2009ರಂದು ಲಂಡನಿನ "ಬೈತುಲ್ ಫುತೂಹ್" ಮಸೀದಿಯಲ್ಲಿ ಮಾಡಿದ ಖುತುಬದ ಆಯ್ದ ಭಾಗ)**

ಪ್ರತಿಕ್ರಿಯೆ

# ಉಗ್ರವಾದಿಗಳಿಂದ ಭಯೋತ್ಪಾದನೆ ನಿರ್ಮೂಲನವೇ?

ಜಮಾಅತೆ ಇಸ್ಲಾಮಿ ಸಂಘಟನೆಯ ಅಂಗಸಂಸ್ಥೆಯಾದ ಎಸ್‌ಐಓ ಭಯೋತ್ಪಾದನೆಗೆ ವಿರುದ್ಧವಾಗಿ ಅಭಿಯಾನವನ್ನು ಆರಂಭಿಸಿದೆ.

ಜಮಾಅತೆ ಇಸ್ಲಾಮಿ ಶಾಂತಿಯ ಮುಖವಾಡವನ್ನು ಧರಿಸಿದ ಒಂದು ಉಗ್ರವಾದಿ ಸಂಘಟನೆಯಾಗಿದೆ. ಅದು ಸಿಮಿ, ಹಿಜ್‌ಬುಲ್ ಮುಜಾಹಿದೀನ್ ಮೊದಲಾದ ಉಗ್ರವಾದಿ ಸಂಘಟನೆಗಳನ್ನು ಸದಾ ಬೆಂಬಲಿಸುತ್ತದೆ.

ಜಮಾಅತೆ ಇಸ್ಲಾಮಿಯ ಮೂಲ ಪುರುಷ ಅಬುಲ್ ಅಲಾ ಮೌದೂದಿ ಬರೆದ 'ಹಖೀಖತೆ ಜಿಹಾದ್', 'ಅಲ್ ಜಿಹಾದ್ ಫಿಲ್ ಇಸ್ಲಾಂ' ಮುಂತಾದ ಕೃತಿಗಳನ್ನು ಓದಿದರೆ ಅವರ ಉಗ್ರ ವಿಚಾರ ಧಾರೆಯ ದರ್ಶನವಾಗಬಹುದು.

ಇಂಥ ಒಂದು ಉಗ್ರವಾದಿ ಸಂಘಟನೆಯಿಂದ ಭಯೋತ್ಪಾದನೆಯನ್ನು ನಿರ್ಮೂಲನ ಮಾಡುವ ಅಭಿಯಾನ ಸಾಚಾವೇ?

ಎ. ಆರ್. ಎ. ಸಿದ್ದೀಖ್,
ಮಂಗಳೂರು

# ಅಹ್ಮದಿಯಾ ಖಲೀಫರ ಭಾರತ ಸಂದರ್ಶನ



## ಢೆಲ್ಲಿಯಲ್ಲಿ

ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು ಲಂಡನಿನ ಹೀತ್ರೊ ವಿಮಾನ ನಿಲ್ದಾಣದಿಂದ ಕಳೆದ ನವಂಬರ್ 22ರಂದು ಹೊರಟು ಢೆಲ್ಲಿ ಇಂದಿರಾಗಾಂಧಿ ಇಂಟರ್ ನೇಶನಲ್ ಏರ್‌ಪೋರ್ಟ್‌ನಲ್ಲಿ ಬ್ರಿಟಿಷ್ ಏರ್‌ವೇಸ್‌ನ ವಿಮಾನದಲ್ಲಿ ಆಗಮಿಸಿದರು.

ವಿಮಾನ ನಿಲ್ದಾಣದಲ್ಲಿ ಖಲೀಫರನ್ನು ಭಾರತದ ಅಹ್ಮದಿಯಾ ಜಮಾಅತಿನ ಪ್ರಧಾನ ಕಾರ್ಯದರ್ಶಿ ಮುಹಮ್ಮದ್ ಇನಾಂ ಘೋರಿ, ಕೇಂದ್ರ ಸಮಿತಿ ಅಧ್ಯಕ್ಷ ಡಾ। ಸಾಲಿಹ್ ಮುಹಮ್ಮದ್ ಅಲಾದೀನ್ ಮೊದಲಾದವರು ಸ್ವಾಗತಿಸಿದರು. ಅನಂತರ ಖಲೀಫರನ್ನು ಸೆರಿಮೋನಿಯಲ್ ಲಾಂಜ್‌ಗೆ ಬರಮಾಡಿಕೊಳ್ಳಲಾಯಿತು. ದೇಶೀಯ ಮತ್ತು ಅಂತರ್ದೇಶೀಯ ಅತ್ಯಂತ ಗಣ್ಯ ವ್ಯಕ್ತಿಗಳಿಗೆ ಮಾತ್ರ ಸೆರಿಮೋನಿಯಲ್ ಲಾಂಜ್ ಸೀಮಿತ. ಭಾರತದ ಪ್ರಧಾನ ಮಂತ್ರಿ, ರಾಷ್ಟ್ರಪತಿ, ವಿದೇಶ ನೇತಾರರು ಎಂಬಿವರು ಸೆರಿಮೋನಿಯಲ್ ಲಾಂಜ್‌ನಲ್ಲಿ ವಿಶ್ರಮಿಸುತ್ತಾರೆ.

ಖಲೀಫರು ಸೆರಿಮೋನಿಯಲ್ ಲಾಂಜ್‌ಗೆ ಆಗಮಿಸಿದಾಗ ಫಜ್‌ರ್ ನಮಾಝಿನ ಸಮಯವಾದುದರಿಂದ ಅಲ್ಲೇ ಖಲೀಫರು ನಮಾಝ್ ನಿರ್ವಹಿಸಿದರು. ಆ ಬಳಿಕ ಬೆಳಿಗ್ಗೆ 6.20ಕ್ಕೆ ಢೆಲ್ಲಿ ಮಸೀದಿಗೆ ಹೊರಟರು. ಹುಝೂರ್ ಮತ್ತು ಸಂಘ 6.55ಕ್ಕೆ ಢೆಲ್ಲಿಯ "ಬೈತುಲ್ ಹಾದೀ" ಮಸೀದಿ ತಲಪಿದರು. ಅಲ್ಲಿ ಸ್ಥಳೀಯ ಮಿಶನರಿ ಮೌಲಾನ ಕಲೀಮುದ್ದೀನ್ ಸಾಹೇಬ್ ಮತ್ತು ಸ್ಥಳೀಯ ಜಮಾಅತಿನ ನೂರಾರು ಅಹ್ಮದಿಯರು ಘೋಷ ವಾಕ್ಯಗಳನ್ನು ಉಚ್ಚರಿಸುತ್ತಾ ಗಾನಗಳನ್ನು ಹಾಡುತ್ತಾ ಆಹ್ಲಾದಪೂರ್ವಕವಾಗಿ ಖಲೀಫರನ್ನು ಸ್ವಾಗತಿಸಿದರು.

## ಚೆನ್ನೈಯಲ್ಲಿ

ನವೆಂಬರ್ 24ರಂದು ಅಪರಾಹ್ನ ಹಝ್ರತ್ ಖಲೀಫರು ಚೆನ್ನೈ ತಲಪಿದರು. ಸ್ಥಳೀಯ ಅಹ್ಮದಿಯಾ ಘಟಕದ ಮಜ್ಲಿಸ್ ಆಮಿಲ ಸದಸ್ಯರು ಖಲೀಫರನ್ನು ಸ್ವಾಗತಿಸಿದರು. ಹೋಟೆಲ್ ಟ್ರೈಡೆಂಟ್‌ನಲ್ಲಿ ಅವರಿಗೆ ಊಟ–ವಸತಿ ಸೌಕರ್ಯ ಏರ್ಪಡಿಸಲಾಗಿತ್ತು. ಹೋಟೆಲಿನ ಒಂದು ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಮಹಿಳೆಯರ ಸಭೆಯಲ್ಲಿ, ತಮ್ಮ ಮಕ್ಕಳಿಗೆ ಉತ್ತಮವಾದ ಆಧ್ಯಾತ್ಮಿಕ ಮತ್ತು ಭೌತಿಕ ಶಿಕ್ಷಣ ಕೊಡುವ ವಿಚಾರದಲ್ಲಿ ತುಂಬಾ ಗಮನಹರಿಸಬೇಕೆಂದು ಖಲೀಫರು ಉಪದೇಶಿಸಿದರು. ತಾಯಂದಿರು ತಮ್ಮ ಮಕ್ಕಳಿಗೆ ಉತ್ತಮ ಮಾದರಿ ತೋರಿಸಬೇಕೆಂದು ಅವರು ಬೋಧಿಸಿದರು.

ಸಂಜೆ 4.30 ಘಂಟೆಗೆ ಖಲೀಫರು ಸೈಂಟ್ ತೋಮಸ್ ಮೌಂಟ್‌ನಲ್ಲಿ ನಿರ್ಮಿಸಲಾದ ಅಹ್ಮದಿಯಾ ಮಸೀದಿ "ಮಸ್‌ಜಿದ್ ಹಾದೀ"ಯನ್ನು ಉದ್ಘಾಟಿಸಿದರು. 1947ರ ನಂತರ ಭಾರತದಲ್ಲಿ ಖಲೀಫರಿಂದ ಉದ್ಘಾಟಿಸಲ್ಪಟ್ಟ ಪ್ರಥಮ ಮಸೀದಿ ಇದಾಗಿದೆ. ಈ ಸಮಾರಂಭದಲ್ಲಿ ಭಾಗವಹಿಸಲು ಅನೇಕ ಅನ್ಯಮತಸ್ಥರೂ ಆಗಮಿಸಿದ್ದರು.

## ಕಲ್ಲಿಕೋಟೆಯಲ್ಲಿ

ನವೆಂಬರ್ 24ರಂದು ರಾತ್ರಿ 7.30ಘಂಟೆಗೆ ಖಲೀಫರು ಕಲ್ಲಿಕೋಟೆಯ ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದರು. ಕೇರಳ ರಾಜ್ಯದ ಆರು ಮಂದಿ ಪ್ರಾದೇಶಿಕ ಅಮೀರ್‌ಗಳು ಮತ್ತು ಜಮಾಅತಿನ ಅನೇಕ ಹುದ್ದೇದಾರರು ಖಲೀಫರನ್ನು ಸ್ವಾಗತಿಸಿದರು. ವಿಮಾನ ನಿಲ್ದಾಣದ ಹೊರಗೆ ಅನೇಕ ಅಹ್ಮದಿಯರು ಖಲೀಫರನ್ನು ಸ್ವಾಗತಿಸಲು ನೆರೆದಿದ್ದರು.

ನವೆಂಬರ್ 25ರಂದು "ಬೈತುಲ್ ಖುದ್ದೂಸ್" ಮಸೀದಿ ಅಂಗಣದಲ್ಲಿ ಜರಗಿದ ಸ್ವಾಗತ ಸಭೆಯಲ್ಲಿ ಕೇರಳದ ಎಲ್ಲೆಡೆಗಳಿಂದ ಸಾವಿರಾರು ಅಹ್ಮದಿಯರು ಭಾಗವಹಿಸಿದರು.

ಅಹ್ಮದಿಯರು ತಮ್ಮ ಅಂತರಂಗದಲ್ಲಿ ಪರಿವರ್ತನೆ ಉಂಟು ಮಾಡಬೇಕೆಂದೂ ಅಲ್ಲಾಹನೊಡನಿರುವ ತಮ್ಮ ಸಂಬಂಧವನ್ನು ಬಲಪಡಿಸ ಬೇಕೆಂದೂ ಇಬಾದತ್ ಮತ್ತು ನಮಾಝ್ ಕಡೆಗೆ ಹೆಚ್ಚಿನ ಗಮನಕೊಡಬೇಕೆಂದೂ ಅಲ್ಲಾಹನು ಆಜ್ಞಾಪಿಸಿದ ಇತರ ಒಳಿತುಗಳಲ್ಲಿ ಅಭಿವೃದ್ಧಿಗಳಿಸಲು ಪ್ರಯತ್ನಿಸಬೇಕೆಂದೂ ಖಲೀಫರು ಉಪದೇಶಿಸಿದರು. ತಮ್ಮ ಅಥವಾ ತಮ್ಮ ಪೂರ್ವಿಕರ ಸತ್ಕರ್ಮಗಳ ಕಾರಣದಿಂದ ತಮಗೆ ಅಹ್ಮದಿಯತ್ ಸ್ವೀಕರಿಸಲು ಅಲ್ಲಾಹನು ಸೌಭಾಗ್ಯ ದಯಪಾಲಿಸಿರುವನೆಂದೂ ಆ ಸತ್ಕಾರ್ಯಗಳನ್ನು ಸದಾ ಹೆಚ್ಚುಗೊಳಿಸಲು ಪ್ರಯತ್ನಿಸಬೇಕೆಂದೂ ಹುಝೂರ್ ಬೋಧಿಸಿದರು.

ನವೆಂಬರ್ 26ರಂದು "ಬೈತುಲ್ ಖುದ್ದೂಸ್" ಮಸೀದಿಯ ಅಂಗಣದಲ್ಲಿ ಜರಗಿದ ಲಜ್ನಾ ಇಮಾ ಇಲ್ಲಾಹ್ ಸಭೆಯಲ್ಲಿ ಖಲೀಫರು ಅಹ್ಮದೀ ಮಹಿಳೆಯರಿಗೆ ಉಪದೇಶವಿತ್ತರು. ಅಲ್ಲಾಹನ ಸೇವಕಿಯರು ಎಂಬ ತಮ್ಮ ಪದವಿಯ ಮಹತ್ವವನ್ನು ಸ್ತ್ರೀಯರು ಮನಗಾಣಬೇಕೆಂದು ಅವರು ಬೋಧಿಸಿದರು. ತಮ್ಮ ವಿಶ್ವಾಸ ರಕ್ಷಣೆಗೋಸ್ಕರ ಸರ್ವವಿಧ ತ್ಯಾಗಗಳನ್ನು ಮಾಡಲು ಸನ್ನದ್ಧರೆಂಬ ಪ್ರತಿಜ್ಞೆಯನ್ನು ಅವರು ಕೈಗೊಳ್ಳುತ್ತಾರೆಂದು ಹುಝೂರ್ ಹೇಳಿದರು. ಹಾಗೆಯೇ ನಾಸಿರಾತುಲ್ ಅಹ್ಮದಿಯಾಕ್ಕೆ (ಅಹ್ಮದಿಯಾ ಬಾಲಿಕೆಯರ ಸಂಘಟನೆ) ಸಹ ಧರ್ಮದ ಸೇವೆಮಾಡಲು ಮತ್ತು ಧರ್ಮಪ್ರಚಾರ ಮಾಡಲು ತಕ್ಕುದಾದ ಪಾಲಿದೆ ಎಂದು ಹುಝೂರ್ ಹೇಳಿದರು.

ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಸ್ತ್ರೀಯರಿಗೆ ಬೈಅತ್ ವಚನ ಹೇಳಿಕೊಡುವಾಗ ಮೂರು ವಿಚಾರಗಳಲ್ಲಿ ಪ್ರತಿಜ್ಞೆ ಪಡೆಯುತ್ತಿದ್ದರೆಂದು ಹುಝೂರ್ ಹೇಳಿದರು. ಒಂದು, ಅಲ್ಲಾಹನಿಗೆ ಏನನ್ನೂ ಸಹಭಾಗಿತ್ವ ಕಲ್ಪಿಸದಿರುವುದು. ಎರಡು, ಅವರು ತಮ್ಮ ಸಂತಾನಗಳ ಸಂರಕ್ಷಣೆ ಮಾಡಬೇಕು. ಮೂರು, ಸದಾ ಅನುಸರಿಸಬೇಕು ಎಂಬುದು. ವಾಗ್ದತ್ತ ಮಸೀಹರ[ಅ] ಬೈಅತ್ ಪ್ರತಿಜ್ಞೆ ವಚನದಲ್ಲೂ ಈ ವಿಚಾರಗಳನ್ನು ಕಾಣಬಹುದೆಂದು ಹುಝೂರ್ ಹೇಳಿದರು.

## ತಾಜ್ ಹೋಟೆಲ್‌ನಲ್ಲಿ ಸತ್ಕಾರ

ನವೆಂಬರ್ 27ರಂದು ಕಲ್ಲಿಕೋಟೆಯ ತಾಜ್ ಹೋಟೆಲಿನಲ್ಲಿ ಖಲೀಫರಿಗೆ ಸತ್ಕಾರವನ್ನು ಏರ್ಪಡಿಸಲಾಗಿತ್ತು. ಕಲ್ಲಿಕೋಟೆಯ ಮೇಯರ್, ರಾಜಕೀಯ ಧುರೀಣರು, ಸಮುದಾಯದ ಗಣ್ಯ ವ್ಯಕ್ತಿಗಳು, ಪ್ರಾದೇಶಿಕ ಅಮೀರ್‌ಗಳು ಮೊದಲಾದವರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಖಲೀಫರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು:

"ಲೋಕದಲ್ಲಿ ಇಂದು ಬಹುಸಂಖ್ಯಾತ ಜನರು ತಮ್ಮ ಸ್ವಾರ್ಥ ವಿಚಾರದಲ್ಲೇ ಮುಳುಗಿದ್ದಾರೆ. ಇತರರ ಹಕ್ಕುಗಳನ್ನು ನೀಡಲು ಅವಕಾಶ ಮಾಡಿಕೊಡದೆ ತಮ್ಮ ಸ್ವಾರ್ಥಸಾಧನೆ ಈಡೇರಬೇಕೆಂದು ಅವರು

ಇಚ್ಛಿಸುತ್ತಾರೆ. ಮನುಷ್ಯರ ಹೃದಯಗಳನ್ನು ಜಯಿಸುವುದು, ಸ್ನೇಹವನ್ನು ಸಮುದಾಯದಲ್ಲಿ ಹರಡುವುದು ಇತ್ಯಾದಿ ಪ್ರಯಾಸಕರವಾಗಿದೆ. ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಸಂಶಯ ಹರಡುತ್ತಿದೆ. ಇದು ಘರ್ಷಣೆಗೂ ಗಲಭೆಗೂ ಹೇತುವಾಗುತ್ತದೆ. ಒಂದು ಕಡೆಯಲ್ಲಿ ನಾವು ಈ ಕಾಲಘಟ್ಟದಲ್ಲಿ ಅತ್ಯಂತ ವಿದ್ಯಾಸಂಪನ್ನರೆಂದೂ ಪರಮತ ಸಹಿಷ್ಣುಗಳೆಂದೂ ವಾದಿಸುತ್ತೇವೆ. ಇನ್ನೊಂದು ಕಡೆಯಲ್ಲಿ ನಮ್ಮ ಸಹಿಷ್ಣುತೆಯ ನೆಲೆ ಬಹಳ ಕೀಳ್ಮಟ್ಟದ್ದಾಗಿದೆ. ಅತ್ಯಾಶೆ ಎಲ್ಲವನ್ನೂ ನುಂಗಿಬಿಡುತ್ತದೆ. ತಮಗೆ ಲಭಿಸಿರುವುದರಿಂದ ಸಂತೃಪ್ತರಾಗುವ ಬದಲು ಜನರ ದೃಷ್ಟಿ ಅನ್ಯರ ಸಂಪತ್ತಿನ ಮೇಲೆ ಬೀಳುತ್ತದೆ. ಎಲ್ಲರ ಹಕ್ಕುಗಳನ್ನೂ ನೀಡಬೇಕಾಗಿದೆ. ವಿವಿಧ ಮತಸ್ಥರು ಪರಸ್ಪರ ಗೌರವಿಸಬೇಕಾಗಿದೆ. ದೇವನು ನಮಗೆ ನೀಡಿದ ಸಂಪತ್ತನ್ನು ಸಮಾಜದ ಕ್ಷೇಮಾಭಿವೃದ್ಧಿಗೋಸ್ಕರ ಉಪಯೋಗಿಸಬೇಕಾಗಿದೆ.

"ಯಾರೊಡನೆಯಾಗಲಿ ಯಾವುದೇ ರೀತಿಯ ಹಗೆ, ವಿದ್ವೇಷ ಹೊಂದಬಾರದೆಂದೂ ಶಾಂತಿ ಕಾಪಾಡಬೇಕೆಂದೂ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಆಜ್ಞಾಪಿಸಿದ್ದರು. ಇದು ಖಂಡಿತವಾಗಿಯೂ ಪ್ರಯಾಸಕರ. ಆದರೆ ಪೈಗಂಬರರು ಈ ತತ್ವವನ್ನು ತನ್ನ ಜೀವಿತದಲ್ಲಿ ತೋರಿಸಿದರು. ನೀವು ಸತ್ಕಾರ್ಯಗಳಲ್ಲಿ ಇತರರೊಡನೆ ಸದಾ ಸಹಕರಿಸಬೇಕಾಗಿದೆ. ಸ್ವಪ್ರತಿಷ್ಠೆ ಮತ್ತು ಅಹಂಭಾವವನ್ನು ತ್ಯಜಿಸಬೇಕು. ಮುಸ್ಲಿಮರೂ ಕ್ರೈಸ್ತರೂ ಹಿಂದೂಗಳೂ ಎಲ್ಲರೂ ಈ ತತ್ವವನ್ನು ಪಾಲಿಸಬೇಕಾಗಿದೆ. ಶಾಂತಿ-ಸಮಾಧಾನ ಸ್ಥಾಪಿಸುವುದರಲ್ಲಿ ಪ್ರಾಮಾಣಿಕತೆಯನ್ನು ತೋರಿಸಬೇಕಾಗಿದೆ. ನಾವಿಂದು ಈ ವಿಚಾರದಲ್ಲಿ ಕಾರ್ಯಶೀಲರಾಗದಿದ್ದರೆ ನಮ್ಮ ಮುಂದಿನ ಪೀಳಿಗೆ ಅನೇಕ ವರ್ಷಗಳ ಕಾಲ ಕಣ್ಣೀರು ಸುರಿಸಬೇಕಾದೀತು. ನಮ್ಮ ಮುಂದಿನ ಪೀಳಿಗೆಯನ್ನು ರಕ್ಷಿಸುವ ಬದ್ಧತೆ ನಮಗಿದೆ. ಪ್ರತಿಯೊಬ್ಬನು ಈ ಕಾರ್ಯದಲ್ಲಿ ಗಮನಹರಿಸಬೇಕಾಗಿದೆ."

### ಜುಮುಅ ಖುತುಬ

ನವೆಂಬರ್. 28ರಂದು ಖಲೀಫರು "ಬೈತುಲ್ ಖುದ್ದೂಸ್" ಮಸೀದಿಯಲ್ಲಿ ಜುಮುಅ ಖುತುಬ ನಿರ್ವಹಿಸಿದರು. ಈ ಖುತುಬ ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ (M.T.A.) ಮೂಲಕ ಬಿತ್ತರಣೆಯಾಯಿತು. ಹುಝೂರ್ ಹೀಗೆ ಉಪದೇಶಿಸಿದರು:

"ಪ್ರತಿಯೊಬ್ಬ ಅಹ್ಮದಿಯ ಜೀವಿತೋದ್ದೇಶ ಅಲ್ಲಾಹನ ಪ್ರೀತಿ ಮತ್ತು ಸಾಮೀಪ್ಯಗಳಿಸುವುದಾಗಿರಬೇಕು. ಹಝ್ರತ್ ಪೈಗಂಬರರ(ಸ) ಅಧ್ಯಾಪನೆಗಳನ್ನು ಅನುಸರಿಸುತ್ತಾ ನಾವು ಈ ಪರಿಶ್ರಮದಲ್ಲಿ ಮಗ್ನರಾಗಿರಬೇಕು. ವಾಗ್ದತ್ತ ಮಸೀಹ್(ಅ) ನಮ್ಮಲ್ಲಿ ಕಾಣಲಿಚ್ಛಿಸಿದ ಪರಿವರ್ತನೆ ನಾವು ಸ್ವಯಂ ಉಂಟುಮಾಡಬೇಕು. ಮಸೀಹ್ ಮೌಊದ್‌ರಿಗೆ ಬೈಅತ್ ಮಾಡಿದ ನಂತರ ಒಬ್ಬನ ಲಕ್ಷ್ಯ ಅವರ ಕಲ್ಪನೆಯ ನೆಲೆಗನುಸಾರವಾಗಿ ತನ್ನನ್ನು ರೂಪಗೊಳಿಸುವುದಾಗಿರಬೇಕು. ಆದುದರಿಂದ ಪ್ರತಿಯೊಬ್ಬ ಅಹ್ಮದಿ ವಾಗ್ದತ್ತ ಮಸೀಹ್ ವಿವರಿಸಿದ ಪ್ರಕಾರ ಖುರ್‌ಆನಿನ ಅಧ್ಯಾಪನೆಗಳನ್ನು ಅನುಸರಿಸಬೇಕು. ಅಲ್ಲಾಹನೊಡನೆ ಯಥಾರ್ಥ ಸಂಬಂಧ ಸ್ಥಾಪಿಸಿ ಅತ್ಯಾಶೆ, ಸುಳ್ಳು, ಮೋಸ, ಅಹಂಕಾರ, ದುರಭಿಮಾನ ಮೊದಲಾದ ದುರ್ಗುಣಗಳಿಂದ ಅಗಲಿ ನಿಲ್ಲಬೇಕು. ಅಂಧಕಾರಕ್ಕೆ ವಿರುದ್ಧವಾಗಿ ಆಧ್ಯಾತ್ಮಿಕ ಪ್ರಕಾಶದೊಂದಿಗೆ ನಾವು ರಣರಂಗಕ್ಕೆ ಇಳಿಯಬೇಕು. ಹಾಗಿದ್ದರೆ ಮಾತ್ರ ಸೈತಾನನ ಮೋಸದಿಂದ ನೀವು ತಪ್ಪಿಸಿಕೊಳ್ಳುವಿರಿ.

"ಅತ್ಯಂತ ಮೂಲಭೂತ ವಿಚಾರವೇನೆಂದರೆ, ಅಲ್ಲಾಹನನ್ನು ದಿನಂಪ್ರತಿ ಐದು ಹೊತ್ತು ಪ್ರಾರ್ಥಿಸಬೇಕು. ಪುರುಷರು, ಸ್ತ್ರೀಯರು, ಮಕ್ಕಳು, ವೃದ್ಧರು ಯಾರೇ ಆಗಲಿ, ನಮಾಝ್ ನಿರ್ವಹಿಸುವುದರಲ್ಲಿ ಲೋಪ ಮಾಡಿ ಎಂದಿಗೂ ಸಾತ್ವಿಕತೆಯ ಉನ್ನತ ಮಟ್ಟಕ್ಕೇರಲು ನಮಗೆ ಸಾಧ್ಯವಿಲ್ಲ. ನಮಾಝ್ ದೇವಪ್ರಾಪ್ತಿಗಿರುವ ಪ್ರಧಾನವಾದ ಮಾರ್ಗವಾಗಿದೆ. ನೀವು ಅಲ್ಲಾಹನನ್ನು ನೇರವಾಗಿ ಕಾಣುತ್ತೀರಿ ಎಂಬ ರೀತಿಯಲ್ಲಿ ನಮಾಝ್ ನಿರ್ವಹಿಸಬೇಕಾಗಿದೆ. ಒಬ್ಬನು ದೊಡ್ಡ ಓರ್ವ ನೇತಾರನನ್ನು ಕಾಣುವಾಗ ಒಂದು ರೀತಿಯ ಭಯ ಅವನಲ್ಲಿರುತ್ತದೆ. ಆದರೆ ಅಲ್ಲಾಹನು ಸರ್ವಶಕ್ತನು. ಹಾಗಿರುವ ಅಲ್ಲಾಹನನ್ನು ನಾವು ನೇರವಾಗಿ ಕಾಣುತ್ತೇವೆ ಎಂಬ ಪ್ರಜ್ಞೆ ನಮ್ಮಲ್ಲಿ ಖಂಡಿತವಾಗಿಯೂ ಭಯಭಕ್ತಿ ಉಂಟುಮಾಡುವುದು. ನಿಮಗೆ ಅದು ಸಾಧ್ಯವಾಗದಿದ್ದರೆ ಸರ್ವಶಕ್ತನಾದ ಅಲ್ಲಾಹನು ನಿಮ್ಮನ್ನು ಕಾಣುತ್ತಿದ್ದಾನೆ ಎಂಬ ಪ್ರಜ್ಞೆಯಾದರೂ ನಿಮಗೆ ಇರಬೇಕಾಗಿದೆ. ನಾವು ಈ ರೀತಿ ಅಭ್ಯಾಸಮಾಡಿದರೆ ನಮ್ಮ ನಮಾಝ್‌ನಲ್ಲಿರುವ ಶ್ರದ್ಧೆ ಮತ್ತು ಭಕ್ತಿ ವೃದ್ಧಿಗೊಳ್ಳುವುವು. ಹೀಗೆ ಜಮಾಅತ್ ಭಯಭಕ್ತಿಯಲ್ಲಿ ಮುನ್ನೇರುವಾಗ ಆ ಜಮಾಅತಿಗೆ ಶ್ರೇಷ್ಠತೆ ಲಭ್ಯವಾಗುತ್ತದೆ. ನಮ್ಮ ಸತ್ಕರ್ಮಗಳು ಇತರರನ್ನು ನಮ್ಮೆಡೆಗೆ ಆಕರ್ಷಿಸುತ್ತವೆ.

"ನಮ್ಮ ಆಧ್ಯಾತ್ಮಿಕ ಜೀವಿತದ ಪ್ರಗತಿಗೆ ತಡೆಯೊಡ್ಡುವ ಎಲ್ಲ ವಿಧ ದುರಾಚಾರ, ಅನಾಚಾರಗಳಿಂದ ನೀವು ದೂರವಿರಬೇಕು."

### ಎರ್ನಾಕುಳಮ್‌ನಲ್ಲಿ

ನವೆಂಬರ್ 29ರಂದು ಎರ್ನಾಕುಲಂ ನೋರ್ತ್‌ನಲ್ಲಿ ಹಝ್ರತ್ ಖಲೀಫರು ಉಮರ್ ಮಸ್ಜಿದನ್ನು ಉದ್ಘಾಟಿಸಿದರು. ಅದರೊಂದಿಗೆ ಅವರು ಎರ್ನಾಕುಳಮ್ ವಲಯದ ಇತರ ನಾಲ್ಕು ಮಸೀದಿ ಉದ್ಘಾಟನೆಯನ್ನು ಘೋಷಿಸಿದರು. ಅವು - ಆಲಪ್ಪುಯದ ಮಸ್ಜಿದ್ ನಾಸಿರ್, ಐರಾಪುರದ ಬೈತುಲ್ ಹುದಾ, ಕೊಡುಂಗಲ್ಲೂರಿನ ಬೈತುಲ್ ಆಫಿಯತ್ ಮತ್ತು ಪಳ್ಳುರುತ್ತಿಯ ಮಸ್ಜಿದ್ ಮಹ್‌ಮೂದ್.

ಹುಝೂರ್ ಹೇಳಿದರು: "ಮಸೀದಿ ನಿರ್ಮಿಸುವಾಗ ಅದು ನಮ್ಮ ಜವಾಬ್ದಾರಿಕೆಯನ್ನೂ ಹೆಚ್ಚಿಸುತ್ತದೆ. ಮಸೀದಿಯ ಯಥಾರ್ಥ ಉದ್ದೇಶ ಅಲ್ಲಾಹನನ್ನು ಆರಾಧಿಸುವುದಾಗಿದೆ. ಯಥಾರ್ಥ ಆರಾಧನೆಯೇನೆಂದರೆ, ಅಲ್ಲಾಹನೊಡನೆ ಮತ್ತು ಅವನ ಸೃಷ್ಟಿಗಳೊಡನೆ ನಮಗಿರುವ ಬದ್ಧತೆಯನ್ನು ನಿರ್ವಹಿಸುವುದಾಗಿದೆ. ಕಲ್ಲು ಮತ್ತು ಸಿಮೆಂಟಿನಿಂದ ಮಾತ್ರ ಮಸೀದಿ ನಿರ್ಮಾಣ ಸಾಧ್ಯವಿಲ್ಲ. ಐದು ಹೊತ್ತು ಮಸೀದಿಗೆ ಬಂದು ನಮಾಝ್ ಮಾಡಬೇಕು. ಇಸ್ಲಾಮಿನ ಮಹತ್ತರ ಸಂದೇಶಗಳನ್ನು ಜಾರಿಗೊಳಿಸಲು ನೀವು ಮಸೀದಿಗೆ ಬಂದು ಅಲ್ಲಾಹನೊಡನೆ ಪ್ರಾರ್ಥಿಸಬೇಕು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತ ಮಾದರಿಯನ್ನು ನಾವು ಅನುಸರಿಸಬೇಕು. ಪವಿತ್ರ ಖುರ್‌ಆನ್‌ನಲ್ಲಿ ಹೇಳಲಾದ ಸಕಲ ಸದ್ಗುಣಗಳ ಸಾಕಾರ ರೂಪ ಹಝ್ರತ್ ಪೈಗಂಬರರಾಗಿದ್ದರು. ಎಲ್ಲ ಅಹ್ಮದಿಯರು ಒಳಿತಿನಲ್ಲಿ ಇತರ ಎಲ್ಲರನ್ನೂ ಮೀರಬೇಕಾಗಿದೆ. ಹಾಗೆ ನೀವು ಎಲ್ಲರಿಗೂ ಉತ್ತಮ ಮಾದರಿಯಾಗಿರಬೇಕು."

### ತಾಜ್ ರೆಸಿಡೆನ್ಸಿಯಲ್ಲಿ

ನವೆಂಬರ್ 30ರಂದು ಪೂರ್ವಾಹ್ನ 10 ಗಂಟೆಗೆ ಉಮರ್ ಮಸ್ಜಿದ್‌ನಲ್ಲಿ "ವಖ್ಫೆ ನೌ" ಮಕ್ಕಳ ಕ್ಲಾಸ್ ನಡೆಯಿತು. ಹುಝೂರ್ ಮಕ್ಕಳೊಂದಿಗೆ ಈ ಸಂಭಾಷಣೆ ಬಹಳ ಹರ್ಷೋಲ್ಲಾಸಕರವಾಗಿತ್ತು.

ಅಂದು ಸಂಜೆ ತಾಜ್ ರೆಸಿಡೆನ್ಸಿಯಲ್ಲಿ ಜರಗಿದ ಸತ್ಕಾರ ಕೂಟದಲ್ಲಿ ಕೊಚ್ಚಿ ನಗರದ ಬುದ್ಧಿಜೀವಿಗಳೂ ಸಾಮಾಜಿಕ ನಾಯಕರೂ ಗಣ್ಯವ್ಯಕ್ತಿಗಳೂ ಭಾಗವಹಿಸಿದರು.

ಸೆಬಾಸ್ಟಿಯನ್ ಪೌಲ್ ಎಂ.ಪಿ., ಪ್ರೊಫೆಸರ್ ಎಂ.ಕೆ. ಸಾನು ಮೊದಲಾದವರು ಭಾಷಣ ಮಾಡಿದರು. ಜಸ್ಟಿಸ್ ಪಿ.ಕೆ. ಶಂಸುದ್ದೀನ್, ಕೆ.ವಿ. ತೋಮಸ್ ಎಂ.ಎಲ್.ಎ., ಮೋನಾಯಿ ಎಂ.ಎಲ್.ಎ. ಮೊದಲಾದ ಧುರೀಣರು ಉಪಸ್ಥಿತರಿದ್ದರು. ವಿಶಿಷ್ಟ ಅತಿಥಿಗಳಿಗೆ ಚತುರ್ಥ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ರಚಿಸಿದ 'Revelation, Rationality, Knowledge and Truth' ಎಂಬ ಪುಸ್ತಕ ಅಡಕವಾದ ಕಿಟ್‌ಗಳನ್ನು ಹುಝೂರ್ ನೀಡಿದರು.

## ಸಂಪಾದಕರಿಗೆ ಪತ್ರ

ಯುಗರಶ್ಮಿಯ ಸನ್ಮಾನ್ಯ ಸಂಪಾದಕರಾದ ಮುಹಮ್ಮದ್ ಯೂಸುಫ್ ಸಾಹೇಬರೆ,

ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವ ಬರಕಾತುಹು.

ತಾವು ಕಳುಹಿಸಿದ ಯುಗರಶ್ಮಿಯ ಅಹ್ಮದಿಯಾ ಖಿಲಾಫತ್ ಶತಾಬ್ದ ವಿಶೇಷ ಸಂಚಿಕೆ ತಲಪಿದೆ. ಮಾಶಾಅಲ್ಲಾಹ್. ಮುದ್ರಣ ಚೆನ್ನಾಗಿದೆ. ಲೇಖನಗಳೂ ಚೆನ್ನಾಗಿವೆ. ಅಲ್ಲಾಹನು ಈ ಸಂಚಿಕೆಯನ್ನು ಸ್ವೀಕೃತವಾಗುವಂತೆ ಮಾಡಲಿ. ಅದು ಬಹು ಜನರಿಗೆ ಸನ್ಮಾರ್ಗ ದರ್ಶಕವಾಗಲಿ. ಶುಭಾಶಯಗಳು.

**ಮುಹಮ್ಮದ್ ಕರೀಮುದ್ದೀನ್ ಶಾಹಿದ್**
ಎಡಿಶನಲ್ ನಾಝಿಂ ವಖ್ಫೆ ಜದೀದ್ ಬೇರೂನ್, ಖಾದಿಯಾನ್

---

ಯುಗರಶ್ಮಿಯ ಸನ್ಮಾನ್ಯ ಸಂಪಾದಕರಾದ ಮುಹಮ್ಮದ್ ಯೂಸುಫ್ ಸಾಹೇಬರೆ,

ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವ ಬರಕಾತುಹು.

ತಾವು ಕಳುಹಿಸಿದ ಯುಗರಶ್ಮಿಯ ಅಹ್ಮದಿಯಾ ಖಿಲಾಫತ್ ಶತಾಬ್ದ ವಿಶೇಷ ಸಂಚಿಕೆ ತಲಪಿದೆ. ಜಝಾಕುಮಲ್ಲಾಹ್ ಅಹ್‌ಸನುಲ್‌ಜಝಾ.

ಮಾಶಾಅಲ್ಲಾಹ್, ತುಂಬಾ ಒಳ್ಳೆಯ ಪ್ರಯತ್ನ. ಬಾಹ್ಯ ವಿನ್ಯಾಸ ಮತ್ತು ಲೇಖನಗಳು ಬಹಳ ಉತ್ತಮವಾಗಿವೆ. ಅಲ್ಲಾಹನು ಅದನ್ನು ಜನರಿಗೆ ಪ್ರಯೋಜನಕರವನ್ನಾಗಿ ಮಾಡಲಿ ಹಾಗೂ ಕನ್ನಡಿಗರಿಗೆ ಖಿಲಾಫತಿನ ಆವಶ್ಯಕತೆ ಮತ್ತು ಮಹತ್ವವನ್ನು ಮನಗಾಣಲಿಕ್ಕೆ ದಾರಿಮಾಡಲಿ. ಹಾಗೆಯೇ ತಮಗೂ ಈ ಸಂಚಿಕೆಯನ್ನು ಸಿದ್ಧಪಡಿಸುವುದರಲ್ಲಿ ಬರಹ ಮತ್ತು ಧನದಲ್ಲಿ ನೆರವಿತ್ತ ಎಲ್ಲರಿಗೂ ಅಲ್ಲಾಹನು ಉತ್ತಮ ಪ್ರತಿಫಲವನ್ನು ನೀಡಲಿ; ತಮ್ಮ ಆರೋಗ್ಯ ಮತ್ತು ಆಯಸ್ಸನ್ನು ವೃದ್ಧಿಗೊಳಿಸಲಿ. ಇನ್ನು ಮುಂದೆ ಸಹ ಅಲ್ಲಾಹನಿಂದ ಸ್ವೀಕೃತವಾಗುವಂಥ ಸೇವೆ ಮಾಡಲು ತಮಗೆ ಸೌಭಾಗ್ಯ ದೊರೆಯತ್ತಿರಲಿ. ಆಮೀನ್.

ತಮ್ಮ ಸಹೋದರ,

**ಝ್ಯೆನುದ್ದೀನ್ ಆಬಿದ್**
ನಾಝಿಂ ದಾರುಲ್ ಖಝಾ, ಖಾದಿಯಾನ್

---

ಮಾನ್ಯರೇ,

ನವ ವರ್ಷದ ಶುಭಾಶಯಗಳು.

ತಾವು ಕಳುಹಿಸಿದ 'ಯುಗರಶ್ಮಿ' ವಿಶೇಷ ಸಂಚಿಕೆ ಕೈಸೇರಿದೆ; ಕೃತಜ್ಞತೆಗಳು. 'ಅಹ್ಮದಿಯಾ ಖಿಲಾಫತ್' ಸಂಘಟನೆಯ ನೂರು ವರ್ಷಗಳ ಇತಿಹಾಸ ಹಾಗೂ ಇತರ ವಿವರಗಳು ಈ ಸಂಚಿಕೆಯಲ್ಲಿ ಉಲ್ಲೇಖಗೊಂಡಿವೆ. ಇವು ಈ ವಿಚಾರದ ಜಿಜ್ಞಾಸುಗಳಿಗೆ ಉಪಯುಕ್ತವಾಗಿವೆ.

ಇಸ್ಲಾಮ್ ಧರ್ಮದೊಳಗೆ 72ರಷ್ಟು ವಿವಿಧ ರೀತಿನೀತಿಯ ಕವಲುಗಳು ಇವೆಯೆಂಬುದರಿಂದ, ಧಾರ್ಮಿಕ ವಿಚಾರದಲ್ಲೂ ವೈವಿಧ್ಯಕ್ಕೆ ಎಡೆ ಇದೆ ಎಂಬುದು ಸ್ಪಷ್ಟ. ಜಗತ್ತಿನ ಇತರ ಮತಧರ್ಮಗಳ ವಿಚಾರದಲ್ಲೂ ವೈವಿಧ್ಯ ಅಥವಾ ಬಹುತ್ವೇ ಸಹಜಸ್ಥಿತಿ. ಯಾವುದೊಂದು ಮತ ಉಳಿದವುಗಳಿಗಿಂತ ಉತ್ತಮ ಅಥವಾ ಕಳಪೆ ಎನ್ನುವಂತಿಲ್ಲ. ತನ್ನ ಮತದಂತೆಯೇ ಇನ್ನೊಂದರಲ್ಲೂ ಉತ್ತಮಾಂಶಗಳು ಇದ್ದೇ ಇರುತ್ತವೆಂಬುದನ್ನು ಕಂಡುಕೊಳ್ಳುವುದೇ ಮುಖ್ಯವಾದದ್ದು. ಒಟ್ಟಿನಲ್ಲಿ ಸಮಾನತಾಭಾವ ಮುಖ್ಯವಾದದ್ದು. ಜಗತ್ತಿನಲ್ಲಿ ಯಾರೂ ಕಾಫಿರರಿಲ್ಲ!

ಯಾವುದೇ ಮತಧರ್ಮವಾಗಲೀ ಪ್ರವಾದಿಯಾಗಲೀ ಸರ್ವೋಚ್ಚ ಎಂದಾಗಲೀ ಪರಿಪೂರ್ಣವೆಂದಾಗಲೀ ಭಾವಿಸುವುದು ಯುಕ್ತವಲ್ಲ. ಡಿ.ವಿ.ಜಿ.ಯವರೆನ್ನುವಂತೆ, 'ನೂರಾರು ಮತವಿಹುದು ಲೋಕದುಗ್ರಾಣದಲಿ.' ಇಷ್ಟಕ್ಕೂ ವೈಚಾರಿಕ, ವೈಜ್ಞಾನಿಕ ಎನಿಸಿದ ಈ ಆಧುನಿಕ ಯುಗದಲ್ಲಿ ಮತಧರ್ಮಗಳ ಸ್ಥಾನವೇನು? ಎಷ್ಟು? ಮತಗ್ರಂಥಗಳ ಅಧ್ಯಯನ, ಮತೀಯ ಆಚರಣೆಗಳು, ಪ್ರಾರ್ಥನೆ, ಮತಪ್ರಚಾರಗಳಿಗೆ ಹೆಚ್ಚಿನ ಸಮಯ, ಶ್ರಮ, ಧನಗಳನ್ನು ವಿನಿಯೋಗಿಸಿ ಇತರ ಕರ್ತವ್ಯಗಳನ್ನು ಮರೆಯಬೇಕೆ? ಮತೀಯ ವಿಚಾರಗಳು ಗೌಣವಾದರೆ ತಪ್ಪೇ?

ಈ ವಿಶೇಷ ಸಂಚಿಕೆಯಲ್ಲಿ ಹಲವು ಮುಖ್ಯವಿಚಾರಗಳಿದ್ದರೂ ಇಂದು ಎಲ್ಲ ಸಮಾಜಗಳೊಂದಿಗೆ ಸೌಹಾರ್ದದಿಂದ ಬಾಳಲು ಅನಿವಾರ್ಯವಾದ ಸೂತ್ರಗಳು ಕಾಣಿಸುವುದಿಲ್ಲ. ಬರಿಯ ಹಳೆಯ ಶಾಸ್ತ್ರ ವಚನಗಳು ಸಾಕಾಗುವುದಿಲ್ಲ. ಹೊಸ ದಿಕ್ಕಿನತ್ತ ಸಮಾಜ ನಡೆಯ ಬೇಡವೆ? ಸ್ತ್ರೀಯರಿಗೆ ಬದುಕಿನಲ್ಲಿ ಇರಬೇಕಾದ ಸ್ಥಾನಮಾನ, ಕಲೆ, ಸಾಹಿತ್ಯ, ವೈಚಾರಿಕತೆ ಇತ್ಯಾದಿಗಳ ಬಗೆಗೆ ಚಿಂತನೆಗಳಿದ್ದರೆ ಚೆನ್ನಾಗಿತ್ತು. ಹಾಗೆಯೇ ಪರಿಸರ ರಕ್ಷಣೆ, ಹಿಂಸಾಪ್ರವೃತ್ತಿ, ಭಯೋತ್ಪಾದನೆಯಂಥ ಜ್ವಲಂತ ವಿಚಾರಗಳು ಚರ್ಚೆಗೆ ಒಳಗಾಗಬಹುದಿತ್ತು. ಇಂದು ಯಾವುದೇ ಸಮಾಜ 'ಬೆಕ್ಕಿನ ಬಿಡಾರ ಬೇರೆ' ಎಂದು ಬಾಳುವಂತಿಲ್ಲ; ದ್ವೀಪವಾಗಿ ಇರುವಂತಿಲ್ಲ. ನಿಜವಾದ ಸೌಹಾರ್ದದಿಂದ ಬದುಕಬೇಕಾದರೆ ಮತೀಯತೆಯನ್ನು ಕನಿಷ್ಠತೆಗೆ ಇಳಿಸಬೇಕಾಗುತ್ತದೆ. ಮಾನವತೆ ಅರಳಬೇಕಾಗುತ್ತದೆ.

'ಯುಗರಶ್ಮಿ'ಯಲ್ಲಿ ಮುಂದೆ ವಿಶಾಲ ಮಾನವ ಸಮಾಜವನ್ನು ದೃಷ್ಟಿಯಲ್ಲಿಟ್ಟುಕೊಂಡು 'ಯುಗಧರ್ಮ' ದರ್ಶನದ ಉತ್ತಮಲೇಖನಗಳು ಪ್ರಕಟವಾಗಲೆಂದು ಹಾರೈಸುತ್ತೇನೆ.

ಶುಭಾಶಯಗಳೊಂದಿಗೆ,

**ಪ್ರೊ॥ ಅಮೃತ ಸೋಮೇಶ್ವರ, ಕೋಟೆಕಾರು.**

---

ಪ್ರೊ॥ ಅಮೃತ ಸೋಮೇಶ್ವರ ಅವರು ಸೂಚಿಸಿದಂತಹ ಕೋಮುಸೌಹಾರ್ದ, ಸ್ತ್ರೀಯರ ಸ್ಥಾನಮಾನ, ಹಿಂಸಾ ಪ್ರವೃತ್ತಿ, ಭಯೋತ್ಪಾದನೆ, ಧರ್ಮ ಸಾಮರಸ್ಯ ಇತ್ಯಾದಿ ವಿಷಯಗಳ ಕುರಿತು ಯುಗರಶ್ಮಿಯಲ್ಲಿ ಲೇಖನಗಳು ಮುಂಚೆ ಪ್ರಕಟಗೊಂಡಿವೆ. ಇನ್ನು ಮುಂದೆ ಸಹ ಸಂದರ್ಭೋಚಿತವಾಗಿ ಪ್ರಕಟಗೊಳ್ಳುವುವು.

*– ಸಂಪಾದಕ*

ಅಹ್ಮದಿಯರಿಗೆ ಸುತ್ತೋಲೆ

# ತಹ್‌ರೀಕ್ ಜದೀದ್‌ನ ಹೊಸ ವರ್ಷದ ಅನುಗ್ರಹೀತ ಆರಂಭ ಮತ್ತು ಭಾರತದ ಅಹ್ಮದಿಯಾ ಜಮಾಅತಿನ ನಿಷ್ಠಾವಂತರ ಹೊಣೆಗಾರಿಕೆಗಳು

2008ರ ನವೆಂಬರ್ ದಿನಾಂಕ 7ರಂದು ಬ್ರಿಟನಿನ ಬ್ರೆಡ್‌ಫೋರ್ಡ್ ನಗರದಲ್ಲಿ "ಮಸ್‌ಜಿದ್ ಅಲ್ ಮಹದೀ"ಯನ್ನು ಉದ್ಘಾಟಿಸುವ ಸಂದರ್ಭದಲ್ಲಿ ಹಝ್‌ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರು ಜುಮುಅ ಖುತುಬದಲ್ಲಿ ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಜಾರಿಗೊಳಿಸಿದ ತಹ್‌ರೀಕ್ ಜದೀದ್ ಅಭಿಯಾನವು ಅಕ್ಟೋಬರ್ 31ರಂದು 74 ವರ್ಷಗಳನ್ನು ಜಯಶಾಲಿಯಾಗಿ ಪೂರ್ಣಗೊಳಿಸಿ ನವೆಂಬರ್ ದಿನಾಂಕ ಒಂದರಂದು 75ನೇ ವರ್ಷಕ್ಕೆ ಕಾಲಿರಿಸಿದ ಕುರಿತು ಪ್ರಸ್ತಾಪಿಸಿದುದನ್ನು ಭಾರತದಲ್ಲಿ ಅಹ್ಮದಿಯಾ ಜಮಾಅತಿಗೆ ಸೇರಿದ ಎಲ್ಲರೂ ಅರಿತಿರುವರು. ಅಲ್‌ಹಮ್ದುಲಿಲ್ಲಾಹ್. ಕಳೆದ ವರ್ಷ ಜಮಾಅತಿನ ಸದಸ್ಯರು ತಮ್ಮ ವಾಗ್ದಾನಗಳನ್ನು ಈಡೇರಿಸುವುದರಲ್ಲಿ ವಿಶ್ವಾಸಿಗಳಿಗೆ ಅನುಯೋಜ್ಯವಾದ ಉತ್ಸಾಹವನ್ನು ತೋರಿಸಿದ ಬಗ್ಗೆ ನಾವು ನಮ್ಮ ಎಲ್ಲಾ ಸಹಾಯಕರಿಗೆ ಹೃತ್ಪೂರ್ವಕವಾಗಿ ಕೃತಜ್ಞತೆ ಅರ್ಪಿಸುತ್ತೇವೆ: ನಾವು ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇವೆ: ಅಲ್ಲಾಹನು ಅವರಿಗೆ ಅಪರಿಮಿತ ಅನುಗ್ರಹಗಳನ್ನು ದಯಪಾಲಿಸಲಿ. ಅವರ ತ್ಯಾಗ ಮನೋಭಾವ ಇನ್ನಷ್ಟು ವರ್ಧಿಸಲಿ – ಆಮೀನ್.

ಅಹ್ಮದಿಯಾ ಜಮಾಅತಿನ ಖಲೀಫರು ಜಾರಿಗೊಳಿಸಿದ ಎಲ್ಲಾ ಅಭಿಯಾನಗಳಲ್ಲಿ ತಹ್‌ರೀಕ್ ಜದೀದ್‌ಗೆ ವಿಶಿಷ್ಟ ಸ್ಥಾನವಿದೆ. ಅದನ್ನು ತಹ್‌ರೀಕ್ ಜದೀದಿನ ಸ್ಥಾಪಕರಾದ ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು "ಜಿಹಾದೆ ಕಬೀರ್" (ದೊಡ್ಡ ಜಿಹಾದ್) ಎಂದೂ ಆ ಜಿಹಾದ್‌ನಲ್ಲಿ ಭಾಗವಹಿಸುವವರನ್ನು ಬದ್ರ್ ಯುದ್ಧದಲ್ಲಿ ಭಾಗವಹಿಸಿದ ಸಹಾಬರ (ಪೈಗಂಬರ್ ಶಿಷ್ಯರ) ಪುಣ್ಯದ ಹಾಗಿರುವ ಪುಣ್ಯಕ್ಕೆ ಅರ್ಹರೆಂದೂ ಹೇಳಿರುವರು. ಉಳಿದ ಐಚ್ಛಿಕ ಚಂದಾಗಳಿಗೆ ಎದುರಾಗಿ ಈ ಚಂದಾಕ್ಕೆ ಕಡ್ಡಾಯ ಚಂದಾದ ಸ್ಥಾನ ನೀಡಿದ್ದಾರೆ. ಈ ಅನುಗ್ರಹೀತ ದೇವನಿರ್ದೇಶಿತ ಅಭಿಯಾನದ ಫಲಸ್ವರೂಪವಾಗಿ ಅಹ್ಮದಿಯಾ ಜಮಾಅತಿಗೆ ಲೋಕದಾದ್ಯಂತ ಸತ್ಯದ ಸಂದೇಶ ತಲಪಿಸುವ ವೈಶಿಷ್ಟ್ಯಪೂರ್ಣ ಪದವಿ ಲಭಿಸಿದ ಕುರಿತು ಪ್ರಸ್ತಾಪಿಸುತ್ತಾ ಹಝ್‌ರತ್ ಮುಸ್ಲಿಹ್ ಮೌಊದ್[ರ] ಅವರು 1953ರಲ್ಲಿ ಒಂದು ಖುತುಬದಲ್ಲಿ ಹೀಗೆ ಹೇಳಿದರು:

"ನಿಮಗೆ ಇದೆಂತಹ ಹೆಮ್ಮೆ ಲಭಿಸಿದೆ ಎಂದರೆ ಬೇರೆ ಯಾರಿಗೂ ಇಂತಹ ಹೆಮ್ಮೆ ಗಳಿಸಲಾಗಲಿಲ್ಲ. ನಿಮ್ಮ ಅತ್ಯಂತ ದೊಡ್ಡ ಶತ್ರು ಸಹ ಇದನ್ನು ನಿರಾಕರಿಸಲು ಧೈರ್ಯ ತೋರಲಾರ. ನಿಮ್ಮ ಈ ಪ್ರತಿಷ್ಠೆಯನ್ನು ಕಾಪಾಡಿರಿ. ನೀವು ತಹ್‌ರೀಕ್ ಜದೀದ್‌ಗಾಗಿ ನಿಮ್ಮ ದೇಣಿಗೆಗಳನ್ನು ವರ್ಧಿಸುತ್ತಾ ಹೋಗಿರಿ."

ತಹ್‌ರೀಕ್ ಜದೀದ್ ಮೂಲಕ ಅಹ್ಮದಿಯಾ ಜಮಾಅತಿಗೆ ಲಭಿಸಿದ ವೈಶಿಷ್ಟ್ಯಪೂರ್ಣ ಗೌರವದ ಬಗ್ಗೆ ಹಝ್‌ರತ್ ಖಲೀಫತುಲ್ ಮಸೀಹ್ ರಾಬಿಅ್ (ರಹಿಮಹುಲ್ಲಾಹು) 1985 ಅಕ್ಟೋಬರ್ ದಿನಾಂಕ 25ರಂದು ಹೇಳಿದರು:

"ತಹ್‌ರೀಕ್ ಜದೀದ್ ಅಲ್ಲಾಹನ ಮಾರ್ಗದಲ್ಲಿ ಒಂದು ವರ್ಷ ಎಷ್ಟು ಖರ್ಚು ಮಾಡಿತೋ ಅದರ ಮುಂದಿನ ವರ್ಷ ಅದಕ್ಕಿಂತ ಹೆಚ್ಚು ಅಲ್ಲಾಹನು ನೀಡಿದನು. ಈ ಅಭಿಯಾನ ಆಶ್ಚರ್ಯಕರವಾಗಿ, ನಿರಂತರವಾಗಿ ಮುಂದೆ ಸಾಗುತ್ತಿದೆ. ಎಷ್ಟೆಲ್ಲಾ ಚಂದಾಗಳು ಜಾರಿಗೊಂಡಿವೆಯೋ ಅವೆಲ್ಲಾ ತಹ್‌ರೀಕ್ ಜದೀದ್ ಚಂದಾದ ಶಿಶುಗಳಾಗಿವೆ.... ಬಡವರಾದ ಖಾದಿಯಾನಿನ ನಿವಾಸಿಗಳು ಮತ್ತು ಹಿಂದೂಸ್ತಾನದ ಜಮಾಅತಿಗೆ ಸೇರಿದವರು ಆಡುಗಳನ್ನು ಮಾರುತ್ತಾ ಬಟ್ಟೆಗಳನ್ನು ಮಾರುತ್ತಾ ಪ್ರತಿ ತಿಂಗಳು ಒಂದು ರೂಪಾಯಿ, ಎರಡು ರೂಪಾಯಿ ಸಂಗ್ರಹಿಸಿ ತಹ್‌ರೀಕ್ ಜದೀದ್ ಚಂದಾವನ್ನು ಕೊಡುತ್ತಿರಲಿಲ್ಲವಾದರೆ ಇಂದು ಜಮಾಅತಿನ ಬಜೆಟ್ ಕೋಟಿಗಟ್ಟಲೆ ರೂಪಾಯಿಗಳನ್ನು ತಲಪುತ್ತಿರಲಿಲ್ಲ... ಈಗ ಯುರೋಪು, ಅಮೇರಿಕಾ, ಆಫ್ರಿಕಾ ಮತ್ತು ಇನ್ನಿತರ ಸ್ಥಳಗಳಿಂದ ನಿಮಗೆ ಕಾಣಿಸುವ ಚಂದಾ ವಸೂಲಾತಿಗಳು ಆರಂಭದಲ್ಲಿ ನೀಡಲಾದ ತಹ್‌ರೀಕ್ ಜದೀದ್ ಚಂದಾದಿಂದ ಲಭಿಸಿದ ಅನುಗ್ರಹಗಳ ಫಲವಾಗಿವೆ. ತಹ್‌ರೀಕ್ ಜದೀದಿನ ಚಂದಾವನ್ನು ಬಹಳ ವೈಶಿಷ್ಟ್ಯಪೂರ್ಣ ಪ್ರಾರ್ಥನೆಗಳೊಂದಿಗೆ ನೀಡಲಾಗುತ್ತಿತ್ತು."

ತಹ್‌ರೀಕ್ ಜದೀದ್ ಚಂದಾ ಎಷ್ಟು ಕೊಡಬೇಕೆಂಬುದರ ಕುರಿತು ಪ್ರತಿಯೊಬ್ಬರಿಗೆ ಅವರ ಸಾಧನ ಸಂಪತ್ತುಗಳಿಗನುಸಾರವಾಗಿ ತೀರ್ಮಾನ ಮಾಡುವ ಅಧಿಕಾರ ನೀಡಲಾಗಿದೆಯಾದರೂ ಹಾಗೆ ತೀರ್ಮಾನ ಮಾಡುವಾಗ ಈ ಅನುಗ್ರಹೀತ ದೈವಿಕ ಅಭಿಯಾನದ ಮಹತ್ವ ಮತ್ತು ಪ್ರಾಮುಖ್ಯತೆಯನ್ನು ಹಾಗೂ ಅದಕ್ಕೆ ಹೊರಿಸಲಾದ ಅಂತಾರಾಷ್ಟ್ರೀಯ ಹೊಣೆಗಾರಿಕೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮತ್ತು ಅದರೊಂದಿಗೆ ಖಲೀಫರ ನಿರ್ದೇಶನಗಳನ್ನು ಪರಿಗಣಿಸುವುದು ಆವಶ್ಯಕವಾಗಿದೆ.

ಧರ್ಮದ ಜಯಕ್ಕಾಗಿ ಮಾಡುವ ಕಾರ್ಯಕ್ರಮಗಳ ವೈಭವಶಾಲಿ ಈಡೇರಿಕೆಗೆ ಆವಶ್ಯಕವಾಗಿರುವ ತ್ಯಾಗಗಳ ಕುರಿತು ತಹ್‌ರೀಕ್ ಜದೀದ್ ಅಭಿಯಾನದ ಸ್ಥಾಪಕರಾದ ಹಝ್‌ರತ್ ಮುಸ್ಲಿಹ್ ಮೌಊದ್[ರ] ಅವರು ಈ ಕೆಳಗೆ ವಿವರಿಸಿದಂತೆ ತ್ಯಾಗ ಮಾಡುವ ಎರಡು ಶ್ರೇಣಿಗಳಲ್ಲಿ ಒಂದನ್ನು ಆಯ್ಕೆಮಾಡಲು ಉಪದೇಶಿಸಿದ್ದಾರೆ.

"ಒಬ್ಬ ವ್ಯಕ್ತಿ ತನ್ನ ಮಾಸಿಕ ಆದಾಯದ ಅರ್ಧಾಂಶವನ್ನು, ಉದಾಹರಣೆಗಾಗಿ ನೂರು ರೂಪಾಯಿ ಆದಾಯವಿದ್ದರೆ, ಐವತ್ತು ರೂಪಾಯಿಗಳನ್ನು ತನ್ನ ತಹ್‌ರೀಕ್ ಜದೀದ್ ವಾರ್ಷಿಕ ಚಂದಾವಾಗಿ ನೀಡಿದರೆ ಆ ವ್ಯಕ್ತಿ ಉತ್ತಮ ತ್ಯಾಗ ಮಾಡಿದರೆಂದು ಗಣಿಸಲ್ಪಡುವರು. ಒಂದು ತಿಂಗಳ ಪೂರ್ಣ ಆದಾಯವನ್ನು, ಎಂದರೆ ನೂರು ರೂಪಾಯಿ ಮಾಸಿಕ ಆದಾಯವಿದ್ದರೆ, ನೂರು ರೂಪಾಯಿಗಳನ್ನು ತಹ್‌ರೀಕ್ ಜದೀದಿನ ವಾರ್ಷಿಕ ಚಂದಾವಾಗಿ ನೀಡುವುದಾದರೆ ಆ ವ್ಯಕ್ತಿ ಕಷ್ಟಪಟ್ಟು ತ್ಯಾಗ ಮಾಡುತ್ತಾರೆಂದು ಗಣಿಸಲಾಗುವುದು." (ಖುತುಬ 6-11-1953)

ಇಂದು ಲೋಕದಾದ್ಯಂತ ಇರುವ ಜಮಾಅತ್‌ಗಳು ತಹ್‌ರೀಕ್ ಜದೀದಿನ ಸಾಂಪತ್ತಿಕ ಜಿಹಾದಿನಲ್ಲಿ ಮೇಲೆ ವಿವರಿಸಿದ ತ್ಯಾಗದ ಮಟ್ಟಕ್ಕೆ ಅನುಸಾರವಾಗಿ ಚಂದಾ ಕೊಡುತ್ತಾ ಭಾಗವಹಿಸುತ್ತಿದ್ದಾರೆ. ಲಂಡನ್‌ನಲ್ಲಿರುವ ಜಮಾಅತಿನ ಇಂಡಿಯಾ ಡೆಸ್ಕ್–ಇದರ ಕಾರ್ಯನಿರ್ವಾಹಕರ (ಇನ್‌ಚಾರ್ಜ್ ಇಂಡಿಯಾ ಡೆಸ್ಕ್ ಲಂಡನ್) ಮಾರ್ಗದರ್ಶನ ಪ್ರಕಾರ ಭಾರತದ ಅಹ್ಮದಿಯಾ ಜಮಾಅತಿನ ನಿಷ್ಠಾವಂತರನ್ನು ಕೋರಲಾಗುವುದೇನೆಂದರೆ, ಅವರು ಹಝ್‌ರತ್ ಮುಸ್ಲಿಹ್ ಮೌಊದ್[ರ] ಅವರ ಉಪದೇಶಗಳಿಗನುಸಾರವಾಗಿ ತಮ್ಮ ವಾಗ್ದಾನಗಳನ್ನು ಕನಿಷ್ಠ ಅವರು ವಿವರಿಸಿದ "ಉತ್ತಮ ತ್ಯಾಗ ಮಾಡಿದರು" ಎಂದು ಗಣಿಸಲ್ಪಡುವ ಶ್ರೇಣಿಗೆ ಸೇರಲು ಆವಶ್ಯಕವಾಗಿ ಪ್ರಯತ್ನಿಸಬೇಕು.

ಅಲ್ಲಾಹನು ಜಮಾಅತಿನ ಎಲ್ಲ ಶ್ರದ್ಧಾಳುಗಳಿಗೆ ಅದರಲ್ಲಿ ಮುಂದೆ ಸಾಗಲು ಸೌಭಾಗ್ಯ ನೀಡಲಿ ಮತ್ತು ಅವರನ್ನು ಅಪರಿಮಿತ ದೈವಿಕ ಅನುಗ್ರಹಗಳಿಗೆ ವಾರೀಸುದಾರರನ್ನಾಗಿ ಮಾಡಲಿ –ಆಮೀನ್.

**ಖುರ್‌ಶೀದ್ ಅಹ್ಮದ್ ಅನ್ವರ್**
ವಕೀಲುಲ್ ಮಾಲ್ ತಹ್‌ರೀಕ್ ಜದೀದ್, ಖಾದಿಯಾನ್

# READ AHMADIYYA PERIOICALS

| | |
|---|---|
| **THE REVIEW OF RELIGIONS** | **Annual Subscription : Rs. 150/-**<br>Write to : The Chairman<br>THE REVIEW OF RELIGIONS<br>Qadian - 143516 (Punjab) |
| **BADR**<br>**Urdu Weekly** | **Annual Subscription : Rs. 300/-**<br>Write to : The Manager<br>The BADR Weekly<br>Qadian - 143516 (Punjab) |
| **ANSARULLAH**<br>**Urdu & Hindi Bi-Monthly** | **Annual Subscription : Rs. 100/-**<br>Write to : The Manager<br>ANSARULLAH<br>Qadian - 143516 (Punjab) |
| **MISHKAT**<br>**Urdu Monthly** | **Annual Subscription : Rs. 120/-**<br>Write to : The Manager<br>MISHKAT<br>Qadian - 143516 (Punjab) |
| **SATHYADOOTHAN**<br>**Malayalam Monthly** | **Annual Subscription : Rs. 150/-**<br>Write to : The Manager<br>The SATHYADOOTHAN Monthly<br>G.H. Road, Kozhikode (Kerala) |
| **SATHYAMITHRAM**<br>**Malayalam Bi-Monthly** | **Annual Subscription : Rs. 60/-**<br>Write to : The Manager<br>SATHYAMITHRAM<br>Thavakkara, Kannur (Kerala) |

**ನಿಧನ ವಾರ್ತೆ**

## ಮೌಲವಿ ಅಬ್ದುರ್ರಹ್ಮಾನ್ ಪಡನ



ಧರ್ಮಪಂಡಿತರೂ ಗ್ರಂಥಕರ್ತರೂ ಆಗಿದ್ದ ಮೌಲವಿ ಅಬ್ದುರ್ರಹ್ಮಾನ್ ಪಡನ ಸಾಹೇಬ್ ಕಳೆದ ನವಂಬರ್ 5 ರಂದು ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.")

ಕೇರಳದ ಹಲವೆಡೆಗಳಲ್ಲಿ ವಿವಿಧ ಜುಮಾ ಮಸೀದಿಗಳಲ್ಲಿ ಖತೀಬಾಗಿ ಮತ್ತು ಅರಬಿಕ್ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದ ಅವರು ಸುಮಾರು 15 ವರ್ಷಗಳ ಮೊದಲು ಅಹ್ಮದಿಯಾ ಜಮಾಅತಿಗೆ ಸೇರಿದರು. ಅನಂತರ ವಿವಿಧ ಅಹ್ಮದಿಯಾ ಘಟಕಗಳಲ್ಲಿ ಮುಅಲ್ಲಿಮಾಗಿ ಸೇವೆ ಸಲ್ಲಿಸಿದ್ದರು.

ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತನ್ನು ದಯಪಾಲಿಸಲಿ. – ಆಮೀನ್.

# ಧರ್ಮದ ನಾಮದಲ್ಲಿ ರಕ್ತಪಾತ

ಅಧ್ಯಾಯ – 8

## ಜಗತ್ತಿಗೆ ಅನುಗ್ರಹದಾಯಕರು

– ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್

> "ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರ ವಿರುದ್ಧ ನಿಜವಾದ ಅಥವಾ ಊಹಿಸಲಾದ ಅಪಮಾನದಿಂದ ಮುಸ್ಲಿಮರು ಪ್ರಚೋದಿತರಾಗುವ ಹಾಗೆ ಬೇರೆ ಯಾವುದರಿಂಲೂ ಪ್ರಚೋದಿತರಾಗುವುದಿಲ್ಲವೆಂದು ಅವರು (ಮುಸ್ಲಿಂ ಮತಪಂಡಿತು) ಅರಿತುಕೊಳ್ಳುವ ಚಾತುರ್ಯ ಹೊಂದಿದವರಾಗಿದ್ದರು. ಆದುದರಿಂದ ತಮ್ಮ ಚಟುವಟಿಕೆಗಳು ಪ್ರವಾದಿಯವರ(ಸ) ಪ್ರವಾದಿತ್ವವನ್ನು ಸಂರಕ್ಷಿಸಿಡಲು ಮತ್ತು ಪ್ರವಾದಿಯವರ ಗೌರವಕ್ಕೆ ಚ್ಯುತಿಯನ್ನುಂಟುಮಾಡುವ ಆಕ್ರಮಣಗಳನ್ನು ತಡೆಗಟ್ಟಲಿಕ್ಕಾಗಿದೆ ಎಂದು ಅವರು ಘೋಷಿಸಲು ತೊಡಗಿದರು. ಅವರ ಉಪಾಯ ಫಲಿಸಿತು ಮತ್ತು ಅವರು ಏರ್ಪಡಿಸಿದ ಸಭೆಗಳಿಗೆ ಬಹಳ ಹೆಚ್ಚು ಹೆಚ್ಚಾಗಿ ಶ್ರೋತೃಗಳು ಆಕರ್ಷಿಸಲ್ಪಟ್ಟರು. ಅಹ್‌ರಾರಿ ಪಕ್ಷದ ಕೆಲವು ಭಾಷಣಗಾರರು ಶಬ್ದಗಳನ್ನು ಮತ್ತು ನುಡಿಗಟ್ಟನ್ನು ಆಯ್ಕೆ ಮಾಡುವುದರಲ್ಲಿ ಮತ್ತು ಉದಾಹರಣೆಗಳನ್ನೂ ಆಲಂಕಾರಿಕ ಪ್ರಯೋಗಗಳನ್ನೂ ತಮ್ಮ ಭಾಷಣದಲ್ಲಿ ಸೇರಿಸಲು ಹಾಗೂ ಎಷ್ಟು ಕೀಳುಮಟ್ಟದ್ದಾಗಿದ್ದರೂ ಹಾಸ್ಯಭರಿತವನ್ನಾಗಿ ಮಾಡುವುದರಲ್ಲಿ ನಿಷ್ಣಾತರಾಗಿದ್ದರು. ಆದುದರಿಂದ ಅವರ ಭಾಷಣಗಳು ಬೇಗನೆ ಜನಪ್ರೀತಿಗಳಿಸಲು ಪ್ರಾರಂಭಿಸಿತು."
>
> ಜಸ್ಟಿಸ್ ಮುಹಮ್ಮದ್ ಮುನೀರ್
> (ಮುನೀರ್ ಕಮಿಶನ್ ರಿಪೋರ್ಟ್ – ಪುಟ 258)

ದೇವನಿಂದ ನೇಮಿಸಲ್ಪಟ್ಟ ಪ್ರವಾದಿಯನ್ನು ನಿಂದಿಸುವುದು ಪ್ರವಾದಿತ್ವವು ಪ್ರಾರಂಭವಾದಾಗಲೇ ತೊಡಗಿದುದಾಗಿದೆ. ಮುಹಮ್ಮದ್ ಪೈಗಂಬರರು(ಸ) ಸಹ ಇದಕ್ಕೆ ಹೊರತಾಗಲಿಲ್ಲ. ಅವರನ್ನು ಮಕ್ಕದ ಜೀವಿತಕಾಲದಲ್ಲಿ ಮಾತ್ರವಲ್ಲ, ಮದೀನದಲ್ಲಿ ಶಿಕ್ಷೆ ನೀಡುವ ಅಧಿಕಾರ ಅವರು ಗಳಿಸಿದಾಗಲೂ ಅವರನ್ನು ನಿಂದಿಸಲಾಯಿತು. ಮದೀನದ ಯಹೂದಿಯರು ಹರಿತವಾದ ನಾಲಗೆಯನ್ನು ಮತ್ತು ವಿಡಂಬನೆಯ ರೋಗಪೀಡಿತ ಭಾವನೆ ಹೊಂದಿದ್ದರು. ಪ್ರವಾದಿಯವರನ್ನು(ಸ) ಮೂದಲಿಸಲು ದೊರೆತ ಅವಕಾಶಗಳನ್ನು ಅವರು ಬಿಟ್ಟುಬಿಡುತ್ತಿರಲಿಲ್ಲ.

ಪ್ರವಾದಿಯವರು(ಸ) ಮದೀನಕ್ಕೆ ಹೋದ ನಂತರ ಮಕ್ಕದ ಖುರೈಶಿಗಳು ಈ ಯಹೂದಿಯರೊಂದಿಗೆ ಇಸ್ಲಾಮಿನ ಅಭಿವೃದ್ಧಿಯನ್ನು ತಡೆಯಲು ಸೇರಿದರು. ಮದೀನದಲ್ಲಿ ಕಪಟ ವಿಶ್ವಾಸಿಗಳು ಸಹ ಇದ್ದರು. ಅವರು ಒಳಸಂಚುಗಾರರಾಗಿದ್ದರು. ಕಲಹ ಮತ್ತು ಯುದ್ಧದೊಂದಿಗೆ ಪ್ರವಾದಿಯವರ ಶತ್ರುಗಳು ಅಪಪ್ರಚಾರಕ್ಕಾಗಿ ಸಂಪರ್ಕ ಮಾಧ್ಯಮಗಳನ್ನೂ ಬಳಸುತ್ತಿದ್ದರು. ಪ್ರಚಾರಕರಾದ ಕವಿಗಳನ್ನು ಮ್ಯಾಕ್ಸಿಮ್ ರೋಡಿನ್‌ಸನ್ "ಆ ಕಾಲದ ಪತ್ರಕರ್ತರು" ಎಂದು ವರ್ಣಿಸಿದ್ದಾರೆ. ಕಾರ್ ಮಿಕೇಲ್ ಅವರನ್ನು "ಯುದ್ಧಗಳನ್ನು ಹೊತ್ತಿಸುವವರು" ಎಂದು ಹೇಳಿರುತ್ತಾರೆ. ಆ ಕವಿಗಳು ಮದೀನದ ಮುಸ್ಲಿಮರನ್ನು "ಪರದೇಶಿಗೆ ಶರಣಾಗಿ ತಮ್ಮನ್ನೇ ತಾವು ಅಪಮಾನಿಸಿದವರು" ಎಂದು ಆರೋಪಿಸುತ್ತಿದ್ದರು.

ಅಬೂ ಆಫಾಕ್, ಖೈಲ ಪುತ್ರರನ್ನು (ಔಸ್ ಮತ್ತು ಖಝ್‌ರಜ್ ಗೋತ್ರದ ಜನರನ್ನು) ಮೂದಲಿಸಿ ಹೀಗೆ ಹಾಡಿದನು:

"ನಾನು ಬಹಳ ಕಾಲ ಜೀವಿಸಿದೆನು. ಆದರೆ ಖೈಲ ಸಂತತಿಗಳು (ಔಸ್ ಮತ್ತು ಖಝ್‌ರಜ್ ಗೋತ್ರಗಳು) ಒಗ್ಗಟ್ಟಿನಿಂದ ತಮ್ಮ ಮಿತ್ರರನ್ನು ಸಹಾಯಕ್ಕೆ ಕರೆದಾಗ ಸಹಾಯಕ್ಕೆ ಧಾವಿಸುವ ರೀತಿಯಲ್ಲಿ ಬೇರೆ ಯಾರನ್ನೂ ಕಂಡಿಲ್ಲ. ಅವರು ಸೋಲನ್ನೊಪ್ಪುವ ಮೊದಲು ಪರ್ವತಗಳು ಪುಡಿಪುಡಿಯಾಗುವುವು. ಆದರೆ ಈಗ ಒಬ್ಬ ಸವಾರನು ಬಂದು ಅವರಲ್ಲಿ ಒಡಕನ್ನುಂಟು ಮಾಡಿದ್ದಾನೆ. ಅವನು ಹೇಳುತ್ತಾನೆ: 'ಇದನ್ನು ಅನುಮತಿಸಲಾಗಿದೆ; ಇದನ್ನು ನಿಷಿದ್ಧಗೊಳಿಸಲಾಗಿದೆ.' ಅವನು ಎಲ್ಲ ವಸ್ತುಗಳನ್ನು ಹೀಗೆ ವಿಭಜಿಸುತ್ತಾನೆ. ನೀವು ಶಕ್ತಿ ಸಾಮರ್ಥ್ಯಗಳಲ್ಲಿ ನಂಬಿಕೆ ಹೊಂದಿರುವಿರಾದರೆ ನೀವು ತುಬ್ಬ ಅರಸನಿಗೆ ಏಕೆ ವಿಧೇಯರಾಗಲಿಲ್ಲ?"

ಅಬೂ ಆಫಾಕ್ ಉದ್ದೇಶಿಸಿದುದು ಹೀಗೆ: ತುಬ್ಬ ದಕ್ಷಿಣ ಅರಬಸ್ಥಾನದ ಪ್ರಸಿದ್ಧ ದೊರೆಯಾಗಿದ್ದನು. ಹೀಗಿದ್ದರೂ ನೀವು ಅವನನ್ನು ವಿರೋಧಿಸಿದಿರಿ. ಈಗ ನಿಮಗೇನಾಗಿದೆ? ನೀವು ಮಕ್ಕದ ಒಬ್ಬ ನಿರಾಶ್ರಿತನ ವಾದಗಳನ್ನು ಅಂಗೀಕರಿಸಿದಿರಿ."

ಮಲಿಕ್ ಬಿನ್ ಸೈಫನ ಬದಲಾಗಿ ಕಅಬ್ ಮದೀನದ ಯಹೂದಿಯರ ನಾಯಕನಾಗಿ ಚುನಾಯಿತನಾದಾಗ ಅವನು ಬದ್ರ್ ಯುದ್ಧದಲ್ಲಿ ಖುರೈಶಿಗಳ ಸೋಲಿನ ಬಗ್ಗೆ ಶೋಕದಿಂದ ಹೀಗೆ ಒಂದು ಪದ್ಯದಲ್ಲಿ ಹೇಳಿದನು:

"ಅರ್ಥ ಶೂನ್ಯವಾದ ಮಾತುಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಲು ನೀವು ನಿಮ್ಮ ತಿಳಿಗೇಡಿಯನ್ನು ಹೊರಗೋಡಿಸಿರಿ. ನನ್ನನ್ನು ಪ್ರಾಮಾಣಿಕವಾಗಿ ಪ್ರೀತಿಸಿದವರ ಅಗಲಿಕೆಗಾಗಿ ನಾನು ಕಣ್ಣೀರು ಸುರಿಸಿದುದಕ್ಕಾಗಿ ನೀವು ನನ್ನನ್ನು ಮೂದಲಿಸುತ್ತಿರುವಿರೇನು? ಮಕ್ಕದ ಭವನಗಳ ಶೋಭೆಯಾಗಿದ್ದ ಜನರ ಅರ್ಹತೆಯನ್ನು ನೆನಪಿಸುತ್ತಾ ನಾನು ಜೀವಿಸಿರುವ ತನಕ ಕಣ್ಣೀರು ಸುರಿಸುವೆನು."

ಈ ಹೀನ ಮತ್ತು ನಿಂದೆಯ ಅಭಿಯಾನದ ಉದ್ದೇಶ ಮದೀನದ ಮುಸ್ಲಿಮರ ಮತ್ತು ವಲಸೆಗಾರರಾಗಿ ಮದೀನಕ್ಕೆ ಬಂದ ಮಕ್ಕದ ಮುಸ್ಲಿಮರ ಮಧ್ಯೆ ಒಡಕಿನ ಬೀಜವನ್ನು ಬಿತ್ತುವುದಾಗಿತ್ತು. ಔಸ್ ಮತ್ತು ಖಝ್‌ರಜ್ ಮಧ್ಯೆ ಜಗಳವುಂಟಾಗುವಂತೆ ಮಾಡುವುದೂ ಅವರ ಉದ್ದೇಶವಾಗಿತ್ತು. ಅವರ ಚಳುವಳಿ ಉದ್ದೇಶಿತ ಗುರಿಯನ್ನು ಸಾಧಿಸಿದ ಹಾಗೆ ಒಂದು ಸಂಭವದಿಂದ ಸ್ಪಷ್ಟವಾಯಿತು. ಬನೂ ಖಾಯಿನ್‌ಖಾ ಗೋತ್ರದ ಯಹೂದಿ ಶಾಸ್‌ಬಿನ್‌ಖೈಸ್, ಒಬ್ಬ ಯಹೂದಿ ಯುವಕನಿಗೆ ಬೂಅತ್ ಯುದ್ಧದ ಕಾಲದಲ್ಲಿ ರಚಿಸಿಲಾದ ಪದ್ಯಗಳನ್ನು ಹಾಡಲು ಆಜ್ಞಾಪಿಸಿದನು. ಔಸ್ ಮತ್ತು ಖಝ್‌ರಜ್ ಗೋತ್ರದ ಮುಸ್ಲಿಮರು ಒಗ್ಗೂಡಿದ್ದ ಒಂದು ಸಭೆಯಲ್ಲಿ ಈ ಪದ್ಯಗಳನ್ನು ಹಾಡಲಾಯಿತು. ಆಗ ಎರಡು ಗೋತ್ರದ ಜನರು ಕೋಪಾವಿಷ್ಟರಾಗಿ ಒಂದು ಗೋತ್ರದವರು ಇನ್ನೊಂದು ಗೋತ್ರಕ್ಕೆ ಪಂಥಾಹ್ವಾನ ನೀಡಿದರು. ಅವರು ಹೇಳಿದರು: "ನೀವು ಬಯಸುವುದಾದರೆ ನಾವು ಪುನಃ ಹಾಗೆಯೇ

ಮಾಡುವೆವು." ಆ ಎರಡು ಗೋತ್ರಗಳು ಪರಸ್ಪರ ಹೇಳಿದರು: "ನಾವು ಮಾಡುವೆವು. ನಿಮ್ಮನ್ನು ಎದುರಿಸುವುದು ಹೊರಗಡೆ-ಅಗ್ನಿಪರ್ವತದ ವಲಯದಲ್ಲಿ. ಆಯುಧ ಎತ್ತಿರಿ, ಆಯುಧ ಎತ್ತಿರಿ."

ಈ ಘಟನೆಯ ಸಮಾಚಾರ ಪ್ರವಾದಿಯವರಿಗೆ ತಿಳಿದಾಗ ಅವರು ಕೂಡಲೆ ಅಲ್ಲಿಗೆ ಹೋದರು. ಅಲ್ಲಿ ಔಸ್ ಮತ್ತು ಖಝ್‌ರಿಜ್ ಗೋತ್ರದ ಜನರೊಡನೆ ಹೇಳಿದರು:

"ಓ ಮುಸ್ಲಿಮರೇ, ಅಲ್ಲಾಹನನ್ನು ಸ್ಮರಿಸಿರಿ; ಅಲ್ಲಾಹನನ್ನು ಸ್ಮರಿಸಿರಿ. ನಾನು ನಿಮ್ಮೊಂದಿಗೆ ಇರುವಾಗಲೇ ನೀವು ಬಹುದೇವಾರಾಧಕರ ಹಾಗೆ ವರ್ತಿಸುವಿರೇನು? ನಿಮ್ಮನ್ನು ಅಲ್ಲಾಹನು ಇಸ್ಲಾಮಿಗೆ ಮಾರ್ಗ ದರ್ಶನ ನೀಡಿದ ನಂತರ ಮತ್ತು ನಿಮ್ಮನ್ನು ಬಹುದೇವಾರಾಧನೆಯಿಂದ ರಕ್ಷಿಸಿ ನಿಮ್ಮನ್ನು ಗೌರವಿಸಿದ ನಂತರ ಹೀಗೆ ಮಾಡುವಿರೇನು? ನಿಮ್ಮನ್ನು ಅವಿಶ್ವಾಸದಿಂದ ರಕ್ಷಿಸಿ ನಿಮ್ಮನ್ನು ಸ್ನೇಹಿತರನ್ನಾಗಿ ಮಾಡಿದ ನಂತರ ನೀವು ಹಾಗೆ ಮಾಡುವಿರೇನು?" (ಇಬ್ನು ಹಿಶಾಮ್).

ಆ ಸಂದರ್ಭದಲ್ಲಿ ಪವಿತ್ರ ಖುರ್‌ಆನಿನ ಈ ವಚನಗಳು ಅವತೀರ್ಣವಾದುವು:

"ಎಲೈ ಸತ್ಯವಿಶ್ವಾಸಿಗಳೇ, ಗ್ರಂಥ ನೀಡಲ್ಪಟ್ಟವರ ಪೈಕಿ ಯಾವುದಾದರೂ ಒಂದು ಪಂಗಡವನ್ನು ನೀವು ಅನುಸರಿಸಿದರೆ, ನೀವು ಸತ್ಯವಿಶ್ವಾಸವನ್ನು ಹೊಂದಿದ ನಂತರ ಅವರು ನಿಮ್ಮನ್ನು ಅವಿಶ್ವಾಸಿಗಳನ್ನಾಗಿ ಮಾರ್ಪಡಿಸುವರು.

"ನಿಮಗೆ ಅಲ್ಲಾಹನ ವಚನ ಗಳನ್ನು ಓದಿ ಹೇಳಲಾಗುತ್ತದೆ. ಹಾಗೂ ಅವನ ಸಂದೇಶವಾಹಕ ನಿಮ್ಮ ಜೊತೆಗಿದ್ದಾರೆ. ಹಾಗಿರುವಾಗ, ನೀವು ಹೇಗೆ ಅವಿಶ್ವಾಸವನ್ನು ಹೊಂದುತ್ತೀರಿ? ಯಾವನಾದರೂ ಅಲ್ಲಾಹನನ್ನು ಬಿಗಿಯಾಗಿ ಹಿಡಿದುಕೊಂಡರೆ ಖಂಡಿತವಾಗಿಯೂ ಅವನು ಸತ್ಪಥದಲ್ಲಿ ನಡೆಸಲ್ಪಟ್ಟನು (ಎಂದು ತಿಳಿದುಕೊಳ್ಳಿರಿ).

"ಓ ಸತ್ಯವಿಶ್ವಾಸಿಗಳೇ, ಅಲ್ಲಾಹನ ಭಯವಿರಿಸಿಕೊಳ್ಳಬೇಕಾದ ರೀತಿಯಲ್ಲೇ ಅವನ ಭಯವಿರಿಸಿಕೊಳ್ಳಿರಿ. (ಅಲ್ಲಾಹನಿಗೆ) ಸಂಪೂರ್ಣ ವಿಧೇಯತೆ ತೋರಿಸುವ ಸ್ಥಿತಿಯಲ್ಲಿ ಹೊರತು ನಿಮಗೆ ಮರಣ ಬಾರದಿರಲಿ.

"ನೀವೆಲ್ಲರೂ ಒಟ್ಟು ಸೇರಿಕೊಂಡು ಅಲ್ಲಾಹನ ಪಾಶವನ್ನು ಬಿಗಿ ಯಾಗಿ ಹಿಡಿದುಕೊಳ್ಳಿರಿ; ಛಿನ್ನಭಿನ್ನರಾಗದಿರಿ. ನೀವು ಪರಸ್ಪರ ಶತ್ರು ಗಳಾಗಿದ್ದಾಗ ಅಲ್ಲಾಹನು ನಿಮಗೆ ನೀಡಿದ ಅನುಗ್ರಹಗಳನ್ನು ಸ್ಮರಿಸಿರಿ. ಅವನು ನಿಮ್ಮ ಹೃದಯಗಳನ್ನು ಅನ್ಯೋನ್ಯ ಒಂದುಗೂಡಿಸಿದ ಫಲವಾಗಿ ಅವನ ಅನುಗ್ರಹದಿಂದ ನೀವು ಪರಸ್ಪರ ಸಹೋದರರಾದಿರಿ." (3:101-104)

ಇದು ಮದೀನದಲ್ಲಿ ಉಂಟಾದ ಅಶಾಂತಿಯ ವಾತಾವರಣ ವಾಗಿತ್ತು. ಆಗ ಪ್ರವಾದಿ(ಸ) ಗಲಭೆಗೊಂದಲಗಳ ಪ್ರಚೋದಕರಾದ ಕವಿಗಳ ಪ್ರಚಾರವನ್ನು ತಡೆಯಲು ನಿರ್ಧರಿಸಿ ಅವರನ್ನು ಕೊಲ್ಲಲು ಆಜ್ಞಾಪಿಸಿದರು. ಆ ಜನರು ಶಾಂತಿ ಭಂಗ ಮಾಡುವ ಸಮಾಜದ್ರೋಹಿ ಗಳಾಗಿದ್ದರು. ಅವರನ್ನು ಕೊಂದುದು ಪ್ರವಾದಿಯವರನ್ನು(ಸ) ನಿಂದಿಸಿ ದುದಕ್ಕಾಗಿ ಎಂದು ಹೇಳುವುದು ಚರಿತ್ರೆಯ ವಾಸ್ತವಿಕಾಂಶಗಳನ್ನು ತಿರುಚುವುದಾಗಿದೆ. ಈ ಹತ್ಯೆಗಳನ್ನು ಪ್ರವಾದಿಯವರನ್ನು(ಸ) ನಿಂದಿಸುವ ಜನರನ್ನು ಮರಣದಂಡನೆಗೆ ಗುರಿಮಾಡುವುದನ್ನು ನ್ಯಾಯೀಕರಿಸುವ ಪೂರ್ವನಿದರ್ಶನಗಳೆಂದು ಉಪಯೋಗಿಸುವುದು ಉದ್ದೇಶಪೂರ್ವಕ ವಾದ ಅಪ್ರಾಮಾಣಿಕತೆಯಾಗಿದೆ ಅಥವಾ ಚರಿತ್ರೆಯ ಬಗ್ಗೆ ಇರುವ ಸಂಪೂರ್ಣ ಅಜ್ಞತೆ ಆಗಿದೆ.

ಪ್ರವಾದಿಯವರನ್ನು(ಸ) ನಿಂದಿಸುವುದನ್ನು ಸಾಂಕೇತಿಕವಾಗಿ "ಸಬ್ಬ್" ಎಂದು ಕರೆಯಲಾಗಿದೆ. ಇದು ಪವಿತ್ರ ಖುರ್‌ಆನ್ ವಿಧಿಸುವ ಶಿಕ್ಷೆಗಳಾದ ಹುದೂದ್‌ಗೆ ಒಳಪಟ್ಟಿಲ್ಲ ಮತ್ತು ಪ್ರವಾದಿಯವರ(ಸ) ನಡವಳಿಕೆ ಸಹ ಅದನ್ನು ಮರಣದಂಡನೆಗೆ ಗುರಿಪಡಿಸುವಂತಹ ಅಪರಾಧವಾಗಿ ಗಣಿಸಿಲ್ಲ. ಬೇರೆ ಅಪರಾಧಗಳೊಂದಿಗೆ ಜೊತೆ ಗೂಡಿಲ್ಲವಾದರೆ ಈ ಅಪರಾಧವು ಶಿಕ್ಷಾರ್ಹವಾಗುವುದಿಲ್ಲ. ಧರ್ಮ ತ್ಯಾಗಕ್ಕಿರುವ ಶಿಕ್ಷೆಯ ಹಾಗೆ ಪ್ರವಾದಿ ನಿಂದನೆಗೆ ಇರುವ ಶಿಕ್ಷೆ ಸಹ ಅಲ್ಲಾಹನ ಕೈಯಲ್ಲಿ ಮಾತ್ರವಿದೆ. ಅಲ್ಲಾಹನ ಮತ್ತು ಅವನ ಪ್ರವಾದಿಗಳ ಗೌರವವನ್ನು ಕಾಪಾಡಲು ಪವಿತ್ರ ಖುರ್‌ಆನ್ ಅನ್ಯರೊಂದಿಗೆ ಸೌಹಾರ್ದವನ್ನು ಉಪಯೋಗಿಸುತ್ತದೆ ಹೊರತು ಖಡ್ಗವನ್ನಲ್ಲ. ಪವಿತ್ರ ಖುರ್‌ಆನ್ ಹೀಗೆಂದಿದೆ:

"ಅಲ್ಲಾಹನ ಹೊರತು ಅವರು ಕರೆದು ಪ್ರಾರ್ಥಿಸುವವರನ್ನು ನೀವು ಹೀಯಾಳಿಸಬೇಡಿರಿ. ಆಗ ವಿರೋಧದಿಂದ ಅವರು ತಿಳುವಳಿಕೆ ಯಿಲ್ಲದೆ ಅಲ್ಲಾಹನನ್ನು ನಿಂದಿಸುವರು. ಹೀಗೆ ನಾವು ಪ್ರತಿಯೊಂದು ಸಮುದಾಯದವರಿಗೂ ಅವರ ಕೃತ್ಯವನ್ನು ಚಲೋದಾಗಿ ತೋರಿಸಿ ಕೊಟ್ಟಿದ್ದೇವೆ. ಆಮೇಲೆ ಅವರ ಪ್ರಭುವಿನ ಬಳಿಗೆಯೇ ಅವರ ಮರಳಿಕೆ ಯಾಗಿದೆ. ಆಗ ಅವರ ಕೃತ್ಯಗಳ ಬಗ್ಗೆ ಅವರಿಗೆ ಅವನು ವಿವರಿಸಿ ಕೊಡುವನು." (3:109)

ಇನ್ನೊಬ್ಬರಿಗಾಗಿ ಆದರ, ಗೌರವ, ಪ್ರೀತಿ ಮತ್ತು ಮರ್ಯಾದೆ ಹೃದಯದಿಂದ ಬರುತ್ತದೆ. ಬಲಾತ್ಕಾರವು ಬಾಯಿಗಳನ್ನು ಮುಚ್ಚಿಸ ಬಹುದು. ಅದು ಭಯಭೀತಿಯನ್ನು ಉಂಟು ಮಾಡಬಹುದು. ಆದರೆ ಅದರ ಫಲವಾಗಿ ಗೌರವಹೀನತೆ ಮತ್ತು ಆದರರಾಹಿತ್ಯ ತಲೆದೋರುವುವು. ಆದುದರಿಂದ ಹೃದಯಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್ ಸಕಾರಾತ್ಮಕವಾದ ನಿಲುವನ್ನು ಹೊಂದಿದೆ.

ಪ್ರವಾದಿಯವರಿಗೆ(ಸ) ಗೌರವ ಸೂಚಿಸುವ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಎಲೈ ಸತ್ಯವಿಶ್ವಾಸಿ ಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ.

"ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ಯಾರು ತೊಂದರೆ ಕೊಡುತ್ತಾರೋ, ನಿಶ್ಚಯವಾಗಿಯೂ ಅವರನ್ನು ಅಲ್ಲಾಹನು ಇಹ ದಲ್ಲಿಯೂ ಪರದಲ್ಲಿಯೂ ಶಪಿಸಿದ್ದಾನೆ. ಅವರಿಗೆ ಅಪಮಾನಕರವಾದ ಶಿಕ್ಷೆಯನ್ನು ಅವನು ಸಿದ್ಧಪಡಿಸಿಟ್ಟಿದ್ದಾನೆ.

"ಸತ್ಯವಿಶ್ವಾಸಿಗಳನ್ನೂ ಸತ್ಯವಿಶ್ವಾಸಿನಿಯರನ್ನೂ ಅವರು ಯಾವುದೇ ತಪ್ಪನ್ನು ಮಾಡದಿರುವಾಗ (ಅವರನ್ನು) ತೊಂದರೆಗೊಳಪಡಿಸುವವರು, ದಿಟವಾಗಿಯೂ ಅಂತಹವರು ಸುಳ್ಳನ್ನೂ ಸ್ಪಷ್ಟವಾದ ಪಾಪವನ್ನೂ ಹೊತ್ತುಕೊಂಡಿರುವರು." (33:57-59)

ಪವಿತ್ರ ಖುರ್‌ಆನ್ ಪ್ರವಾದಿ ನಿಂದೆ ಅಥವಾ "ಸಬ್ಬ್" ಕುರಿತು ಸ್ಪಷ್ಟವಾಗಿ ಹೇಳಿದೆ. ಮುಸ್ಲಿಮರು ಮಿಥ್ಯದೇವರುಗಳನ್ನು ಹೀಯಾಳಿಸ ಬಾರದೆಂದು ಆಜ್ಞಾಪಿಸಲಾಗಿದೆ. ಪ್ರವಾದಿಯವರಿಗೆ(ಸ) ಅಪಮಾನ ಮಾಡುವವರಿಗೆ ಪವಿತ್ರ ಖುರ್‌ಆನ್ ಶಿಕ್ಷೆ ವಿಧಿಸಿಲ್ಲ – ಅಂತಹ ಜನರಿಗೆ ಅಲ್ಲಾಹನು ಅಪಮಾನಕರವಾದ ಶಿಕ್ಷೆಯನ್ನು ಸಿದ್ಧಪಡಿಸಿಟ್ಟಿದ್ದಾನೆ.

ಅತ್ಯುತ್ಕೃಷ್ಟ ಮಾದರಿ ಪುರುಷರಾಗಿದ್ದ ಪ್ರವಾದಿ(ಸ) ತನ್ನನ್ನು ನಿಂದಿಸಿದವರೊಂದಿಗೆ ವರ್ತಿಸಿದುದು ಹೇಗೆಂದು ನೋಡುವ:

ಕಪಟವಿಶ್ವಾಸಿಗಳ ನಾಯಕನಾದ ಅಬ್ದುಲ್ಲಾ ಬಿನ್ ಉಬಯ್ಯಗೆ ಸಂಬಂಧಿಸಿದ ಒಂದು ಘಟನೆ ಹೀಗಿದೆ: ಮುಸ್ತಲಿಖ್ ಯುದ್ಧದ

ನಂತರ (ಹಿಜರಿ ವರ್ಷ 6/ಕ್ರಿ.ಶ. 737) ಪ್ರವಾದಿಯವರು[ಸ] ಅಲ್‌ಮುರೈಸಿ ಎಂಬ ನೀರಿರುವ ತಂಗುದಾಣದಲ್ಲಿ ತಂಗಿರುವಾಗ ಮುಹಾಜಿರ್ (ಮಕ್ಕದಿಂದ ವಲಸೆ ಬಂದವರು) ಮತ್ತು ಅನ್‌ಸಾರ್ (ಮದೀನ ನಿವಾಸಿಗಳು) ಮಧ್ಯೆ ಒಂದು ಜಗಳ ತಲೆದೋರಿತು. ಉಮರ್‌ರವರ[ರ] ಸೇವಕ ಜಿಹ್‌ಜಬಿನ್ ಮಸ್‌ಊದ್ ಮತ್ತು ಅನ್‌ಸಾರ್‌ಗಳ ಸ್ನೇಹಿತ ಸಿನಾನ್ ಬಿನ್ ವಬರ್‌ಲ್ ಜುಹಾನಿ ಮಧ್ಯೆ ಹೊಡೆದಾಟ ಪ್ರಾರಂಭವಾಯಿತು. ಇಬ್ನು ಇಸ್‌ಹಾಖ್ ಈ ಬಗ್ಗೆ ಹೀಗೆ ಬರೆಯುತ್ತಾರೆ:

"ಜುಹಾನಿ ಕೂಗಿದನು: 'ಅನ್‌ಸಾರ್‌ಗಳೇ ಬನ್ನಿರಿ'. ಜಹ್‌ಜ ಕೂಗಿದನು: 'ಮುಹಾಜಿರ್‌ಗಳೇ ಬನ್ನಿರಿ'. ಅಬ್ದುಲ್ಲಾ ಬಿನ್ ಉಬಯ್ಯ್ ಬಿನ್ ಸಲೂಲ್ ಈ ಸಂಭವದಿಂದ ಕೋಪಗೊಂಡನು. ಅವನ ಜೊತೆ ಝೈದ್ ಬಿನ್ ಅರ್‌ಖಮ್ ಎಂಬ ಹುಡುಗನು ಮತ್ತು ಬೇರೆ ಕೆಲವರಿದ್ದರು. ಅಬ್ದುಲ್ಲಾ ಹೀಗೆ ಹೇಳಿದನು: "ನಿಜವಾಗಿಯೂ ಅವರು ಹೀಗೆ ಮಾಡಿದರೇ? ಅವರು ನಮ್ಮ ಆದ್ಯತೆಯನ್ನು ಪ್ರಶ್ನಿಸುತ್ತಾರೆ. ಅವರು ನಮ್ಮ ನಾಡಿನಲ್ಲಿ ನಮಗಿಂತ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ನಮ್ಮ ಮತ್ತು ಖುರೈಶಿ ಅಲೆಮಾರಿಗಳ ಸಂಬಂಧವನ್ನು ಪುರಾತನವಾದ ಈ ನಾಣ್ಣುಡಿಗಿಂತ ಹೆಚ್ಚು ಉತ್ತಮವಾಗಿ ವಿವರಿಸಲಾಗದು: 'ನಾಯಿಗೆ ಆಹಾರ ಕೊಡಿರಿ ಮತ್ತು ಅದು ನಿಮ್ಮನ್ನು ತಿಂದು ಹಾಕುವುದು.' ಅಲ್ಲಾಹನಾಣೆ ನಾವು ಮದೀನಕ್ಕೆ ಹಿಂದಿರುಗಿದಾಗ ಅತ್ಯಂತ ಗೌರವಾರ್ಹನು ಅತ್ಯಂತ ಹೀನನಾದವನನ್ನು ಹೊರಗಟ್ಟುವನು. ಅವನು ತನ್ನವರ ಬಳಿಗೆ ಹೋಗಿ ಹೇಳಿದನು: 'ಇದು ನೀವು ನಿಮಗೆಯೇ ಮಾಡಿದುದಾಗಿದೆ. ಅವರು ನಿಮ್ಮ ನಾಡನ್ನು ಸ್ವಾಧೀನಪಡಿಸಿಕೊಳ್ಳಲು ನೀವು ಅನುಮತಿ ನೀಡಿದಿರಿ. ನೀವು ನಿಮ್ಮ ಆಸ್ತಿಗಳನ್ನು ಅವರೊಂದಿಗೆ ಹಂಚಿಕೊಂಡಿರಿ. ನೀವು ಅವರಿಂದ ನಿಮ್ಮ ಆಸ್ತಿಯನ್ನು ಹಿಡಿದಿಟ್ಟು ಕೊಂಡಿದ್ದರೆ ಅವರು ಬೇರೆ ಕಡೆಗೆ ಹೋಗುತ್ತಿದ್ದರು.' ಝೈದ್ ಬಿನ್ ಅರ್‌ಖಮ್ ಈ ವಿಷಯವನ್ನು ಪ್ರವಾದಿಯವರಿಗೆ[ಸ] ವರದಿ ಮಾಡಿದನು. ಆಗ ಪ್ರವಾದಿಯವರೊಂದಿಗೆ[ಸ] ಇದ್ದ ಉಮರ್[ರ] ಹೇಳಿದರು: 'ಅವನನ್ನು ಕೊಲ್ಲಲು ಅಬ್ಬಾದ್ ಬಿನ್ ಬಿಶ್ರ್‌ನೊಂದಿಗೆ ಹೇಳು'. ಪ್ರವಾದಿಯವರು[ಸ] ಆಗ ಹೇಳಿದರು: 'ಹಾಗೆ ಮಾಡಿದರೆ ಜನರು ಹೇಳುವರು – ಮುಹಮ್ಮದ್ ತನ್ನ ಸಂಗಡಿಗರುನ್ನು ಕೊಲ್ಲುತ್ತಾನೆಂದು. ಆದುದರಿಂದ ಹಾಗೆ ಮಾಡುವುದು ಬೇಡ. ಇಲ್ಲಿಂದ ಹೊರಡಲು ಜನರಿಗೆ ಆಜ್ಞಾಪಿಸಿರಿ.' "

ಹಝ್ರತ್ ಪ್ರವಾದಿಯವರಿಗೆ[ಸ] ಈ ಘಟನೆಯಿಂದ ಬಹಳ ಆತಂಕವುಂಟಾಯಿತು. ಜುಹಾನಿಯು ಅನ್‌ಸಾರ್‌ಗಳನ್ನು ಮತ್ತು ಜಹ್‌ಜ ಮುಹಾಜಿರ್‌ಗಳನ್ನು ಕರೆದುದು ಹಿಂದಿನ ಕಾಲದ ಗೋತ್ರಯುದ್ಧಗಳಾದ ಬುಆತ್ ದಿನ ಮತ್ತು ಬಾಸೂಸ್ ಯುದ್ಧಗಳನ್ನು ನೆನಪಿಸುವಂತೆ ಮಾಡಿತು. ಆ ಯುದ್ಧಗಳು 40 ವರ್ಷಗಳ ಕಾಲ ನಡೆದಿದ್ದುವು. ಉಬಯ್ಯ್‌ನ ಮಾತುಗಳನ್ನು ಅನ್‌ಸಾರ್‌ಗಳು ಕೇಳಿ ವರ್ತಿಸಿದ್ದರೆ ಮುಹಾಜಿರ್‌ಗಳು ತಮ್ಮ ಹಿಂದಿನ ಕಾಲದ ಯುದ್ಧಗಳಿಗೆ ಮರುಳುತ್ತಿದ್ದರು. ಪರಸ್ಪರ ಹೋರಾಡುತ್ತಿದ್ದ ಅರಬಿ ಗೋತ್ರಗಳನ್ನು ಒಗ್ಗೂಡಿಸಿ ಒಂದು ಜನಾಂಗವನ್ನಾಗಿ ಮಾಡಿದ್ದ ಇಸ್ಲಾಮಿನ ಐಕ್ಯ ಸಂದೇಶವು ಎಂದೆಂದಿಗೂ ನಿಷ್ಫಲವಾಗುತ್ತಿತ್ತು. ಪ್ರವಾದಿ ಎಷ್ಟು ಆತಂಕಿತರಾದರೆಂದರೆ ಅವರು ಜನರನ್ನು ಕೂಡಲೇ ಮುಂದೆ ಸಾಗಲು ಆಜ್ಞಾಪಿಸಿದರು. ಇಬ್ನು ಇಸ್‌ಹಾಖ್ ಈ ಸಂಭವದ ಕುರಿತು ಹೀಗೆ ಹೇಳುತ್ತಾರೆ: "ಇದು ಪ್ರವಾದಿಯವರು[ಸ] ಪ್ರಯಾಣ ಹೊರಡುವಂತಹ ಕಾಲವಾಗಿರಲಿಲ್ಲ". ಈ ಘಟನೆ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

" 'ನಾವು ಮದೀನಕ್ಕೆ ಹಿಂತೆರಳಿದರೆ ಅತ್ಯಂತ ಮಹನೀಯ ವ್ಯಕ್ತಿಯೊಬ್ಬನು ಅತ್ಯಂತ ಹೀನನಾದ ಒಬ್ಬ ವ್ಯಕ್ತಿಯನ್ನು ಅಲ್ಲಿಂದ ಹೊರಕಟ್ಟುವನು' ಎಂದು ಅವರು (ಕಪಟವಿಶ್ವಾಸಿಗಳು) ಹೇಳುತ್ತಾರೆ. (ನಿಜವಾದ) ಗೌರವವಾದರೋ ಅಲ್ಲಾಹನಿಗೂ ಅವರ ಸಂದೇಶ ವಾಹಕನಿಗೂ ಸತ್ಯವಿಶ್ವಾಸಿಗಳಿಗೂ ಸಲ್ಲುತ್ತದೆ. ಆದರೆ ಕಪಟವಿಶ್ವಾಸಿಗಳು (ಅದನ್ನು) ತಿಳಿಯುವುದಿಲ್ಲ." (63:9)

ಈ ಸಂಭವದ ಕುರಿತು ಅಬ್ದುಲ್ಲಾ ಬಿನ್ ಉಬಯ್ಯ್‌ನ ಪುತ್ರನಾದ ಅಬ್ದುಲ್ಲಾ ತಿಳಿದಾಗ, ಪ್ರವಾದಿಯವರ[ಸ] ಸಮೀಪ ಹೋಗಿ ಹೀಗೆಂದರು:

"ನೀವು ನನ್ನ ತಂದೆಯನ್ನು ಕೊಲ್ಲಲು ಬಯಸುವುದಾದರೆ ಹಾಗೆ ಮಾಡಲು ನನಗೆ ಅನುಮತಿ ನೀಡಿರಿ... ನೀವು ಬೇರೆಯವರಿಗೆ ಕೊಲ್ಲಲು ಅನುಮತಿಸಿದರೆ ನನ್ನ ತಂದೆಯನ್ನು ಕೊಂದವನನ್ನು ನೋಡಿ ನಾನು ಸಹಿಸಲಾರೆನು ಮತ್ತು ನಾನು ಆತನನ್ನು ಕೊಲ್ಲುವೆನು. ಹಾಗೆ ಮಾಡಿದರೆ ಒಬ್ಬ ಅವಿಶ್ವಾಸಿಗಾಗಿ ಒಬ್ಬ ಸತ್ಯವಿಶ್ವಾಸಿಯನ್ನು ಕೊಂದಂತಾಗುವುದು ಮತ್ತು ನಾನು ಶಾಪಕ್ಕೊಳಗಾಗುವೆನು."

ಆಗ ಪ್ರವಾದಿ[ಸ] ಹೇಳಿದರು: "ನೀನು ಹಾಗೆ ಮಾಡಬೇಡ. ನಾವು ಅವರೊಂದಿಗೆ ಕರುಣೆಯಿಂದ ವರ್ತಿಸೋಣ ಮತ್ತು ಅವರು ನಮ್ಮ ಜೊತೆಗಿರುವಷ್ಟು ಕಾಲ ಅವರೊಂದಿಗೆ ಸೌಹಾರ್ದದಿಂದ ಇರೋಣ." (ಇಬ್ನು ಹಿಶಾಮ್)

ಪ್ರವಾದಿ[ಸ] ಅಬ್ದುಲ್ಲಾ ಬಿನ್ ಉಬಯ್ಯ್‌ನೊಂದಿಗೆ, ಬೇರೆ ಕಪಟ ವಿಶ್ವಾಸಿಗಳೊಂದಿಗೆ ಮತ್ತು ಯಹೂದಿಯರೊಂದಿಗೆ ವರ್ತಿಸಿದ ರೀತಿಯನ್ನು ಗಮನಿಸಿದ ಮುಸ್ಲಿಮ್ ದೊರೆಗಳು ಪ್ರವಾದಿಯವರ[ಸ] ಗೌರವವನ್ನು ಕಾಪಾಡುವ ಪ್ರಕ್ರಿಯೆಯಲ್ಲಿ ಸುಳ್ಳು ಹುತಾತ್ಮರನ್ನು ಸೃಷ್ಟಿಸಲು ನಿರಾಸಕ್ತರಾಗಿದ್ದರು. ಸ್ಪೈನಿನ ಕೊರ್ಡೋವದಲ್ಲಿ ಕ್ರಿ.ಶ. 850-859ರ ಕಾಲದಲ್ಲಿ ಮತಾಂಧರಾದ ಕ್ರೈಸ್ತರ ಒಂದು ಗುಂಪು ಯೂಲೋಜಿಯಸ್ ಎಂಬವನ ನಾಯಕತ್ವದಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಗುಂಪಿನ ಜನರು ಬಹಿರಂಗವಾಗಿ ಪ್ರವಾದಿಯವರನ್ನು[ಸ] ನಿಂದಿಸಿ ಮುಸ್ಲಿಮರಿಂದ ಕೊಲ್ಲಲ್ಪಟ್ಟು ಹುತಾತ್ಮರಾಗಲು ಬಯಸಿದ್ದರು. ಕೊರ್ಡೋವದ ಖಾಝಿ ಅವರ ಈ ಉಪಾಯವನ್ನು ಸಾಧಿಸಲು ಬಿಡಲಿಲ್ಲ. ಅವರನ್ನು ಸೆರೆಮನೆಗೆ ತಳ್ಳಲಾಯಿತು. ವಿಲ್‌ಡ್ಯುರಾಂಟ್ ಇಂತಹ ಒಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ:

"ಕೊರ್ಡೋವದ ಇಸಾಕ್ ಎಂಬ ಒಬ್ಬ ಪಾದ್ರಿ ಖಾಝಿಯ ಹತ್ತಿರ ಹೋಗಿ ಮುಸ್ಲಿಮನಾಗುವ ಇಚ್ಛೆಯನ್ನು ಸೂಚಿಸಿದನು. ಖಾಝಿಯವರು ಸಂತೋಷಗೊಂಡು ಇಸ್ಲಾಮಿನ ಉಪದೇಶಗಳನ್ನು ವಿವರಿಸುತ್ತಿದ್ದಾಗ ಪಾದ್ರಿ ಮಧ್ಯದಲ್ಲಿ ಅವರನ್ನು ತಡೆದು ಹೇಳಿದನು: "ನಿಮ್ಮ ಪ್ರವಾದಿ ಸುಳ್ಳು ಹೇಳಿ ನಿಮ್ಮನ್ನು ವಂಚಿಸಿದ್ದಾರೆ. ತನ್ನ ಜೊತೆ ಇಷ್ಟೆಲ್ಲಾ ಪಾಪಿಗಳನ್ನು ನರಕಕ್ಕೆ ಕೊಂಡೊಯ್ದ ಅವರ ಮೇಲೆ ಶಾಪ ಉಂಟಾಗಲಿ." ಖಾಝಿ ಆತನ ಮಾತಿನ ಬಗ್ಗೆ ತನ್ನ ವಿರೋಧ ಸೂಚಿಸಿ ಹೀಗೆ ಹೇಳಿದರು: ನೀನು ಮದ್ಯಪಾನ ಮಾಡಿರುವಿಯೋ? ಪಾದರಿ ಉತ್ತರ ಹೇಳಿದನು: "ನಾನು ನನ್ನ ಬುದ್ಧಿಯೊಂದಿಗೆ ಸರಿಯಾಗಿದ್ದೇನೆ. ನನ್ನನ್ನು ಮರಣದಂಡನೆಗೆ ಗುರಿಪಡಿಸಿರಿ". ಖಾಝಿ ಅವನನ್ನು ಸೆರೆಮನೆಗೆ ಹಾಕಿದರು. ಅವರು ಅಂದಿನ ದೊರೆ ದ್ವಿತೀಯ ಅಬ್ದುರ್ರಹ್ಮಾನರ ಅನುಮತಿ ಕೇಳಿದರು: ಅವನನ್ನು ಹುಚ್ಚನೆಂದು ಬಿಟ್ಟುಬಿಡಲಿಕ್ಕಾಗಿ." (Will Durant: The Age of Faith, Page 301)

ಸುಲ್ತಾನ್ ಸುಲೈಮನ್ (ದಿ ಮ್ಯಾಗ್ನಿಫಿಸೆಂಟ್) ಒಟ್ಟೋಮನ್ ಸಾಮ್ರಾಜ್ಯದ ಚಕ್ರವರ್ತಿಯಾಗಿದ್ದಾಗ ಶೈಖುಲ್ ಇಸ್ಲಾಮ್ ಇಬುಸ್ಸೂದ್ ಎಫೆಂಡಿ ಎಂಬ ಮುಖ್ಯನ್ಯಾಯಧೀಶರು ಪ್ರವಾದಿಯವರನ್ನು ಬಹಿರಂಗವಾಗಿ ನಿಂದಿಸುವ ಚಟ ಹೊಂದಿದವರನ್ನು ಮಾತ್ರ ಮರಣ

ದಂಡನೆಗೆ ಗುರಿಪಡಿಸಿದ್ದರು. ಶೈಖುಲ್ ಇಸ್ಲಾಮ್ ಮರಣದಂಡನೆಯನ್ನು ಹಗುರವಾಗಿ ಭಾವಿಸಿ ಜಾರಿಗೊಳಿಸಬಾರದೆಂಬ ನಿಲುವನ್ನು ಹೊಂದಿದ್ದರು. ಅವರು ಕ್ಷುಲ್ಲಕ ಮತ್ತು ಅಸೂಯೆಭರಿತ ವ್ಯಾಜ್ಯ ಹೂಡುವುದನ್ನು ನಿವಾರಿಸಲು ಆಶಿಸುತ್ತಿದ್ದರು. ಕೇವಲ ಒಬ್ಬಿಬ್ಬರ ಸಾಕ್ಷ್ಯ ಮೂಲಕ ಒಬ್ಬನನ್ನು, ನಿಂದಿಸುವ ಚಟಹೊಂದಿದವನು ಎಂದು ತೀರ್ಪು ನೀಡಬಾರದೆಂದು ಅವರು ಹೇಳಿದ್ದರು. ಅಪರಾಧಿಯ ಅಪರಾಧದ ಕುರಿತು ನಿಷ್ಪಕ್ಷಮತಿಗಳಾದ ಮುಸ್ಲಿಮರು ಸಾಕ್ಷ್ಯನುಡಿಯ ಬೇಕಾಗಿತ್ತು. ಅವರು ಈ ರೀತಿ ಶಿಕ್ಷೆ ವಿಧಿಸಿದರೂ ತಾನು ವಿಧಿಸುವ ಶಿಕ್ಷೆಗೆ ಪವಿತ್ರ ಖುರ್‌ಆನ್ ಮತ್ತು ಹದೀಸಿನ ಆಧಾರವಿಲ್ಲವೆಂದೂ ಪ್ರವಾದಿಯವರ(ಸ) ನಿಂದೆಗೆ ಶಿಕ್ಷಿಸಬೇಕಾದುದು ಅಲ್ಲಾಹನೆಂದೂ ಅವರಿಗೆ ತಿಳಿದಿತ್ತೆಂದು ಅವರು ಶಿಕ್ಷೆಯ ಬಗ್ಗೆ ಜಾಗರೂಕತೆ ವಹಿಸಿದುದರಿಂದ ತಿಳಿಯುತ್ತದೆ. ಅವರು ನೀಡಿದ ಶಿಕ್ಷೆ ರಾಜಕೀಯ ಒತ್ತಡದ ಕಾರಣದಿಂದಾಗಿತ್ತೆಂದು ತೋರುತ್ತದೆ. ಏಕೆಂದರೆ ಅವರು ಹೀಗೆ ಹೇಳಿದ್ದರು: "ಅವರು ತಮ್ಮ ಅವಿಶ್ವಾಸವನ್ನು ಬಹಿರಂಗಪಡಿಸಿದುದಕ್ಕಾಗಿ, ಅಂದರೆ ಮುಹಮ್ಮದ್ ಪೈಗಂಬರರ(ಸ) ಪ್ರವಾದಿತ್ವವನ್ನು ನಿರಾಕರಿಸಿದುದಕ್ಕೆ ಅವರನ್ನು ಅಪರಾಧಿಗಳೆಂದು ಗಣಿಸಲಾಗದು."

ಒಬ್ಬ ಮುಸ್ಲಿಮನ ವಿಶ್ವಾಸದ ಗುಣಮಟ್ಟವನ್ನು ಮತ್ತು ಅವನು ಪ್ರವಾದಿಯವರ(ಸ) ಬಗ್ಗೆ ಹೊಂದಿರುವ ಗೌರವವನ್ನು ಕಾನೂನಿನ ಸಾಂಕೇತಿಕ ಪದಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಇದಕ್ಕೆ ವಿಪರ್ಯಾಸವಾಗಿ ಒಬ್ಬ ಅವಿಶ್ವಾಸಿಯನ್ನು ಮುಸ್ಲಿಮನಾಗಲು ಮತ್ತು ಪ್ರವಾದಿಯವರನ್ನು(ಸ) ಗೌರವಿಸಲು ಬಲಾತ್ಕಾರ ಮಾಡಲು ಸಾಧ್ಯವಿಲ್ಲ. ಇದೇ ಕಾರಣದಿಂದ ದೇವನು ಧರ್ಮತ್ಯಾಗಕ್ಕೆ ಮತ್ತು ಪ್ರವಾದಿಯವರ(ಸ) ನಿಂದೆಗೆ ಇಹಲೋಕದಲ್ಲಿ ಶಿಕ್ಷೆ ವಿಧಿಸಿಲ್ಲ. ಅಬ್ದುಲ್ಲಾ ಬಿನ್ ಉಬಯ್ಯ್ ನಿಂದೆಯ ಮಾತುಗಳನ್ನು ತನ್ನ ವಿರುದ್ಧ ಆಡಿದ್ದರೂ ಪ್ರವಾದಿ ಅವನನ್ನು ಶಿಕ್ಷಿಸಿರಲಿಲ್ಲ.

"ಧರ್ಮತ್ಯಾಗಕ್ಕೆ ಮತ್ತು ಪ್ರವಾದಿ ನಿಂದೆಗೆ ಶಿಕ್ಷೆಗಳು ಇದ್ದರೆ ಅವುಗಳನ್ನು ರಾಜಕೀಯ ಒಲವನ್ನು ಹೊಂದಿದ ಮತಪಂಡಿತರು ಸುಲಭವಾಗಿ ದುರುಪಯೋಗಪಡಿಸಲು ಸಾಧ್ಯವಿದೆ. ಅವರು ಈ ಶಿಕ್ಷೆಗಳನ್ನು ತಮ್ಮ ಲೌಕಿಕ ಉದ್ದೇಶಗಳಿಗಾಗಿ ಬಳಸಿ ಧಾರ್ಮಿಕ ನಂಬಿಕೆಗಳನ್ನು ತಮ್ಮ ಸ್ವಾರ್ಥಕ್ಕಾಗಿ ದುರುಪಯೋಗಿಸಿ ಧರ್ಮವನ್ನು ಅಧೋಗತಿಗಿಳಿಸುವರು." (Munir Commission Report, page 259)

ಈಗ ದೇವಬಂದಿ / ಅಹ್ಲೆಹದೀಸ್ ಮತಪಂಡಿತರು ಅಹ್ಮದಿಯರ ಮೇಲೆ ಪ್ರವಾದಿ ನಿಂದೆಯ ದೋಷಾರೋಪ ಹೊರಿಸುತ್ತಾ ಇದ್ದಾರೆ. ಹಾಗೆ ಮಾಡಿ ಅವರು ತಮ್ಮದೇ ನಾಶಕ್ಕೆ ಆವಶ್ಯಕವಾದ ಮಾರ್ಗಗಳನ್ನು ಸೃಷ್ಟಿಸಿರುವರೆಂಬುದನ್ನು ಅವರು ಮನವರಿಕೆ ಮಾಡಿಕೊಂಡಿಲ್ಲ. ಭಾರತ ಪಾಕಿಸ್ತಾನ ದೇಶಗಳಲ್ಲಿ, ಟರ್ಕಿಯಲ್ಲಿ ಮತ್ತು ಅನೇಕ ಮುಸ್ಲಿಮ್ ದೇಶಗಳಲ್ಲಿ ಸುನ್ನಿ ಮುಸ್ಲಿಮರು ಬಹುಸಂಖ್ಯಾತರಾಗಿದ್ದಾರೆ. ಅಹ್ಲೆಹದೀಸ್ / ದೇವಬಂದಿಗಳು ನಜ್‌ದ್‌ನಲ್ಲಿ ಜನಿಸಿದ ಅಬ್ದುಲ್ ವಹ್ಹಾಬ್ ಎಂಬ ಸುಧಾರಕರ ಅನುಯಾಯಿಗಳಾಗಿದ್ದು ಸುನ್ನಿಗಳಿಗೆ ಹೋಲಿಸಿ ನೋಡಿದರೆ ಸವೂದಿ ಅರೇಬಿಯಾ ಹೊರತು ಉಳಿದ ಮುಸ್ಲಿಮ್ ದೇಶಗಳಲ್ಲಿ ಅಲ್ಪಸಂಖ್ಯಾತರಾಗಿದ್ದಾರೆ. ಸುನ್ನಿಗಳು ಈ ದೇವಬಂದಿಗಳ ಕುರಿತು ಅವರು ಪ್ರವಾದಿಯವರನ್ನು(ಸ) ಕೀಳ್ಮಟ್ಟದಲ್ಲಿ ಕಾಣುತ್ತಾರೆಂದು ಆಕ್ಷೇಪಿಸುತ್ತಾರೆ. ಸುನ್ನಿಗಳು ಪ್ರವಾದಿಯವರಿಗೆ(ಸ) ಎಂತಹ ಗುಣಗಳು ಇರುವುದಾಗಿ ಹೇಳುತ್ತಾರೆಂದರೆ, ಹಾಗೆ ಹೇಳುವುದರಿಂದ ಸುನ್ನಿಗಳು ಬಹು ದೇವರಾಧನೆ ಮಾಡುವ ಕಾಫಿರಂತಾಗಿದ್ದಾರೆಂದು ದೇವಬಂದಿ/ ವಹ್ಹಾಬಿ ಉಲಮಾ ಆರೋಪಿಸುತ್ತಾರೆ. ಅವರು ಕೊಡುವ ಒಂದು ಉದಾಹರಣೆ ಇದಾಗಿದೆ: ಸುನ್ನಿಗಳ ನಂಬಿಕೆ ಪ್ರಕಾರ ಪ್ರವಾದಿಯವರ(ಸ) ಶರೀರ ಪ್ರಕಾಶದಿಂದ ತುಂಬಿತ್ತು. ಆದುದರಿಂದ ಅದು ನೆರಳು ಉಂಟು ಮಾಡುತ್ತಿರಲಿಲ್ಲ.

ಟರ್ಕಿಯ ಕವಿ ಬಸ್ರಾದ ಸುಲೈಮಾನ್ ಚಲೆಬಿ (ಕ್ರಿ.ಶ. 1410) "ಮೌಲೂದೆ ಶರೀಫ್" ಎಂಬ ಪ್ರವಾದಿ ಜನ್ಮದಿನಾಚರಣೆಯನ್ನು ಜನಪ್ರಿಯಗೊಳಿಸಿದ್ದರು. ಅದರ ಕೊನೆಯ ಘಟ್ಟದಲ್ಲಿ ಪ್ರವಾದಿಯವರ(ಸ) ಆತ್ಮ ಹಾಜರಾಗುತ್ತದೆಯೆಂದೂ ಆಗ "ಯಾ ನಬೀ ಸಲಾಮುನ್ ಅಲೈಕುಮ್" ಎಂದು ಹೇಳುತ್ತಾ ನಿಲ್ಲಬೇಕೆಂದೂ ಸುನ್ನಿಗಳು ನಂಬುತ್ತಾರೆ. ಇದೇ ರೀತಿ ಪ್ರವಾದಿಯವರ(ಸ) ಗೋರಿಯ ಮುಂದೆ ನಿಂತು ಪ್ರಾರ್ಥಿಸುವುದು, ಬೇಡಿಕೊಳ್ಳುವುದು, ಗೋರಿಯ ಸುತ್ತಲೂ ಇರುವ ಕಂಬಿ ಬೇಲಿಗಳನ್ನು ಚುಂಬಿಸುವುದು ಮತ್ತು ಬೇರೆ ಅನೇಕ ನಂಬಿಕೆಗಳು ಮತ್ತು ಕೃತ್ಯಗಳು ದೇವಬಂದಿ ದೃಷ್ಟಿಕೋನದ ಪ್ರಕಾರ ಸುನ್ನಿಗಳು ಮತ್ತು ಬರೇಲ್ವಿಗಳು ಮಾಡುವ ಶಿರ್ಕ್ (ಬಹುದೇವಾರಾಧನೆ) ಕರ್ಮಗಳಾಗಿವೆ. ವಹ್ಹಾಬಿಗಳು ಮಕ್ಕದಲ್ಲಿದ್ದ ಚಾರಿತ್ರಿಕ ಕಬರಸ್ಥಾನವಾದ ಜನ್ನತುಲ್ ಬಖೀಯನ್ನು ಧ್ವಂಸಗೊಳಿಸಿ, ಮದೀನದಲ್ಲಿ ಪ್ರವಾದಿಯವರ(ಸ) ಮಸೀದಿಯ ಮೇಲಿದ್ದ ಗುಂಬಜನ್ನು ನಾಶಮಾಡಲು ಬಯಸಿದ್ದರು. ಆದರೆ ಲೋಕದಾದ್ಯಂತ ಮುಸ್ಲಿಮರು ಪ್ರತಿಭಟಿಸಿದುದರಿಂದ ಹಾಗೆ ಮಾಡಲಿಲ್ಲ. ವಹ್ಹಾಬಿಗಳು ಮಾಡಿದ ಗೋರಿಗಳ ಧ್ವಂಸದ ಕಾರಣದಿಂದ ಸುನ್ನಿಗಳು ಅವರನ್ನು ಪ್ರವಾದಿಯವರನ್ನು(ಸ) ಗೌರವಿಸದವರು ಎಂದು ಅರೋಪಿಸುತ್ತಾರೆ. ದೇವಬಂದಿ ಮತ ಪಂಡಿತರಾದ ಮೌಲಾನ ಮುಹಮ್ಮದ್ ಖಾಸಿಮ್ ನಾನೂತ್ವಿ ಮತ್ತು ಮೌಲಾನ ಅಶ್ರಫ್ ಅಲಿ ಥಾನವಿ ಪ್ರವಾದಿಯವರ(ಸ) ಖತ್‌ಮೆನುಬುವ್ವತ್ (ಪ್ರವಾದಿತ್ವ ಸಮಾಪ್ತಿ)ಯನ್ನು ನಂಬಿರಲಿಲ್ಲವೆಂದು ಬರೇಲ್ವಿ ಮತ ಪಂಡಿತರು ಹೇಳುತ್ತಾರೆ.

ಮೌಲಾನ ಅಬ್ದುಲ್ ಮುಸ್ತಫಾ ಅಬೂ ಯಹ್‌ಯಾ ಮುಹಮ್ಮದ್ ಮುಈನುದ್ದೀನ್ ಶಾಫೀ ಖಾದ್ರಿ ರಿಝ್ವಿ ಥಾನವಿ ಹೀಗೆ ಬರೆಯುತ್ತಾರೆ:

ಓ ಮುಸ್ಲಿಮರೇ, ನೀವು ನೋಡಿರಿ, ಈ ಶಪಿಸಲ್ಪಟ್ಟ, ಅಪವಿತ್ರ ಮತ್ತು ಶೈತಾನೀ ಹೇಳಿಕೆ ಹೇಗೆ ಖತ್‌ಮೆನುಬುವ್ವತಿನ ಮೂಲಾಧಾರವನ್ನೇ ನಾಶಗೊಳಿಸಿದೆ.... ನೀವು ನೋಡಿರಿ, ಮೌಲವಿ ಖಾಸಿಮ್ ನಾನೂತ್ವಿ ಖತ್‌ಮೆನುಬುವ್ವತನ್ನು ನಂಬುವುದಿಲ್ಲ. ಆದರೆ ಮೌಲವಿ ರಶೀದ್ ಅಹ್ಮದ್, ಮೌಲವಿ ಖಲೀಲ್ ಅಹ್ಮದ್ ಮತ್ತು ಬೇರೆ ಕೆಲವು ವಹ್ಹಾಬಿ ಮತಪಂಡಿತರು, ಖತ್‌ಮೆನುಬುವ್ವತನ್ನು ತ್ಯಜಿಸುವವರು ಕಾಫಿರರಾಗಿದ್ದಾರೆ ಎಂದು ಹೇಳಿದ್ದಾರೆ." (ದೇವಬಂದಿ ಮೌಲವಿಯೋಂ ಕಾ ಈಮಾನ್)

ಬರೇಲ್ವಿ ಮತ್ತು ದೇವಬಂದಿ ಮತಪಂಡಿತರ ವಾದ ವಿವಾದಗಳು ಮರ್ಯಾದೆಯ ಅಪ್ರತಿಮ ಮಾದರಿಯಾಗಿದ್ದ ಪ್ರವಾದಿಯವರ(ಸ) ಗೌರವವನ್ನು ಕಾಪಾಡಲಿಕ್ಕಾಗಿ ಎಂದು ಹೇಳಲ್ಪಡುವುದಾದರೂ ಅವರ ವಾದವಿವಾದಗಳು ಎಂತಹ ಅಸಭ್ಯತೆಯನ್ನು ತಲಪಿದೆಯೆಂದರೆ ಅವುಗಳ ಪೈಕಿ ಅತ್ಯಂತ ಮೃದುವಾದವುಗಳು ಸಹ ಜಿಗುಪ್ಸೆ ಹುಟ್ಟಿಸುವಂತವುಗಳಾಗಿವೆ. ದೇವಬಂದಿಗಳನ್ನು ಬೆಂಬಲಿಸುವ ಶೋರಿಶ್ ಕಾಶ್ಮೀರಿ ತನ್ನ ಕಿರುಹೊತ್ತಗೆಯಾದ "ಕಾಫಿರ್ ಸಾಝ್ ಮುಲ್ಲಾ"ದಲ್ಲಿ ಹೀಗೆ ಹೇಳುತ್ತಾರೆ: "ದೇವಬಂದಿ ಮದರಸದ ಹಿರಿಯ ನಾಯಕರನ್ನು ಕಾಫಿರ್ ಎಂದು ಕರೆಯುವವನು ಸುಳ್ಳುಗಾರನಾಗಿದ್ದಾನೆ." ಅವರು ಮುಂದು ವರಿದು ಹೀಗೆ ಹೇಳುತ್ತಾರೆ: "ಬರೇಲ್ವಿ ಮತಪಂಡಿತರು ಧರ್ಮವನ್ನೂ ಶರೀಅತನ್ನೂ ತಮ್ಮ ಜೀವನಾಧಾರಕ್ಕಾಗಿ ಮಾರಾಟಮಾಡುತ್ತಾರೆ. ಅವರು ಲಾರ್ಡ್ ಕ್ಲೈವನ ಮನೆತನದ ದಾಸರಾಗಿ ಹುಟ್ಟಿದವರಾಗಿದ್ದಾರೆ. ಅವರು ಮುಸ್ಲಿಮ್ ಲೀಗ್ ಮತ್ತು ಖಾಯಿದೆ ಆಝಮ್ ಜಿನ್ನಾರವರ ಶತ್ರುಗಳಾಗಿದ್ದಾರೆ." ಬೇರೆ ಒಂದು ಕಿರುಹೊತ್ತಗೆಯಲ್ಲಿ ಅವರು ಹೀಗೆ ಬರೆದಿದ್ದಾರೆ: "ಈ

ಜನರು ಮೌಲಾನ ಹುಸೈನ್ ಅಹ್ಮದ್ ಮತ್ತು ಸಯ್ಯದ್ ಅತಾವುಲ್ಲಾ ಶಾ ಬುಖಾರಿಯವರ ಶೌಚಾಲಯದ ಇಟ್ಟಿಗೆ ಗಳಿಗಿಂತ ಕೀಳಾಗಿದ್ದಾರೆ." ಈ ನಿಂದನೆಗಳಿಗೆ ಬರೇಲ್ವಿಗಳು ನೀಡಿದ ಉತ್ತರ ಅರುಚಿಕರವಾಗಿದೆ. ಅವರು ಹೀಗೆ ಹೇಳಿದರು: "ನಮ್ಮನ್ನು ಮತ್ತು ಹಝ್ರತ್ ಪ್ರವಾದಿಯವರನ್ನು(ಸ) ಅವಮಾನ ಮಾಡುತ್ತಾ ಇರುವವನು ತನ್ನ ಜೀವಿತವನ್ನು ಸೂಳೆಗೇರಿಗಳಲ್ಲಿ ಸುತ್ತಾಡುತ್ತಾ ಕಳೆದಿರುವನು. ನೆಹ್ರೂರನ್ನು ಪ್ರವಾದಿ ಎಂದು ಕರೆದವನು ನಾವು ಪ್ರವಾದಿಯವರ(ಸ) ಶರೀಅತನ್ನು ಮಾರಾಟ ಮಾಡುತ್ತಿದ್ದೇವೆ ಎಂದು ಆರೋಪಿಸುತ್ತಾ ಇದ್ದಾನೆ." ಬರೇಲ್ವಿಗಳು ಹೀಗೆ ಬೊಬ್ಬಿಟ್ಟರು: "ಮುಹಮ್ಮದ್ ಖಾಸಿಮ್ ನಾನೂತ್ವಿಯನ್ನು ಕಾಫಿರ್ ಎಂದು ಏಕೆ ಕರೆಯಬಾರದು. ಅಶ್ರಫ್ ಅಲಿ ಥಾನವಿಯನ್ನು ಮುಸ್ಲಿಮನೆಂದು ನಾವು ಹೇಗೆ ತಾನೆ ಅಂಗೀಕರಿಸಬಲ್ಲೆವು? ಪ್ರವಾದಿತ್ವದ ಬಾಗಿಲು ತೆರೆದಿದೆ ಎಂದು ಹೇಳಿದವರು ಇವರೇ ಅಲ್ಲವೆ? ಖಾದಿಯಾನಿಗಳಿಗೆ ದಾರಿತೋರಿಸಿದವರು ಇವರೇ ಅಲ್ಲವೆ? ಮುಸ್ತಫಾರನ್ನು ಅಪಮಾನಿಸಲು ನಿಮಗೆ ಕಲಿಸಿದವರು ಯಾರು? ನಿಮಗೆ ಅವಿಶ್ವಾಸವನ್ನು ಕಲಿಸಿದವರು ಯಾರು? ನೀವು ನಿಮ್ಮ ಬಟ್ಟೆ ಬಿಚ್ಚಿರುತ್ತೀರಿ. ನಿಮಗೆ ಸಭ್ಯತೆಯಾಗಲಿ ಲಜ್ಜೆಯಾಗಲಿ ಇಲ್ಲ. ನೀವು ಖತ್‌ಮೆನುಬುವ್ವತ್ ಹೆಸರಲ್ಲಿ ಗಲಭೆ ಗೊಂದಲಗಳನ್ನು ಸೃಷ್ಟಿಸಿದ್ದೀರಿ. ನೀವು ಶಾಂತಿಯ ಹೆಸರಿನಲ್ಲಿ ಕಲಹವನ್ನು ಹರಡಿದ್ದೀರಿ. ನೀವು ನುಬುವ್ವತ್ ಹೆಸರಿನಲ್ಲಿ ಹಣ ಸಂಗ್ರಹಿಸುತ್ತಿರುವಿರಿ. ನೀವು ಪ್ರವಾದಿಯವರ(ಸ) ಹೆಸರಿನಲ್ಲಿ ಹಣವನ್ನು ಬೇಡುತ್ತಿದ್ದೀರಿ."

ಸಯ್ಯದ್ ಮುಹಮ್ಮದ್ ತನ್‌ಹಾ ಎಂಬ ಕವಿ ಒಂದು ಪದ್ಯದಲ್ಲಿ ಶೋರಿಶ್‌ರವರನ್ನು ಸಂಬೋಧಿಸಿ ಹೇಳುತ್ತಾರೆ: "ಅಹ್ಮದ್ ರಝಾರವರ ಉನ್ನತ ಅಂತಸ್ತಿನ ಬಗ್ಗೆ ನಿನಗೇನು ಗೊತ್ತು? ನೀನು ಹೋಗಿ ಹಿಂದುಗಳ ಕೊಳಕು ಲಂಗೋಟಿಯನ್ನು ಮೂಸು. ಹಣವೇ ನಿನ್ನ ಪ್ರವಾದಿ, ಹಣವೇ ನಿನ್ನ ದೇವನು, ಯಾರು ಸ್ವಲ್ಪ ಅದನ್ನು ತೋರಿಸಿದರೋ ಅವರು ನಿನ್ನ ಪಾರ್ಟಿ. ನೀನು ನಿನ್ನ ಜೀವಿತವನ್ನು ಅವಿಶ್ವಾಸದೊಂದಿಗೆ ಕಳೆದಿರುವೆ. ಖತ್ರಿಯಾದ ನೀನು ಮುಸ್ಲಿಮರ ಜೊತೆಗೂಡಿದುದಾದರೂ ಯಾವಾಗ? ನಮ್ರೂದನಾದ ನಿನಗೆ ದೇವಸ್ತುತಿ ತಿಳಿಯುವುದಾದರೂ ಹೇಗೆ? ನೀನು ಎಲ್ಲಿಗಾದರೂ ಹಿಂದುಗಳ ಜೊತೆ ಹೋಗು. ಹರಿ ಹರಿ ಎಂದು ಪೂಜಿಸು."

ಬರೇಲ್ವಿ ಮತ್ತು ದೇವಬಂದಿ ಮತಪಂಡಿತರ ಪರಸ್ಪರ ದೋಷಾರೋಪಣೆಯ ಒಂದು ದೀರ್ಘ ಸರಪಳಿಯೇ ಇದೆ. ಅವರು ಪ್ರಯೋಗಿಸುವ ಭಾಷೆ ಅಸಭ್ಯವಾಗಿದ್ದು ಬಹಳ ಅಸಹ್ಯವಾಗಿರುತ್ತದೆ. ಆದರೆ ಅವರ ಹೇಳಿಕೆಗಳನ್ನು ಓದುವುದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಈ ಮತಪಂಡಿತರು ಪರಸ್ಪರ ಕಾಫಿರ್ ಎಂದು ಹೇಳುವುದು ಕೋಪಾವಿಷ್ಟರಾಗಿ ಪರಸ್ಪರರನ್ನು ಕಾಣುವುದರಿಂದಾಗಿದೆ. ಅವರ ಕೋಪವು ಯಾವ ಕಡೆಗೆ ತಿರುಗುತ್ತದೆಯೋ ಆ ಕಡೆ ಇರುವ ವ್ಯಕ್ತಿ ಅಥವಾ ಸಂಘಟನೆ ಕಾಫಿರ್ ಮತ್ತು ವಧಾರ್ಹವಾಗುತ್ತದೆ. 1953ರಲ್ಲಿ ಪಾಕಿಸ್ತಾನದ ಪಂಜಾಬ್ ಗಲಭೆಗಳ ಸಂದರ್ಭದಲ್ಲಿ ಅಹ್ಮದಿಯರ ವಿರುದ್ಧ ಬರೇಲ್ವಿಗಳು ಮತ್ತು ದೇವಬಂದಿಗಳು ಒಗ್ಗೂಡಿ ಯಾವ ದೋಷಾರೋಪ ಹೊರಿಸಿ ಜನರ ಭಾವನೆಗಳನ್ನು ಅಹ್ಮದಿಯರ ವಿರುದ್ಧ ರೊಚ್ಚಿಗೆಬ್ಬಿಸಿದ್ದರೋ ಅಂತಹದೇ ದೋಷಾರೋಪಗಳನ್ನು ಅವರು ಪರಸ್ಪರ ಹೊರಿಸುತ್ತಿದ್ದಾರೆ.

ಅಹ್ಮದಿಯರ ಮೇಲೆ ಅವರು ಹೊರಿಸಿದ ದೋಷಾರೋಪಗಳು ಇವುಗಳಾಗಿವೆ:

1) ಅಹ್ಮದಿಯರು ಖತ್‌ಮೆನುಬುವ್ವತನ್ನು ನಿರಾಕರಿಸುತ್ತಾರೆ.
2) ಅಹ್ಮದಿಯರು ಪ್ರವಾದಿಯವರನ್ನು(ಸ) ಅಪಮಾನಿಸುತ್ತಾರೆ.
3) ಅಹ್ಮದಿಯರು ಬ್ರಿಟಿಷರ ಬೆಂಬಲಿಗರಾಗಿದ್ದಾರೆ.
4) ಅಹ್ಮದಿಯರು ಪಾಕಿಸ್ತಾನದ ವಿರೋಧಿಗಳಾಗಿದ್ದಾರೆ.
5) ಅಹ್ಮದಿಯರು ಜಿಹಾದಿಗೆ ವಿರುದ್ಧವಾಗಿದ್ದಾರೆ.
6) ಅಹ್ಮದಿಯರು ಮುಸ್ಲಿಮೇತರರೊಂದಿಗೆ ಸಹಕರಿಸುತ್ತಾರೆ.
7) ಅಹ್ಮದಿಯತ್ ಧರ್ಮದ ಹೆಸರಿನಲ್ಲಿ ಒಂದು ತಂತ್ರವಾಗಿದೆ.

ಬರೇಲ್ವಿಗಳು ಮತ್ತು ದೇವಬಂದಿಗಳು ಪ್ರವಾದಿಯವರನ್ನು(ಸ) ಅಪಮಾನಿಸುತ್ತಾರೆಂದು ಪರಸ್ಪರ ದೋಷಾರೋಪ ಮಾಡುತ್ತಾ ಇದ್ದಾರೆ. ನಾವು ಈ ಮೊದಲೇ ಬರೆದಿರುವಂತೆ ಜಮಾಅತೆ ಇಸ್ಲಾಮಿಗಳು ಅಹ್ಲೆಖುರ್‌ಆನ್ ವಿಭಾಗದವರನ್ನು ಅಹ್ಮದಿಯರಿಗಿಂತ ಕೆಟ್ಟವರೆಂದು ಹೇಳುತ್ತಾರೆ. ಶಿಯಾ ಪಂಥದ ಜನರನ್ನೂ ಪ್ರವಾದಿಯವರ(ಸ) ನಿಂದಕರೆಂದು ಆರೋಪಿಸಲಾಗುತ್ತಿದೆ. ಅಲಿಯವರು(ರ) ಪ್ರವಾದಿಯವರ(ಸ) ಪ್ರವಾದಿತ್ವದಲ್ಲಿ ಭಾಗೀದಾರರಾಗಿದ್ದರೆಂದು ಶಿಯಾ ಪಂಥದವರು ನಂಬುತ್ತಾರೆಂದು ಹೇಳಲಾಗುತ್ತದೆ.

ಕೆನಡದ ವಿದ್ವಾಂಸ ವಿಲ್‌ಫ್ರೆಡ್ ಕಾಂಟ್‌ವೆಲ್ ಸ್ಮಿತ್ ಭಾರತ ಮತ್ತು ಪಾಕಿಸ್ತಾನವನ್ನು ಸಂದರ್ಶಿಸಿ ಮುಸ್ಲಿಮ್ ಸಮಾಜವನ್ನು ಸಮೀಪದಿಂದ ವೀಕ್ಷಿಸಿ ಈ ಎರಡು ದೇಶಗಳ ಮುಸ್ಲಿಮರು "ತೀವ್ರವಾಗಿ ಉರಿಯುತ್ತಿರುವ ಉನ್ಮತ್ತಾಭಿಮಾನದಿಂದ" ತುಂಬಿರುವರು ಎಂದು ಆರೋಪಿಸಿರುವರು. ಅವರು ತನ್ನ "ಇಸ್ಲಾಮ್ ಇನ್ ಮೋಡರ್ನ್ ಇಂಡಿಯಾ" ಎಂಬ ಪುಸ್ತಕದಲ್ಲಿ ಹೀಗೆ ಬರೆದಿರುತ್ತಾರೆ:

"ಅಲ್ಲಾಹನ ಮೇಲೆ ಆಕ್ರಮಣ ಮಾಡಲು ಮುಸ್ಲಿಮರು ಬಿಡುತ್ತಾರೆ. ಇಲ್ಲಿ ನಾಸ್ತಿಕರೂ ನಾಸ್ತಿಕವಾದ ಪ್ರಚಾರಕ ಸಾಹಿತ್ಯಗಳೂ ಇವೆ. ವಿಚಾರವಾದಿಗಳ ಸಂಘಟನೆಗಳೂ ಇವೆ. ಆದರೆ ಮುಹಮ್ಮದರನ್ನು ಹೀನಾಯಿಸಿದರೆ ಮುಸ್ಲಿಮ್ ಸಮುದಾಯದ ಉದಾರ ಮತವಾದಿಗಳಲ್ಲಿ ಸಹ ಧರ್ಮಾಂಧತೆಯು ತೀವ್ರವಾಗಿ ಬಡೆದೆಬ್ಬಿಸಲ್ಪಡುತ್ತದೆ."

ಇದು ಮುಸ್ಲಿಮರ ಭಾವನೆಗಳ ಕುರಿತು ತಪ್ಪಾಗಿ ಮಾಡಲಾದ ಮೌಲ್ಯಮಾಪನವಾಗಿದೆ. ಪ್ರೊಫೆಸರ್ ಸ್ಮಿತ್‌ರವರು ಎಲ್ಲಾ ಮುಸ್ಲಿಮರಿಗೆ ಅನ್ವಯಿಸುವಂತೆ ಬರೆದಿದ್ದಾರೆ. ಆದರೆ ಇದು ಮುಲ್ಲಾಗಳಿಗೆ ಮತ್ತು ರಾಜಕೀಯ ಮುಂದಾಳುಗಳಿಗೆ ಅನ್ವಯಿಸುತ್ತದೆ. "ಹಝ್ರತ್ ಮುಹಮ್ಮದ್ ಪೈಗಂಬರರ(ಸ) ವಿರುದ್ಧ ನಿಜವಾದ ಅಥವಾ ಊಹಿಸಲಾದ ಅಪಮಾನದಿಂದ ಮುಸ್ಲಿಮರು ಪ್ರಚೋದಿತರಾಗುವ ಹಾಗೆ ಬೇರೆ ಯಾವುದರಿಂದಲೂ ಪ್ರಚೋದಿತರಾಗುವುದಿಲ್ಲವೆಂದು ಅವರು (ಮತ ಪಂಡಿತರು) ಅರಿತುಕೊಂಡಿರುವರು." (Munir Commission Report, page 257)

ಮುಸ್ಲಿಮರಲ್ಲಿ ಶ್ರೀಮಂತರು ಮತ್ತು ಬಡವರು, ಬುದ್ಧಿಜೀವಿಗಳು ಮತ್ತು ಅವಿದ್ಯಾವಂತರು, ಭಕ್ತರು ಮತ್ತು ಭಕ್ತಿಹೀನರು ಇವರೆಲ್ಲರೂ ಪ್ರವಾದಿಯವರನ್ನು(ಸ) ಪ್ರೀತಿಸುವುದರಲ್ಲಿ ಒಗ್ಗೂಡಿದ್ದಾರೆಂಬುದು ನಿಸ್ಸಂದೇಹಕರವಾದ ಸಂಗತಿಯಾಗಿದೆ. ಅವರು ತಮ್ಮ ಧಾರ್ಮಿಕ ಜೀವಿತದಲ್ಲಿ ಫನಾಫಿರ್ರಸೂಲ್ (ಪ್ರವಾದಿಯಲ್ಲಿ ಲೀನರಾಗುವುದು) ತಾವು ತಲಪಬಹುದಾದ ಶಿಖರವೆಂದು ಗಣಿಸುತ್ತಾರೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅತ್ಯಂತ ಎತ್ತರದ ಅನುಭವ ಮಿಅ್‌ರಾಜ್ ಆಗಿದೆ ಎಂದು ಮುಸ್ಲಿಮರು ನಂಬುತ್ತಾರೆ. ಆಗ ಅವರು ದೇವದೂತರಿಂದ ಸುತ್ತುವರಿಯಲ್ಪಟ್ಟು ದೇವನ ಸನ್ನಿಧಿಗೆ ಒಬ್ಬನೇ ಏರಿ ಹೋದರು. ಅವರು ತಲಪಿದ ಸ್ಥಳಕ್ಕೆ ದೇವದೂತ ಜಿಬ್ರಾಯಿಲ್ ಸಹ ತಲಪಲು ಸಾಧ್ಯವಿರಲಿಲ್ಲ.

ರಾಜಕೀಯ ಅಧಿಕಾರಮೋಹಿಗಳಾದ ಮುಸ್ಲಿಮ್ ನಾಯಕರು "ಮುಹಮ್ಮದ್ ಅಲ್ಲಾಹನ ಸಂದೇಶವಾಹಕರು" ಎಂಬುದು ಮುಸ್ಲಿಮರ ಧಾರ್ಮಿಕ ನಂಬಿಕೆಯ ಘೋಷಣೆಯ ಎರಡನೆಯ ಭಾಗ ಮಾತ್ರವಾಗಿದೆ

ಎಂಬುದನ್ನು ಮರೆತು ಬಿಡುತ್ತಾರೆ. ಅದರ ಮೊದಲ ಭಾಗ "ಅಲ್ಲಾಹನ ಹೊರತು ಅನ್ಯ ದೇವರಿಲ್ಲ" ಎಂದಾಗಿದೆ.

ಪ್ರೇಮ ಮತ್ತು ಆದರವನ್ನು ಅಳೆಯಬಲ್ಲ ಅಳತೆಗೋಲು ಯಾವುದೂ ಇಲ್ಲ. ಪ್ರೇಮಿಗಳು ಮತ್ತು ಸಂತರು ತಮಗೆ ದೇವ ನೊಂದಿಗಿರುವ ಪ್ರೇಮವನ್ನು ಸೂಚಿಸುವ ಪದ್ಯಗಳ ಸಮುಚ್ಚಯಗಳ ನಂತರ ಸಮುಚ್ಚಯಗಳನ್ನು ಬರೆಯುತ್ತಾ ತಮ್ಮ ಜೀವಿತವನ್ನು ಕಳೆದರು. ಅವರ ಭಾವನೆಗಳು ಎಷ್ಟು ತೀವ್ರವಾಗಿತ್ತೆಂದರೆ ಭಾಷೆ ಅವುಗಳನ್ನು ನಿಖರವಾಗಿ ಸೂಚಿಸಲಾರದಾಗಿದ್ದವು. ಮುಲ್ಲಾಗಳು ಆ ಹಾಡುಗಳನ್ನು ಓದುತ್ತಾರೆ; ಆದರೆ ಮನವರಿಕೆಮಾಡಿಕೊಳ್ಳುವುದಿಲ್ಲ. ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ಗುಲಾಮ್ ಅಹ್ಮದ್ ಎಂದು ಹೆಸರಿಸಿದುದು ಆಕಸ್ಮಿಕವಾಗಿರಲಿಲ್ಲ. ಅದು ಎಂತಹ ಗೌರವಾನ್ವಿತ ಹೆಸರಾಗಿದೆ! ಅವರ ಅಂತಸ್ಸನ್ನು ಸೂಚಿಸುವ ನಾಮವಾಗಿದೆ ಅದು!

ಈ ಕೆಳಗೆ ಉಲ್ಲೇಖಿಸಲಾಗುವ ಮೂರು ಪದ್ಯಗಳ ಚರಣಗಳಲ್ಲಿ ಅವರು ತಮ್ಮನ್ನು ಪ್ರವಾದಿಯವರನ್ನು(ಸ) ಅಪಮಾನಿಸಿದವನೆಂದು ಶತ್ರುಗಳು ಮಾಡುವ ಆಕ್ಷೇಪಕ್ಕೆ ಉತ್ತರಿಸುತ್ತಾರೆ ಮತ್ತು ಅದರೊಂದಿಗೆ ಮುಸ್ಲಿಮರು ಅಲ್ಲಾಹನ ಗೌರವವನ್ನು ಕಡೆಗಣಿಸುತ್ತಾರೆಂಬ ಕ್ಯಾಂಟ್‌ವೆಲ್ ಸ್ಮಿತ್‌ನಂತಹ ವಿಮರ್ಶಕರ ಆರೋಪಗಳಿಗೆ ಉತ್ತರ ನೀಡುತ್ತಾರೆ. ಇಝಾಲಯೆ ಅವ್‌ಹಾಮ್ ಎಂಬ ಗ್ರಂಥದಲ್ಲಿ ಅವರು ಹೇಳುತ್ತಾರೆ:

"ಅಲ್ಲಾಹನನ್ನು ಪ್ರೀತಿಸಿದ ನಂತರ ನಾನು ಮುಹಮ್ಮದ್‌ರವರ(ಸ) ಪ್ರೇಮದಿಂದ ಮದೋನ್ಮತ್ತನಾಗಿದ್ದೇನೆ. ಇದು ಕುಫ್ರ್ (ಅವಿಶ್ವಾಸ) ಆಗಿದ್ದರೆ ಅಲ್ಲಾಹನಾಣೆ ನಾನು ಕಠಿಣ ಕಾಫಿರ್ (ಅವಿಶ್ವಾಸಿ) ಆಗಿದ್ದೇನೆ."

ಆಯಿನಯೆ ಕಮಾಲಾತೆ ಇಸ್ಲಾಮ್ ಎಂಬ ಗ್ರಂಥದಲ್ಲಿ ಅವರು ಹೀಗೆ ಹೇಳುತ್ತಾರೆ:

"ನನ್ನ ಪ್ರೇಮಕ್ಕೆ ಪಾತ್ರನಾದವನೇ, ನನಗೆ ಸಹಾಯಕನಾದವನೇ, ನನ್ನ ಜೀವಿತವು ನಿನ್ನ ಮಾರ್ಗದಲ್ಲಿ ಬಲಿದಾನವಾಗಿ ಅರ್ಪಿಸಲ್ಪಡಲಿ. ನೀನು ನಿನ್ನ ದಾಸನಾದ ನನ್ನ ಕೋರಿಕೆಗಳನ್ನು ಕಡೆಗಣಿಸಿದುದಾದರೂ ಎಂದು?

"ನಿನ್ನನ್ನು ಪ್ರೀತಿಸುವವರು ನಿನ್ನ ಸನ್ನಿಧಿಯಲ್ಲಿ ತಲೆಗಡಿಯಲ್ಪಡ ಬೇಕೆಂದಿದ್ದರೆ ನಾನು ಹಾಗೆ ಮಾಡುವವರಲ್ಲಿ ಮೊದಲಿಗನಾಗಲು ಬಯಸುತ್ತೇನೆ."

ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಖಾತಮುನ್ನಬಿಯ್ಯೀನ್ ಆಗಿರುವರೆಂದೂ ಅವರು ಪ್ರವಾದಿಗಳಲ್ಲಿ ಸರ್ವೋನ್ನತರಾಗಿರುವರೆಂದೂ ಅಹ್ಮದಿಯಾ ಜಮಾಅತಿನ ಸ್ಥಾಪಕರು ಸ್ಪಷ್ಟವಾಗಿಯೂ ಪ್ರಾಮಾಣಿಕ ವಾಗಿಯೂ ಹೀಗೆ ಹೇಳಿದ್ದಾರೆ:

"ನಮ್ಮ ಧರ್ಮದ ಮೂಲಾಧಾರ ಮತ್ತು ನಂಬಿಕೆಯ ಸಂಕ್ಷೇಪ ರೂಪ: ಅಲ್ಲಾಹನ ಹೊರತು ಅನ್ಯ ದೇವನಿಲ್ಲ; ಮುಹಮ್ಮದ್ ಅವನ ಸಂದೇಶವಾಹಕ ಎಂದಾಗಿದೆ. ನಾವು ಇಹಲೋಕದಲ್ಲಿ ಹೊಂದಿರುವ ವಿಶ್ವಾಸ ಮತ್ತು ಇಹಲೋಕದಿಂದ ಅಲ್ಲಾಹನ ಅನುಗ್ರಹದೊಂದಿಗೆ ಪರಲೋಕಕ್ಕೆ ಹೊರಡುವಾಗ ಇರುವ ನಮ್ಮ ವಿಶ್ವಾಸ ನಮ್ಮ ನಾಯಕ, ನಮ್ಮ ಯಜಮಾನ ಮುಹಮ್ಮದ್(ಸ) ಖಾತಮುನ್ನಬಿಯ್ಯೀನ್ ಮತ್ತು ಖೈರುಲ್ ಮುರ್‌ಸಲೀನ್ (ಪ್ರವಾದಿಗಳಲ್ಲಿ ಶ್ರೇಷ್ಠ) ಎಂದಾಗಿರುವುದು." (ಇಝಾಲಯೆ ಅವ್‌ಹಾಮ್: ಪುಟ 138)

"ನಮ್ಮ ನಾಯಕ, ನಮ್ಮ ಯಜಮಾನ, ಖಾತಮುನ್ನಬಿಯ್ಯೀನ್ (ಪ್ರವಾದಿಗಳ ಮುದ್ರೆ) ಮುಹಮ್ಮದ್ ಮುಸ್ತಫಾರವರಿಗೆ(ಸ) ದೊರಕಿರದಂತಹ ಯಾವುದೇ ಪದವಿಯೂ ಬಾಕಿಯಿಲ್ಲ. ಅವರಿಗೆ ದೊರೆತುದು ಅತ್ಯಂತ ಉನ್ನತ ಪದವಿಯಾಗಿದೆ. ಅದು ಎಂತಹ ಪದವಿಯೆಂದರೆ ಅದು ಅವರಿಗೆ ಮಾತ್ರ ದೊರೆತುದಾಗಿದೆ. ಅದನ್ನು ಸಮೀಪಿಸುವುದು ಯಾರಿಗೂ ಸಾಧ್ಯವಿಲ್ಲ." (ತೌಝೀಹೆ ಮರಾಮ್ – ಪುಟ 23)

ಅಲ್ಲಾಹನ ಕುರಿತು ಮತ್ತು ಅವನ ಸಂದೇಶವಾಹಕ ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಕುರಿತು ಇಂತಹ ಮಹೋನ್ನತ ಭಾವನೆಯನ್ನು ಹೊಂದಿದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ರವರನ್ನು(ಅ) ಮತ್ತು ಅವರ ಅನುಯಾಯಿಗಳನ್ನು "ಮುಸ್ಲಿಮೇತರರು" ಎಂದು ಎಂತಹ ಮುಸ್ಲಿಮ್ ನಾಮಧಾರಿಗಳು ಘೋಷಿಸಿರುವರೆಂದರೆ, ಆ ಮುಸ್ಲಿಮ್ ನಾಮಧಾರಿಗಳನ್ನು ಸರ್ ಮುಹಮ್ಮದ್ ಇಕ್ಬಾಲ್ (1875-1938) ಒಂದು ಉರ್ದು ಪದ್ಯದಲ್ಲಿ ಹೀಗೆ ವರ್ಣಿಸಿದ್ದಾರೆ:

ಕೈಗಳು ಬಲಗುಂದಿವೆ. ಹೃದಯ ಅವಿಶ್ವಾಸದಿಂದ ತುಂಬಿದೆ.
ಈ ಸಮುದಾಯ ಪೈಗಂಬರರಿಗೆ ಅಪಮಾನದಾಯಕವಾಗಿದೆ.
ಮೂರ್ತಿ ಭಂಜಕರು ಹೋದರು; ಮೂರ್ತಿ ನಿರ್ಮಾಪಕರು ಉಳಿದರು.
ಇಬ್ರಾಹೀಮ್ ಅವರ ಪಿತನಾಗಿದ್ದರೂ ಅವರು ಆಝರ್ ಪುತ್ರರಾಗಿದ್ದಾರೆ.
ಹೊಸ ಹೊಸ ಕುಡುಕರು ಹೊಸ ಹೊಸ ಪಾನೀಯಗಳು.
ನಿಮ್ಮ ಕಅ್‌ಬವು ಹೊಸದಾದುದು, ನಿಮ್ಮ ಮೂರ್ತಿಗಳು ಹೊಸದಾದವು.
ನೀವು ಸಹ ಹೊಸದಾಗಿರುವಿರಿ.
ಬೆಳಗ್ಗೆ ನಿದ್ರೆಯಿಂದೇಳುವುದು ನಿಮಗೆಷ್ಟು ಕಷ್ಟಕರ.
ನಮ್ಮೊಂದಿಗೆ ಏನು ಪ್ರೀತಿಯಿದೆ; ಹೌದು ನಿದ್ರೆ ನಿಮಗೆ ಪ್ರಿಯಕರ.
ಸ್ವಾತಂತ್ರ್ಯಪ್ರಿಯರಾದ ನಿಮಗೆ ರಮಝಾನ್ ಭಾರವಾಗಿದೆ.
ನೀವೇ ಹೇಳಿರಿ: ಇದು ನಿಮ್ಮ ವಿಧೇಯತೆಯ ಸಂವಿಧಾನವೇ?
ಧರ್ಮದಿಂದ ಸಮುದಾಯ ಆಗುತ್ತದೆ.
ಧರ್ಮವಿಲ್ಲದಿದ್ದರೆ ನೀವು ಸಹ ಇಲ್ಲ.
ಪರಸ್ಪರ ಗುರುತ್ವಾಕರ್ಷಣೆವಿಲ್ಲದಿದ್ದರೆ ನಕ್ಷತ್ರ ಸಮೂಹಗಳೂ ಇಲ್ಲವಾಗುವುವು.
ಯಾವುದೇ ಕಸುಬು ಅರಿತಿರದ ಜನರು ನೀವಾಗಿದ್ದೀರಿ.
ನಿಮ್ಮ ನಾಡಿನ ಕುರಿತು ಕಾಳಜಿ ಇಲ್ಲದವರು ನೀವಾಗಿದ್ದೀರಿ.
ಸಿಡಿಲು ಮಿಂಚುಗಳು ಬಿಟ್ಟುಹೋಗದ ಕಣಜ ನೀವಾಗಿದ್ದೀರಿ.
ನಿಮ್ಮ ಹಿರಿಯರ ಖಬರಸ್ಥಾನಗಳನ್ನು ಮಾರಾಟಮಾಡುವವರು ನೀವು.
ಗೋರಿಗಳನ್ನು ಮಾರಿ ನೀವು ಒಳ್ಳೆಯ ಹೆಸರು ಗಳಿಸುತ್ತೀರಿ.
ಕಲ್ಲು ಮೂರ್ತಿಗಳು ದೊರೆತರೆ ನೀವು ಅದನ್ನು ಮಾರಾಟ ಮಾಡಲಾರಿರೇನು?
ಲೋಕದಿಂದ ಮುಸ್ಲಿಮರು ನಾಶವಾದರೆಂದು ಬೊಬ್ಬೆ ಇದೆ.
ನಾವು ಹೇಳುತ್ತೇವೆ: ಮುಸ್ಲಿಮರು ಎಲ್ಲಿಯಾದರೂ ಇದ್ದರೇ?
ನೀವು ವೇಷಭೂಷಣದಲ್ಲಿ ಕ್ರೈಸ್ತರಾಗಿದ್ದೀರಿ;
ಸಂಸ್ಕೃತಿಯಲ್ಲಿ ಹಿಂದುಗಳು.
ಈ ಮುಸ್ಲಿಮರನ್ನು ನೋಡಿ ಯಹೂದಿಗಳು ನಾಚಿಕೆ ಹೊಂದಿದರು.
ನೀವು ಸಯ್ಯಿದ್, ಮಿರ್ಝಾ, ಅಫ್‌ಘಾನ್ ಆಗಿದ್ದೀರಿ.
ನೀವು ಎಲ್ಲಾ ಆಗಿದ್ದೀರಿ ಆದರೆ ನೀವು ಮುಸ್ಲಿಮರಾಗಿರುವಿರೋ?
(ಬಾಂಗೆ ದರಾ–ಜವಾಬೆ ಶಿಕ್ವ)

ಇಂದಿನ ಕಾಲದ ಮುಸ್ಲಿಮರು ಯಹೂದಿಯರನ್ನು ನಾಚಿಸುವಂತಹವರಾಗಿದ್ದರೆಂದು ಹೇಳಿದ "ಕವಿ, ದಾರ್ಶನಿಕ, ರಾಜಕೀಯ ಚಿಂತಕ ಮತ್ತು ಇಪ್ಪತ್ತನೆಯ ಶತಮಾನದ ಅತ್ಯಂತ ಗಣ್ಯ ವ್ಯಕ್ತಿ" ಎಂದು ವರ್ಣಿಸಲ್ಪಟ್ಟ ಅಲ್ಲಾಮ ಇಕ್‌ಬಾಲ್‌ರವರು ಮುಸ್ಲಿಮರು ಮತ್ತು ಅಹ್ಮದಿಯರ ಮಧ್ಯೆ ಪ್ರತ್ಯೇಕತೆ ಉಂಟುಮಾಡಲೆತ್ನಿಸಿದರು. 1936ರಲ್ಲಿ ಅವರು ಒಂದು ಬಹಿರಂಗ ಪತ್ರವನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷ ಪಂಡಿತ್ ಜವಾಹರ್‌ಲಾಲ್ ನೆಹ್ರೂರವರಿಗೆ ಬರೆದು ಅಹ್ಮದಿಯರನ್ನು ಮುಸ್ಲಿಮೇತರ ಅಲ್ಪಸಂಖ್ಯಾತರೆಂದು ಘೋಷಿಸಬೇಕೆಂದು ಸೂಚಿಸಿದರು. ಈ ಅಪೇಕ್ಷೆಯನ್ನು ಭಾರತದ ಜಾತ್ಯತೀತ ಸಂವಿಧಾನವು ನಿರಾಕರಿಸಿತು. ಆದರೆ ದೇವಬಂದ್ ಮತ ವಿದ್ವಾಂಸರಿಗೆ ಅದು ಅವರ ಜೀವಿತ ಮತ್ತು ಮರಣದ ಪ್ರಶ್ನೆಯಾಗಿತ್ತು. ಹಿಂದುಗಳು ಅಯೋಧ್ಯೆಯ ಬಾಬರಿ ಮಸ್‌ಜಿದ್ ಧ್ವಂಸಗೊಳಿಸಿ ಅಲ್ಲಿ ಪೋಲೀಸರ ರಕ್ಷಣೆಯೊಂದಿಗೆ ರಾಮಜನ್ಮಭೂಮಿ ದೇವಸ್ಥಾನವನ್ನು ತಾತ್ಕಲಿಕವಾಗಿ ರಚಿಸಿದರು. ಬನಾರಸ್ ಮತ್ತು ಮಥುರಾದ ಮಸ್‌ಜಿದ್‌ಗಳನ್ನೂ ಹಿಂದೂ ದೇವಸ್ಥಾನಗಳಾಗಿ ಮಾಡಲು ಅವರು ಬಯಸುತ್ತಾರೆ. ಮುಸ್ಲಿಮ್ ವೈಯಕ್ತಿಕ ನಿಯಮಗಳನ್ನು ಬದಲಾಯಿಸಲು ಹಲವು ಹಿಂದುಗಳು ಬಯಸುತ್ತಾರೆ.

ದೇವನ ಸಂದೇಶವಾಹಕರನ್ನು ಮತ್ತು ಶಾಂತಿದೂತರನ್ನು ತಿರಸ್ಕರಿಸುವವರಿಗೆ ಹೀಗೆಯೇ ಸಂಭವಿಸುತ್ತದೆ. ಅವರು ಅನೈಕ್ಯದಿಂದಿರುತ್ತಾರೆ ಮತ್ತು ಅವರು ಬಿಗಡಾಯಿಸಲೆತ್ನಿಸಿದ ಶಾಂತಿಯ ಅನುಗ್ರಹಗಳಿಂದ ವಂಚಿತರಾಗುತ್ತಾರೆ. ಅವರು ಹಿಂಸೆಯನ್ನೂ ಭೀಕರವಾದವನ್ನೂ ಬೆಳೆಸುತ್ತಾರೆ.

**(ಮುಂದುವರಿಯುವುದು)**

**ಇಂಗ್ಲಿಷ್‌ನಿಂದ ಭಾಷಾಂತರ: ಎ. ಅಬ್ದುಸ್ಸಲಾಮ್**


# ಇಸ್ಲಾಂ ಧರ್ಮ ತತ್ವಜ್ಞಾನ

ಗ್ರಂಥಕರ್ತ : ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

***ಈ ಐದು ಪ್ರಶ್ನೆಗಳಿಗೆ ಇಸ್ಲಾಮಿಕ ದೃಷ್ಟಿಯ ಉತ್ತರ :***

1. ಮಾನವನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು.
2. ಮಾನವನ ಮರಣಾನಂತರದ ಸ್ಥಿತಿ.
3. ಮಾನವನ ಐಹಿಕ ಜೀವಿತೋದ್ದೇಶ ಮತ್ತು ಅದನ್ನು ಗಳಿಸುವ ಮಾರ್ಗಗಳು.
4. ಧರ್ಮ ನಿಯಮಾನುಸರಣೆ ಇಹಪರ ಜೀವಿತದಲ್ಲಿ ಉಂಟುಮಾಡುವ ಫಲಗಳು.
5. ದೈವಿಕ ಜ್ಞಾನ ಸಿದ್ಧಿಯ ಮಾರ್ಗಗಳು.

ಬೆಲೆ : ರೂ. 25/-

# ಸನ್ಮಾರ್ಗ ದರ್ಶಕ

ಗ್ರಂಥಕರ್ತ : ಹಝ್ರತ್ ಮಿರ್ಝಾ ಬಶೀರ್ ಅಹ್ಮದ್

**ಅಹ್ಮದಿಯಾ ಜಮಾಅತಿನ ವಿಶ್ವಾಸಾದರ್ಶಗಳ ಬಗ್ಗೆ ತಿಳಿಯಲು ಒಂದು ಉತ್ತಮ ಕೃತಿ.**

ಬೆಲೆ : ರೂ. 65/-

ಮೇಲಿನ ಎರಡೂ ಪುಸ್ತಕಗಳಿಗೋಸ್ಕರ ಸಂಪರ್ಕಿಸಿರಿ

**Ahmaddiya Muslim Mission**
**No. 1, 3rd Cross Road,**
**Wilson Garden**
**Bangalore - 560 027**

ದೇವಾಸ್ತಿತ್ವವನ್ನು ರುಜುಗೊಳಿಸುವ, ಧರ್ಮಗಳ ಆವಶ್ಯಕತೆಯನ್ನು ಸಾರುವ

ಆಧ್ಯಾತ್ಮಿಕ ಜ್ಞಾನವನ್ನು ಜನರ ಹೃದಯಗಳಲ್ಲಿ ಮೂಡಿಸುವ

ಒಂದು ಉತ್ಕೃಷ್ಟ ತ್ರೈಮಾಸ ಪತ್ರಿಕೆ

# ಯುಗರಶ್ಮಿ

ಯಥಾರ್ಥ ಇಸ್ಲಾಂ ಮತ್ತು ಅಹ್ಮದಿಯಾ ಸಂಘಟನೆಯ ಸೇವೆಗಾಗಿ

ಮೀಸಲಾಗಿರಿಸಿದ "ಯುಗರಶ್ಮಿ" ತ್ರೈಮಾಸಿಕವು ವಿವಿಧ ಧರ್ಮಗಳ ತುಲನಾತ್ಮಕ

ಪಠನಾಸಕ್ತರಿಗೆ ಒಂದು ಉತ್ತಮ ಪತ್ರಿಕೆಯಾಗಿದೆ.

ದೇವಾಸ್ತಿತ್ವ, ಇತರ ಧರ್ಮ ಮತ್ತು ಧರ್ಮಾಚಾರ್ಯರ ಕುರಿತು ಇಸ್ಲಾಮಿನ ವೀಕ್ಷಣೆ, ಕೋಮು ಸೌಹಾರ್ದದ ಮಾರ್ಗಗಳು, ಇಸ್ಲಾಮಿನ ತತ್ವೋಪದೇಶಗಳು, ಮಾನವ ಕುಲದ ಏಳಿಗೆಗೆ ಇಸ್ಲಾಮಿನ ಕೊಡುಗೆ, ಇಂದಿನ ಆಧ್ಯಾತ್ಮಿಕ ಅಧಃಪತನ ಮತ್ತು ಪುನರುಜ್ಜೀವನ ಮಾರ್ಗಗಳು ಮೊದಲಾದ ವಿಷಯಗಳ ಕುರಿತು ಲೇಖನ ಪರಮಾರ್ಶೆಗಳನ್ನು ಈ ಪತ್ರಿಕೆಯ ಪ್ರತಿ ಸಂಚಿಕೆಯಲ್ಲೂ ಕಾಣಬಹುದು.

| | | |
|---|---|---|
| ಬಿಡಿ ಪ್ರತಿ : ರೂ. 5.00 | ವಾರ್ಷಿಕ ಚಂದಾ : ರೂ. 20.00 | ಅಂಚೆ ಮೂಲಕ : ರೂ. 30.00 |

ಸಂಪರ್ಕಿಸಿರಿ :

**The Editor**

## YUGARASHMI

**Kannada Quarterly**
**10-23-1008/1, 1st Floor, Ansari Road,**
**Bunder, Mangalore -575 001**


**"ಇನ್‌ಸಾನಿಯತ್ ಜಿಂದಾಬಾದ್"**

**"ಮಾನವೀಯತೆ ಚಿರಕಾಲ ಬಾಳಲಿ"**

**LOVE FOR ALL**
**HATRED FOR NONE**

**ಎಲ್ಲರೊಡನೆ ಸ್ನೇಹ**
**ಯಾರೊಡನೆಯೂ ದ್ವೇಷವಿಲ್ಲ**

# ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿ 2008

## ಹಝ್ರತ್ ಖಲೀಫತುಲ್ ಮಸೀಹ್ V ನಿರ್ದೇಶಿಸಿದ ಪ್ರಾರ್ಥನೆಗಳು ಮತ್ತು ಕರ್ಮಾನುಷ್ಠಾನಗಳು

1. ಪ್ರತಿ ಮಾಸ ಒಂದು ನಫಲ್ ಉಪವಾಸ ಅನುಷ್ಠಿಸಬೇಕು.

2. ಪ್ರತಿ ದಿನ ಎರಡು ರಕ್‌ಅತ್ ನಫಲ್ ನಮಾಝ್ ಮಾಡಬೇಕು.

3. ಪ್ರತಿ ದಿನ ಏಳು ಸಲ ಸೂರಃ ಫಾತಿಹ ಅರ್ಥಗ್ರಹಿಸಿಕೊಂಡು ಓದಬೇಕು.

☆ بِسْمِ اللّٰهِ الرَّحْمٰنِ الرَّحِيْمِ۔ اَلْحَمْدُ لِلّٰهِ رَبِّ الْعٰلَمِيْنَ ۔اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔اِيَّاكَ نَعْبُدُ وَاِيَّاكَ نَسْتَعِيْنُ۔
اِهْدِ نَاالصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ ۔غَيْرِ الْمَغْضُوْبِ عَلَيْهِمْ وَلَاالضَّآلِّيْنَ۔

ಅರ್ಥ: ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ. ಎಲ್ಲ ಸ್ತುತಿ ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ. ಅವನು ಪರಮ ದಯಾವಂತನೂ ಕಾರುಣ್ಯನಿಧಿಯೂ ನ್ಯಾಯ ತೀರ್ಮಾನ ದಿನದ ಅಧಿಪತಿಯೂ ಆಗಿದ್ದಾನೆ. (ಓ ದೇವಾ,) ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ. ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು. ನಿನ್ನ ಅನುಗ್ರಹಕ್ಕೆ ಪಾತ್ರರಾದವರ, ಕ್ರೋಧಕ್ಕೆ ಈಡಾಗದವರ ಮತ್ತು ದಾರಿತಪ್ಪದವರ ಮಾರ್ಗದಲ್ಲಿ.

4. ☆ اَللّٰهُمَّ صَلِّ عَلٰى مُحَمَّدٍ وَّ عَلٰى اٰلِ مُحَمَّدٍ كَمَا صَلَّيْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ حَمِيْدٌ مَّجِيْدٌ ۔
☆ اَللّٰهُمَّ بَارِكْ عَلٰى مُحَمَّدٍ وَّعَلٰى اٰلِ مُحَمَّدٍ كَمَا بَارَكْتَ عَلٰى اِبْرَاهِيْمَ وَعَلٰى اٰلِ اِبْرَاهِيْمَ اِنَّكَ حَمِيْدٌ مَّجِيْدٌ۔

ಅರ್ಥ: ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ವಿಶೇಷ ಕರುಣೆ ದಯಪಾಲಿಸು – ಹಝ್ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ನೀನು ವಿಶೇಷ ಕರುಣೆ ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಮಹತ್ವವಂತನೂ ಆಗಿರುವೆ. ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ಅನುಗ್ರಹವನ್ನು ದಯಪಾಲಿಸು – ಹಝ್ರತ್ ಇಬ್ರಾಹೀಮರಿಗೂ ಅವರ ಕುಟುಂಬದವರಿಗೂ ಅನುಗ್ರಹ ದಯಪಾಲಿಸಿದಂತೆ. ನಿಶ್ಚಯವಾಗಿಯೂ ನೀನು ಸ್ತುತ್ಯರ್ಹನೂ ಮಹತ್ವವಂತನೂ ಆಗಿರುವೆ. (ದಿನಂಪ್ರತಿ 33 ಸಲ)

5. ☆ رَبَّنَا لَا تُزِغْ قُلُوْبَنَا بَعْدَاِذْ هَدَيْتَنَا وَهَبْ لَنَامِنْ لَّدُنْكَ رَحْمَةً ۔اِنَّكَ اَنْتَ الْوَهَّابُ۔

ಅರ್ಥ: ನಮ್ಮ ಪ್ರಭೂ ನೀನು ನಮಗೆ ಮಾರ್ಗದರ್ಶನ ಮಾಡಿದ ಬಳಿಕ ನಮ್ಮ ಹೃದಯಗಳಲ್ಲಿ ವಕ್ರಬುದ್ಧಿಯುಂಟಾಗುವಂತೆ ಮಾಡದಿರು. ನೀನು ನಮಗೆ ನಿನ್ನಿಂದ ಕರುಣೆಯನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ನೀನೇ ಅತಿ ದೊಡ್ಡ ಅನುಗ್ರಹದಾತ. (ದಿನಂಪ್ರತಿ 33 ಸಲ)

6. ☆ رَبَّنَا اَفْرِغْ عَلَيْنَا صَبْرًا وَّثَبِّتْ اَقْدَامَنَا وَانْصُرْنَا عَلَى الْقَوْمِ الْكٰفِرِيْنَ۔

ಅರ್ಥ: ನಮ್ಮ ಪ್ರಭೂ ನೀನು ನಮಗೆ ಸ್ಥೈರ್ಯವನ್ನು ಕರುಣಿಸು. ನಮ್ಮ ಪಾದಗಳನ್ನು ಸ್ಥಿರಗೊಳಿಸಿ ಅವಿಶ್ವಾಸಿಗಳಿಗೆ ವಿರುದ್ಧವಾಗಿ ನಮಗೆ ನೆರವು ನೀಡು. (ದಿನಂಪ್ರತಿ 11 ಸಲ)

7. ☆ اَللّٰهُمَّ اِنَّا نَجْعَلُكَ فِيْ نُحُوْرِهِمْ وَ نَعُوْذُبِكَ مِنْ شُرُوْرِهِمْ ۔

ಅರ್ಥ: ಓ ಅಲ್ಲಾಹ್, ಅವರನ್ನು ಎದುರಿಸಲು ನಾವು ನಿನ್ನನ್ನು ಗುರಾಣಿಯನ್ನಾಗಿ ಮಾಡುತ್ತೇವೆ. ಅವರ ಎಲ್ಲಾ ಉಪದ್ರಗಳಿಂದ ಪಾರಾಗಲು ನಿನ್ನ ಅಭಯ ಯಾಚಿಸುತ್ತೇವೆ. (ದಿನಂಪ್ರತಿ 11 ಸಲ)

8. ☆ اَسْتَغْفِرُاللّٰهَ رَبِّيْ مِنْ كُلِّ ذَنْبٍ وَّاَتُوْبُ اِلَيْهِ۔

ಅರ್ಥ: ನನ್ನ ಪ್ರಭುವಾದ ಅಲ್ಲಾಹನೊಡನೆ ನಾನು ನನ್ನ ಎಲ್ಲ ಪಾಪಗಳಿಗೆ ಕ್ಷಮೆಕೋರುತ್ತೇನೆ ಮತ್ತು ನಾನು ಅವನೆಡೆಗೆ ಬಾಗುತ್ತೇನೆ. (ದಿನಂಪ್ರತಿ 33 ಸಲ)

9. ☆ سُبْحَانَ اللّٰهِ وَبِحَمْدِهٖ سُبْحَانَ اللّٰهِ الْعَظِيْمِ۔ اَللّٰهُمَّ صَلِّ عَلٰى مُحَمَّدٍ وَّاٰلِ مُحَمَّدٍ۔

ಅರ್ಥ: ಅಲ್ಲಾಹನು ಪರಿಶುದ್ಧನು ಮತ್ತು ಅವನಿಗೆ ಸಕಲ ಸ್ತುತಿಸ್ತೋತ್ರಗಳು. ಅಲ್ಲಾಹನು ಪರಿಶುದ್ಧನು ಮತ್ತು ಮಹಾಮಹಿಮನು. ಓ ಅಲ್ಲಾಹ್, ನೀನು ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಕುಟುಂಬದವರಿಗೂ ವಿಶೇಷ ಕರುಣೆ ದಯಪಾಲಿಸು. (ದಿನಂಪ್ರತಿ 33 ಸಲ)

Registered with the Registrar of Newspapers for India No. R.N. 27354/75
YUGARASHMI Kannada Quarterly, MARCH - 2009

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ
ಪ್ರಪ್ರಥಮ ಇಸ್ಲಾಮೀ ಟಿ.ವಿ. ಚ್ಯಾನೆಲ್

Muslim International

# ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ ಇಂಟರ್‌ನೇಶನಲ್

# THE FIRST ISLAMIC SATELLITE CHANNEL

**BROADCASTING ROUND THE CLOCK**

| | | | |
|---|---|---|---|
| SATELLITE | : ASIASAT 3S | POLARISATION | : HORIZONTAL |
| POSITION | : 105.5$^0$ EAST | SYMBOL RATE | : 26000 MBPS |
| FREQUENCY | : 3760 MHZ | FEC | : 7/8 |
| MIN. DISH SIZE | : 1.8 METRE | | |

E-Mail : info@alislam.org    Website : http:www.alislam.org/mta.tv




ಅಹ್ಮದಿಯಾ ಮುಸ್ಲಿಂ ಜಮಾಅತಿನ
ವತಿಯಿಂದ ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್
## ಕನ್ನಡ ಭಾಷಾಂತರ

ಬೆಲೆ : ರೂ. 200/-

ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden,
Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Car street, Mangalore - 575 001